ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 13 ಸೋಮವಾರ 2023

ಸಂಪುಟ: 43 | ಸಂಚಿಕೆ: 296 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಎಸ್‌ಎಸ್‌ಎಲ್‌ಸಿ ಪೂರ್ವ ಸಿದ್ಧತಾ ಪರೀಕ್ಷೆಗೂ ಶುಲ್ಕ


ಶಿಕ್ಷಣ ಇಲಾಖೆ ಹೊಸ ನಿಯಮ

ರಾಯಚೂರು, ಫೆ.12– ರಾಜ್ಯದಲ್ಲಿ ಶಿಕ್ಷಣ ಇಲಾಖೆ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದೆಯಾ ಎಂಬ ಅನುಮಾನ ಮೂಡಿವೆ. ಈ ಹಿಂದೆ ಶಿಕ್ಷಣ ಸಚಿವರು ಸರ್ಕಾರಿ ಶಾಲೆ ಮಕ್ಕಳ ಪೋಷಕರಿಂದ 100 ರೂ. ಪಡೆದು ರಶೀದಿ ಕೊಡಬೇಕು ಎಂದು ನೀಡಿದ ಹೇಳಿಕೆ ಭಾರೀ ವಿವಾದ ಸೃಷ್ಟಿಸಿತ್ತು. ಈಗ ಪೂರ್ವ ಸಿದ್ಧತಾ ಪರೀಕ್ಷೆಗೆ ಶುಲ್ಕ ನಿಗದಿ ಮಾಡಿ, ಹಣ ಸಂಗ್ರಹಕ್ಕೆ ಶಿಕ್ಷಣ ಇಲಾಖೆ ಮುಂದಾಗಿದೆ. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ 2022–23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪೂರ್ವ ಸಿದ್ಧತಾ ಪರೀಕ್ಷೆಯನ್ನ ಫೆ.23ರಿಂದ ಮಾರ್ಚ್ 1ರವರೆಗೆ ನಡೆಸಲು ಈಗಾಗಲೇ ವೇಳಾಪಟ್ಟಿ ಪ್ರಕಟಿಸಿದೆ. ಆದರೆ ▶ 8ನೇ ಪುಟಕ್ಕೆ

ಮತ್ತೆ ವಿದ್ಯುತ್ ದರ ಹೆಚ್ಚಳ ಸಾಧ್ಯತೆ

ಇಂದಿನಿಂದ ಸಾರ್ವಜನಿಕ ಅದಾಲತ್

ಬೆಂಗಳೂರು: ರಾಜ್ಯದ ಜನತೆಗೆ ಮತ್ತೆ ವಿದ್ಯುತ್ ದರ ಏರಿಕೆಯ ಶಾಕ್ ಎದುರಾಗಿದೆ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಫೆ.13ರಿಂದ ಮಾರ್ಚ್ 1ರವರೆಗೆ ಸಾರ್ವಜನಿಕ ಅದಾಲತ್ ನಡೆಸಲಿದ್ದು, ಮತ್ತೆ ವಿದ್ಯುತ್ ದರ ಏರಿಕೆಯಾಗುವ ಸಾಧ್ಯತೆ ಇದೆ. ಇದಕ್ಕೆ ಹೊಟೇಲ್ ಉದ್ಯಮಗಳಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ರಾಜ್ಯದ ಜನತೆಗೆ ಮತ್ತೆ ವಿದ್ಯುತ್ ದರ ಏರಿಕೆ ಶಾಕ್ ತಟ್ಟಲಿದೆ. ರಾಜ್ಯದ ವಿದ್ಯುತ್ ವಿತರಣಾ ಕಂಪನಿಗಳು ವಿದ್ಯುತ್ ದರ ಪರಿಷ್ಕರಣೆ ಕೋರಿರುವ ಹಿನ್ನೆಲೆಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ನಾಳೆಯಿಂದ ▶ 8ನೇ ಪುಟಕ್ಕೆ



ಕುಟ್ಟ ಬಳಿ ಹುಲಿ ದಾಳಿ: ಬಾಲಕ ಬಲಿ

ಹುಲಿಗೆ ಕಂಡಲ್ಲಿ ಗುಂಡಿಕ್ಕಲು ಶಾಸಕ ಬೋಪಯ್ಯ ಮನವಿ

ಗೋಣಿಕೊಪ್ಪ, ಫೆ. 12– ಹುಲಿ ದಾಳಿಗೆ ಬಾಲಕ ಬಲಿಯಾದ ಘಟನೆ ಪೊನ್ನಂಪೇಟೆ ತಾಲೂಕು ಕುಟ್ಟ ಸಮೀಪದ ಪಲ್ಲೇರಿ ಎಂಬಲ್ಲಿ ಇಂದು ಸಂಜೆ ನಡೆದಿದೆ.

ಚೂರಿಕಾಡು ಗ್ರಾಮದ ನೆಲ್ಲೀರ ಪೊನ್ನಚ್ಚ ಎಂಬುವರ ತೋಟದ ಮನೆಯಲ್ಲಿ ವಾಸಿಸುತ್ತಿದ್ದ ಪಿರಿಯಾಪಟ್ಟಣ ತಾಲೂಕು ಪಂಚವಳ್ಳಿ ಗ್ರಾಮದ ಚೇತನ್(12) ಹುಲಿ ದಾಳಿಗೆ ಬಲಿಯಾದ ಬಾಲಕನಾಗಿದ್ದು, ಈತ ಇಂದು ಸಂಜೆ 4 ಗಂಟೆ ಸುಮಾರಿನಲ್ಲಿ ತೋಟದಲ್ಲಿ ಆಟವಾಡುತ್ತಿದ್ದ ವೇಳೆ ಹಠಾತ್ತನೆ ದಾಳಿ ನಡೆಸಿದ ಹುಲಿ, ಈತನನ್ನು ಕೊಂದು ಸ್ವಲ್ಪ ದೂರ ಎಳೆದೊಯ್ದಿದೆ. ವಿಷಯ ತಿಳಿಯುತ್ತಿದ್ದಂತೆಯೇ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ದೌಡಾಯಿಸಿದ್ದು, ಸುತ್ತಮುತ್ತಲು ಶೋಧ ನಡೆಸಿದಾಗ ಅರಣ್ಯದಂಚಿನ ಆನೆ ಕಂದಕದಲ್ಲಿ ▶ 8ನೇ ಪುಟಕ್ಕೆ

ಬೆಂಗಳೂರಲ್ಲಿ ಪ್ರಧಾನಿ ಮೋದಿ

●ರಾಜಭವನದಲ್ಲಿ ಗಣ್ಯರ ಜೊತೆ ಸಂವಾದ
●ಇಂದು ಏರೋ ಇಂಡಿಯಾ ಶೋ ಉದ್ಘಾಟನೆ



ಬೆಂಗಳೂರು,ಫೆ.12–ನಾಳೆ (ಸೋಮವಾರ) ಏರೋ ಇಂಡಿಯಾ ಶೋ ಉದ್ಘಾಟಿಸಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ಇಂದು ರಾತ್ರಿ ಬೆಂಗಳೂರಿಗೆ ಆಗಮಿಸಿದರು.

ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಮೋದಿ ಅವರನ್ನು ರಾಜ್ಯಪಾಲ ಗೆಹ್ಲೋಟ್, ಸಿಎಂ ಬೊಮ್ಮಾಯಿ ಸೇರಿ ಹಲವರು ಸ್ವಾಗತಿಸಿದರು. ಪ್ರಧಾನಮಂತ್ರಿಗಳು ರಾಜಭವನದಲ್ಲಿ ವಾಸ್ತವ್ಯ ಹೂಡಿದ್ದು, ಅಲ್ಲಿ ವಿವಿಧ ಕ್ಷೇತ್ರಗಳ ಗಣ್ಯರೊಂದಿಗೆ ಪ್ರಧಾನಿ ಮೋದಿ ಉಪಾಹಾರ ಸೇವಿಸಿ, ಸಂವಾದ ನಡೆಸಿದ್ದಾರೆ.

ಮೋದಿ ಜೊತೆ ಡಿನ್ನರ್ ಸಂವಾದದಲ್ಲಿ ಸಿನಿಮಾ, ಉದ್ಯಮ ಹಾಗೂ ಕ್ರೀಡಾ ವಲಯದ ಗಣ್ಯರಿಗೆ ಆಹ್ವಾನ ನೀಡಲಾಗಿತ್ತು. ನಟ ಯಶ್, ನಟ, ನಿರ್ದೇಶಕ ರಿಷಬ್ ಶೆಟ್ಟಿ, ನಿರ್ಮಾಪಕ ವಿಜಯ್



ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಪ್ರಧಾನಿ ಮೋದಿ ಅವರನ್ನು ರಾಜ್ಯಪಾಲ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ವಾಗತಿಸಿದರು.

ಕಿರಗಂದೂರು, ಅಶ್ವಿನಿ ಪುನೀತ್ ರಾಜ್‌ಕುಮಾರ್, ಶ್ರದ್ಧಾ ಜೈನ್, ನಿರ್ದೇಶಕ ಪ್ರಶಾಂತ್ ನೀಲ್, ಮಾಜಿ ಕ್ರಿಕೆಟಿಗರಾದ ಜಾವಗಲ್ ಶ್ರೀನಾಥ್, ವೆಂಕಟೇಶ್ ಪ್ರಸಾದ್, ಅನಿಲ್ ಕುಂಬ್ಳೆ ದಂಪತಿ, ಮಯಾಂಕ್ ಅಗರ್‌ವಾಲ್, ಮನೀಶ್ ಪಾಂಡೆ, ಉದ್ಯಮ ವಲಯದಿಂದ ನಿತಿನ್ ಕಾಮತ್, ತರುಣ್ ಮೆಹ್ತಾ ಅವರು ಭಾಗಿಯಾಗಿ ಮೋದಿಯವರೊಂದಿಗೆ ಉಪಾಹಾರ ಸೇವಿಸಿ ಸಂವಾದ ನಡೆಸಿದರು. ಇದಕ್ಕೂ ಮುನ್ನ ಇಂದು ಸಂಜೆ ಕೇಂದ್ರ ರಕ್ಷಣಾ ಸಚಿವ ರಾಜನಾಥಸಿಂಗ್ ಅವರು ಬೆಂಗಳೂರಿಗೆ ಆಗಮಿಸಿದರು. ಪ್ರತಿಷ್ಠಿತ ತಾಜ್ ವೆಸ್ಟ್ಎಂಡ್ ಹೋಟೆಲ್‌ನಲ್ಲಿ ಅವರು ಏರೋ ಇಂಡಿಯಾ 2023ರ ಕರ್ಟನ್ ರೈಸರ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ನಾಳೆ ಪ್ರಧಾನಿ ಮೋದಿ ಉದ್ಘಾಟಿಸಲಿರುವ ಏರೋ ಇಂಡಿಯಾ ಕಾರ್ಯಕ್ರಮದಲ್ಲಿ ರಾಜನಾಥ ಸಿಂಗ್ ಭಾಗವಹಿಸಲಿದ್ದಾರೆ.

ಏರೋ ಇಂಡಿಯಾ ಶೋ: ವಿಶ್ವದ ಚಿತ್ತ ಸೆಳೆದಿರುವ ಏರೋ ಇಂಡಿಯಾ ಶೋಗೆ ಸೋಮವಾರ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಬೆಳಗ್ಗೆ 9 ಗಂಟೆಗೆ ಬೆಂಗಳೂರಿನ ಯಲಹಂಕ ವಾಯುನೆಲೆಯಲ್ಲಿ ಚಾಲನೆ ನೀಡಲಿದ್ದಾರೆ. ಬೆಳಗ್ಗೆ 11:30ರವರೆಗೂ ಗಗನದಲ್ಲಿ ಲೋಹದ ಹಕ್ಕಿಗಳ ಚಮತ್ಕಾರ ವೀಕ್ಷಣೆ ಮಾಡಲಿದ್ದಾರೆ. ಬೆಳಗ್ಗೆ 11.45ಕ್ಕೆ ಯಲಹಂಕ ವಾಯುನೆಲೆಯಿಂದಲೇ ತ್ರಿಪುರಾ ಚುನಾವಣಾ ಪ್ರಚಾರಕ್ಕಾಗಿ ಅಗರ್ತಲಾಗೆ ಪ್ರಧಾನಿ ಮೋದಿ ಪಯಣ ಬೆಳೆಸಲಿದ್ದಾರೆ. ಏರೋ ಇಂಡಿಯಾ ಶೋ ಹಿನ್ನೆಲೆಯಲ್ಲಿ ಫೆ.17ರವರೆಗೂ ಕೆಐಎಎಲ್‌ನಲ್ಲಿ ವಿಮಾನಗಳ ಸಂಚಾರದಲ್ಲಿ ವ್ಯತ್ಯಯವಾಗಲಿದೆ. ಹೆಬ್ಬಾಳ ಫ್ಲೈಓವರ್ ಬಂದ್ ಮಾಡಿರುವ ಕಾರಣ ವಿಮಾನ ನಿಲ್ದಾಣ ರಸ್ತೆಯಲ್ಲಿ ವಾಹನ ದಟ್ಟಣೆ ಏರ್ಪಡುತ್ತಿದೆ. ನಾಳೆಯಿಂದ ಏರ್‌ಶೋ ನೋಡಲು ಸಾವಿರಾರು ಜನ ಬರುವ ಹಿನ್ನೆಲೆಯಲ್ಲಿ ವಾಹನದಟ್ಟಣೆ ಇನ್ನಷ್ಟು ಹೆಚ್ಚಲಿದೆ.

ರಾಜ್ಯ ವಿಧಾನಸಭೆ ಚುನಾವಣೆಗೆ ಆಯೋಗ ಸಿದ್ಧತೆ

ಮತಗಟ್ಟೆಗಳ ವರದಿ ಸಿದ್ಧಪಡಿಸಲು ಅಧಿಕಾರಿಗಳಿಗೆ ಸೂಚನೆ



ಕೆಲವು ಕ್ಷೇತ್ರಗಳಲ್ಲಿ ಮತದಾರರಿಗೆ ಆಮಿಷವೊಡ್ಡುವ ಘಟನೆಗಳು ನಡೆಯುತ್ತಿವೆ. ಇಂಥ ಘಟನೆಗಳ ಬಗ್ಗೆ ನಿಗಾ ವಹಿಸಿ, ಕಾಲ ಕಾಲಕ್ಕೆ ವರದಿ ಸಲ್ಲಿಸಿ.
–ಚುನಾವಣಾ ಆಯೋಗ

ಬೆಂಗಳೂರು,ಫೆ.12–ವಿಧಾನಸಭೆ ಚುನಾವಣೆಗೆ ರೂಪುರೇಷೆ ಸಿದ್ಧಪಡಿಸುತ್ತಿರುವ ಚುನಾವಣಾ ಆಯೋಗ, ರಾಜ್ಯದ ವಲಯವಾರು ಜಿಲ್ಲಾಧಿಕಾರಿಗಳು ಹಾಗೂ ಪೊಲೀಸ್ ಅಧಿಕಾರಿಗಳ ಸಭೆ ನಡೆಯಿತು.

ಮೈಸೂರು, ಕಲಬುರಗಿಯಲ್ಲಿ ಒಂದು ಸುತ್ತಿನ ಸಭೆ ನಡೆಸಿರುವ ಆಯೋಗದ ಅಧಿಕಾರಿಗಳು, ಚುನಾವಣೆ ಸಿದ್ಧತೆ ಕೆಲಸ ಆರಂಭಿಸುವಂತೆ ಜಿಲ್ಲಾಧಿಕಾರಿಗಳು, ಎಸ್‌ಪಿಗಳು ಹಾಗೂ ಡಿಸಿಪಿಗಳಿಗೆ ಸೂಚನೆ ನೀಡಿದ್ದಾರೆ. ಬೆಂಗಳೂರು ನಗರ ಜಿಲ್ಲಾಧಿಕಾರಿ, ಬಿಬಿಎಂಪಿ ಕಮಿಷನರ್ ಹಾಗೂ ಕಮಿಷನರೇಟ್ ವ್ಯಾಪ್ತಿಯ ಡಿಸಿಪಿಗಳ ಜೊತೆ ಸಭೆ ನಡೆಸಿದ ಆಯೋಗ, ಮತಗಟ್ಟೆ ಹಂತದಲ್ಲಿ ಕೈಗೊಳ್ಳಬೇಕಾದ ಸಿದ್ಧತೆಗಳ ಬಗ್ಗೆ ಚರ್ಚಿಸಿದರು.

ಸರ್ಕಾರದ ಆಡಳಿತ ಅವಧಿ ಐದು ವರ್ಷ ಮುಗಿಯುವುದಕ್ಕೂ ಆರು ತಿಂಗಳ ಮೊದಲೇ ಚುನಾವಣೆ ಕೆಲಸಗಳನ್ನು ಆರಂಭಿಸಬೇಕೆಂಬ ಮಾರ್ಗಸೂಚಿ ಇದೆ. ಇದರ ಭಾಗವಾಗಿ ಆಯೋಗದ ಅಧಿಕಾರಿಗಳು, ವಲಯವಾರು ಸಭೆಗಳನ್ನು ನಡೆಸುತ್ತಿದ್ದಾರೆ. ಚುನಾವಣೆ ಅಖಾಡ ಸಜ್ಜಾಗುತ್ತಿದ್ದು, ನಮ್ಮ ಇಲಾಖೆಯಿಂದಲೂ ಪೂರ್ವ ತಯಾರಿ ಆರಂಭಿಸಿದ್ದೇವೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು. ▶ 8ನೇ ಪುಟಕ್ಕೆ

ಮೈಸೂರು ರೇಬಿಸ್ ಮುಕ್ತ ಮಾಡಲು ಚಿಂತನೆ

ಮಾರ್ಚ್‌ನಿಂದ ಪಲ್ಸ್ ಪೋಲಿಯೋ ಮಾದರಿಯ ಉಚಿತ ಲಸಿಕೆ ಅಭಿಯಾನ; ಪಶುಸಂಗೋಪನಾ ಇಲಾಖೆ ಸಿದ್ಧತೆ

●ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು, ಫೆ.12– ಬೀದಿನಾಯಿ ಸೇರಿದಂತೆ ವಿವಿಧ ಸಾಕು ಪ್ರಾಣಿಗಳಿಂದ ಜನರಿಗೆ ರೇಬಿಸ್ ಹರಡದಂತೆ ಕಟ್ಟೆಚ್ಚರ ವಹಿಸುವ ನಿಟ್ಟಿನಲ್ಲಿ ಪಶುಸಂಗೋಪನಾ ಇಲಾಖೆ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಮುಂದಾಗಿದ್ದು, ಮಾರ್ಚ್‌ನಿಂದ ವಿಶೇಷ ಅಭಿಯಾನ ನಡೆಸಿ ಒಂದು ಲಕ್ಷ ರೇಬಿಸ್ ಲಸಿಕೆ ಹಾಕಲು ಸಿದ್ಧತೆ ಮಾಡಿಕೊಳ್ಳುತ್ತಿದೆ.

ನಾಯಿ ಕಚ್ಚುವುದರಿಂದ ಜನರಲ್ಲಿ ರೇಬಿಸ್ ಕಾಡುವ ಆತಂಕವಿದ್ದು, ಪ್ರತಿವರ್ಷ ಬೀದಿನಾಯಿ ದಾಳಿಗೆ ಒಳಗಾಗುವವರ ಸಂಖ್ಯೆ ಹೆಚ್ಚಾಗುತ್ತಿದೆ. ಅದರಲ್ಲಿ ಕೆಲವರಿಗೆ ರೇಬಿಸಿ ಬೀತಿ ಕಾಡುತ್ತಿತ್ತು. ಕಳೆದ ಕೆಲವು ವರ್ಷಗಳಿಂದ ಮೈಸೂರಲ್ಲಿ ವರ್ಷಕ್ಕೆ 2–3 ರೇಬಿಸ್ ಪ್ರಕರಣಗಳು ವರದಿಯಾಗುತ್ತಲೇ ಇವೆ. ಇದರಿಂದಾಗಿ ಮುಂಬರುವ ವರ್ಷದಲ್ಲಿ ಮೈಸೂರನ್ನು ರೇಬಿಸ್ ಮುಕ್ತಗೊಳಿಸಲು ಪಶುಸಂಗೋಪನಾ ಇಲಾಖೆ ಪಣ



ತೊಟ್ಟಿದ್ದು, ಬೀದಿನಾಯಿ, ಸಾಕುನಾಯಿ, ಜಾನುವಾರುಗಳಿಗೂ ರೇಬಿಸ್ ಲಸಿಕೆ ನೀಡಲು ಕಾರ್ಯಕ್ರಮ ರೂಪಿಸಿದೆ. ಪಲ್ಸ್ ಪೋಲಿಯೊ ಮಾದರಿಯಲ್ಲಿ ರೇಬಿಸ್ ಲಸಿಕೆಯನ್ನು ಹಾಕಲು ನಿರ್ಧರಿಸಲಾಗಿದ್ದು, ಜಿಲ್ಲೆಯಲ್ಲಿ ಸುಮಾರು ಲಕ್ಷ ಲಸಿಕೆ ▶ 8ನೇ ಪುಟಕ್ಕೆ

ರೇಬಿಸ್ ಕುರಿತಂತೆ ಜನರಲ್ಲಿ ಮೂಡಿರುವ ತಪ್ಪು ಕಲ್ಪನೆಯನ್ನು ಹೋಗಲಾಡಿಸಲು ಕ್ರಮ ಕೈಗೊಳ್ಳಲಾಗಿದೆ. ಲಸಿಕೆ ಹಾಕುವ ಅಭಿಯಾನ ನಡೆಸುವುದರೊಂದಿಗೆ ಸೋಂಕು ಹರಡದಂತೆ ಕಟ್ಟೆಚ್ಚರ ವಹಿಸಲಾಗಿದೆ. ವ್ಯಾಕ್ಸಿನೇಷನ್ ಜೊತೆಗೆ ಜಾಗೃತಿ ಮೂಡಿಸಲಾಗುತ್ತದೆ. ಗ್ರಾಮೀಣ ಪ್ರದೇಶದಲ್ಲೂ ಈ ಅಭಿಯಾನ ನಡೆಸಲು ಉದ್ದೇಶಿಸಿದ್ದು, ಗ್ರಾ.ಪಂ., ತಾ.ಪಂ., ಪುರಸಭೆ ಹಾಗೂ ನಗರಸಭೆಗಳ ಸಹಯೋಗದಲ್ಲಿ ಜಿಲ್ಲಾದ್ಯಂತ ಲಸಿಕಾ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು.

ಇಬ್ಬರು ಬಾಲಕರು ಕಾವೇರಿ ಪಾಲು

ಕುಶಾಲನಗರ ಬಳಿ ದುರಂತ



ಕುಶಾಲನಗರ, ಫೆ.12–ಕಾವೇರಿ ನದಿಯಲ್ಲಿ ಮೀನು ಹಿಡಿಯಲು ತೆರಳಿದ್ದ ಬಾಲಕರಿಬ್ಬರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ತಾಲೂಕಿನ ಕೂಡ್ಲೂರು ಗ್ರಾಮದಲ್ಲಿ ಭಾನುವಾರ ಸಂಭವಿಸಿದೆ.

ಕೂಡ್ಲೂರು ನಿವಾಸಿ, ಕೂಲಿ ಕಾರ್ಮಿಕ ನಾಗರಾಜ್ ಅವರ ಪುತ್ರ ಪೃಥ್ವಿ(7) ಹಾಗೂ ಆಟೋ ಚಾಲಕ ಸತೀಶ್ ಅವರ ಪುತ್ರ ಪ್ರಜ್ವಲ್ (4) ಜಲಸಮಾಧಿಯಾದ ಬಾಲಕರು. ಈ ಬಾಲಕರಿಬ್ಬರು ಭಾನುವಾರ ಬೆಳಗ್ಗೆ ಮೀನು ಹಿಡಿಯಲು ಹೋಗುವುದಾಗಿ ತಿಳಿಸಿ ಊಟದ ಡಬ್ಬಿಯೊಂದಿಗೆ ಕೂಡ್ಲೂರು ಮಾವಿನ ತೋಪು ಮುಂಭಾಗದ ಕಾವೇರಿ ನದಿಗೆ ತೆರಳಿದ್ದರು ಎನ್ನಲಾಗಿದೆ. ಮೀನು ಹಿಡಿಯಲು ನೀರಿಗೆ ಇಳಿದ ಸಂದರ್ಭದಲ್ಲಿ ಇವರಿಬ್ಬರು ಕಾಲು ಜಾರಿ ನೀರು ಪಾಲಾಗಿರಬಹುದು ಎಂದು ಶಂಕಿಸಲಾಗಿದೆ. ಮೀನು ಹಿಡಿಯಲು ಹೋದ ಮಕ್ಕಳು ಇಷ್ಟು ಹೊತ್ತಾದರೂ ಬಾರದಿದ್ದುದ್ದರಿಂದ ▶ 8ನೇ ಪುಟಕ್ಕೆ

ಸ್ವನಿಧಿ ಯೋಜನೆ ಅನುಷ್ಠಾನಕ್ಕೆ ಶಾಸಕ ರಾಮದಾಸ್‌ರಿಂದ ಕೇಂದ್ರ ಸಚಿವರಿಗೆ ಆಹ್ವಾನ



ಮೈಸೂರು, ಫೆ.12 (ಎಂಟಿವೈ)– ಮೈಸೂರಿನ ಕೆ.ಆರ್.ಕ್ಷೇತ್ರದಲ್ಲಿ ಬೀದಿ ಬದಿ ವ್ಯಾಪಾರಿಗಳ ಶ್ರೇಯೋಭಿವೃದ್ಧಿಗಾಗಿ 'ಸ್ವನಿಧಿ' ಯೋಜನೆಯ ಅನುಷ್ಠಾನಕ್ಕಾಗಿ ಆಗಮಿಸುವಂತೆ ಕೇಂದ್ರ ಸರ್ಕಾರದ ರಾಜ್ಯ ಹಣಕಾಸು ಸಚಿವ ಭಗವದ್ ಕಿಶನ್ ರಾವ್ ಕಾರಡ್ ಅವರಿಗೆ ಶಾಸಕ ಎಸ್.ಎ.ರಾಮದಾಸ್ ಮನವಿ ಸಲ್ಲಿಸಿದ್ದಾರೆ.

ದೆಹಲಿ ಪ್ರವಾಸ ಕೈಗೊಂಡಿರುವ ಶಾಸಕ ಎಸ್.ಎ.ರಾಮದಾಸ್ ಮೈಸೂರಿನ ಕೆ.ಆರ್.ಕ್ಷೇತ್ರದಲ್ಲಿ ಬೀದಿಬದಿ ವ್ಯಾಪಾರಿಗಳ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮ, ನೋಂದಣಿ ಅಭಿಯಾನದ ಬಗ್ಗೆ ಕೇಂದ್ರ ಸರ್ಕಾರದ ರಾಜ್ಯ ಹಣಕಾಸು ಸಚಿವ ಭಗವದ್ ಕಿಶನ್ ರಾವ್ ಕಾರಡ್ ಅವರಿಗೆ ವಿವರಿಸಿದರು. ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ಪ್ರಧಾನಮಂತ್ರಿ ಸ್ವನಿಧಿ ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ಕೈಗೊಂಡಿರುವ ಕ್ರಮ ಹಾಗೂ ಮಾಡಿಕೊಂಡಿರುವ ಸಿದ್ಧತೆ ಮಾಹಿತಿಯನ್ನು ನೀಡಿದ್ದಾರೆ. ಅಲ್ಲದೇ, ಸ್ವನಿಧಿ ಕಾರ್ಯಕ್ರಮದ ಉದ್ಘಾಟನೆಗೆ ಬರುವಂತೆ ಮನವಿ ಮಾಡಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು ಕಾರ್ಯಕ್ರಮಕ್ಕೆ ಚಾಲನೆ ನೀಡಲು ಒಪ್ಪಿಕೊಂಡಿದ್ದಾರೆ ಎನ್ನಲಾಗಿದೆ.

ಈ ವೇಳೆ ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ಕೆ.ಆರ್.ಕ್ಷೇತ್ರ ವ್ಯಾಪ್ತಿಯಲ್ಲಿ ಬೀದಿಬದಿ ವ್ಯಾಪಾರಿಗಳ ನೋಂದಣಿ ಕಾರ್ಯ ನಡೆಸಲಾಗಿದೆ. ಬೀದಿಬದಿ, ತಳ್ಳುಗಾಡಿ, ಸಣ್ಣ ಸಣ್ಣ ವ್ಯಾಪಾರಿಗಳನ್ನು ಗುರುತಿಸಿ ಕೇಂದ್ರ ಸರ್ಕಾರದ ಸವಲತ್ತುಗಳನ್ನು ತಲುಪಿಸಲು ಈ ಕಾರ್ಯಕ್ರಮ ರೂಪಿಸಲಾಗಿದೆ. ಬಡತನದಲ್ಲಿರುವ ವ್ಯಾಪಾರಿಗಳನ್ನು ನೋಂದಣಿ ಮಾಡಲಾಗಿದೆ. ಮೀಟರ್ ಬಡ್ಡಿ ದಂಧೆಕೋರರಿಂದ ರಸ್ತೆಬದಿ ವ್ಯಾಪಾರಿಗಳನ್ನು ರಕ್ಷಿಸಲು ಈ ಯೋಜನೆ ಸಹಕಾರಿಯಾಗಲಿದೆ. ಒಂದೊಂದು ವ್ಯಾಪಾರದಲ್ಲಿ ಒಂದೊಂದು ಸಮಸ್ಯೆ ಇದ್ದು, ಅದನ್ನು ಪರಿಹರಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ರೂಪಿಸಲಾಗಿದೆ. ಈಗಾಗಲೇ ವ್ಯಾಪಾರಸ್ಥರನ್ನು ಗುರುತಿಸಲಾಗಿದ್ದು, ಯಾರ್ ಯಾರು ರಸ್ತೆ ಬದಿಯಲ್ಲಿ ವ್ಯಾಪಾರ ಮಾಡುತ್ತಿದ್ದಾರೆ ಎನ್ನುವ ಮಾಹಿತಿಯನ್ನು ಪೊಲೀಸರು, ಪಾಲಿಕೆ ಸಿಬ್ಬಂದಿ, ಕಂದಾಯ ಇಲಾಖೆ ಸಿಬ್ಬಂದಿ ದಾಖಲೆ ಸಿದ್ಧಪಡಿಸಿದ್ದಾರೆ. ಒಟ್ಟು ಕ್ಷೇತ್ರ ವ್ಯಾಪ್ತಿಯಲ್ಲಿ ಐದು ಸಾವಿರ ಮಂದಿಗೆ ಕಾರ್ಡ್ ನೀಡುವ ಗುರಿ ಹೊಂದಲಾಗಿದೆ ಎಂದರು.

ಸ್ವನಿಧಿ ಯೋಜನೆ ಅನುಷ್ಠಾನದ ನಂತರ ಸರ್ಕಾರದಿಂದ ಗುರುತಿನ ಕಾರ್ಡ್ ನೀಡಲಾಗುತ್ತದೆ. ವ್ಯಾಪಾರದಿಂದ ಸಾರ್ಥಕ ಆಗಬೇಕು. ವ್ಯಾಪಾರಿಗಳಿಗೆ ಈ ಶ್ರಮ್ ಕಾರ್ಡ್ ಕೂಡ ನೀಡಲಾಗುತ್ತಿದೆ. ಇ ಶ್ರಮ್ ಕಾರ್ಡ್ ಉಳ್ಳವರಿಗೆ ಸರ್ಕಾರದ ಸವಲತ್ತುಗಳ ಬಗ್ಗೆ ಮಾಹಿತಿ ನೀಡಲಾಗುತ್ತದೆ. ಈ ಯೋಜನೆಯ ಕಾರ್ಡುದಾರರಿಗೆ ಪ್ರಧಾನ ಮಂತ್ರಿಗಳ ಕಡೆಯಿಂದ 10 ಸಾವಿರ ಬಂಡವಾಳ ದೊರೆಯಲಿದೆ. ನಂತರ 20 ಸಾವಿರ, 40 ಸಾವಿರ, ಬಳಿಕ 80 ಸಾವಿರದವರೆಗೆ ಬಡ್ಡಿರಹಿತ ಸಾಲ ಸೌಲಭ್ಯ ದೊರೆಯಲಿದೆ. ಈ ಮೂಲಕ ಬಡ್ಡಿ ರಹಿತ ಬಂಡವಾಳ ಒದಗಿಸುವುದು ಯೋಜನೆಯ ಉದ್ದೇಶವಾಗಿದೆ.

ದೀನದಯಾಳ್ ಉಪಾಧ್ಯಾಯರು ದೇಶಕ್ಕಾಗಿ ಸಮರ್ಪಣಾ ಭಾವದಿಂದ ಶ್ರಮಿಸಿದವರು



ಮೈಸೂರು,ಫೆ.12(ಪಿಎಂ)– ಅಖಂಡ ಭಾರತದ ಪರಿಕಲ್ಪನೆಯೊಂದಿಗೆ ಭಾರತೀಯರನ್ನು ಜಾಗೃತಗೊಳಿಸುವ ನಿಟ್ಟಿನಲ್ಲಿ ಸ್ವಹಿತ ತ್ಯಾಗ ಮಾಡಿ ದೇಶಕ್ಕಾಗಿ ಸಮರ್ಪಣಾ ಮನೋಭಾವದಿಂದ ಪಂಡಿತ್ ದೀನದಯಾಳ್ ಉಪಾಧ್ಯಾಯರು ಶ್ರಮಿಸಿದರು ಎಂದು ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್ ಹೇಳಿದರು.

ಜಯಪುರ ಮಹಾಶಕ್ತಿ ಕೇಂದ್ರದ ಉದ್ಬೂರು ಗ್ರಾಮದಲ್ಲಿ ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರ ಪುಣ್ಯತಿಥಿ ಅಂಗವಾಗಿ ಹಮ್ಮಿಕೊಂಡಿದ್ದ ಸಮರ್ಪಣಾ ದಿವಸ್ ಕಾರ್ಯಕ್ರಮದಲ್ಲಿ ಉಪಾಧ್ಯಾಯರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು. ಪಂಡಿತ್ ದೀನದಯಾಳ್ ಉಪಾಧ್ಯಾಯರ ಬದುಕು ನಮ್ಮೆಲ್ಲರಿಗೂ ಸ್ಫೂರ್ತಿದಾಯಕ. ಅವರು ಕಡುಬಡತನದ ಕುಟುಂಬದಲ್ಲಿ ಜನಿಸಿದರು. ಚಿಕ್ಕನಿಂದಲೇ ತಂದೆ–ತಾಯಿ ಕಳೆದುಕೊಂಡು ಸೋದರ ಮಾವನ ಆಶ್ರಯದಲ್ಲಿ ಬೆಳೆದರು. ಭಾರತೀಯ ಸಮಾಜಕ್ಕೆ ತಮ್ಮ ಬದುಕನ್ನೇ ಅರ್ಪಿಸಿದರು. ಏಕಾತ್ಮ ಮಾನವದರ್ಶನ, ಅಂತ್ಯೋದಯ ಪರಿಕಲ್ಪನೆ ಮೂಲಕ ಸಮಾಜಕ್ಕೆ ಸಾರ್ಥಕ ಸಂದೇಶ ನೀಡಿದರು ಎಂದು ಸ್ಮರಿಸಿದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ರಾಷ್ಟ್ರಹಿತದ ಚಿಂತನೆಯ ಪ್ರಭಾವಕ್ಕೆ ಒಳಗಾಗಿ ಸಮಾಜವನ್ನು ಜಾಗೃತಿಗೊಳಿಸುವ ನಿಟ್ಟಿನಲ್ಲಿ ಹಾಗೂ ಸಂಘಟಿಸುವ ಸಂಕಲ್ಪದೊಂದಿಗೆ ತಮ್ಮನ್ನು ತೊಡಗಿಸಿಕೊಂಡರು. ಅವರ ಅಖಂಡ ಭಾರತ ಪರಿಕಲ್ಪನೆ ಇಂದಿಗೂ ಪ್ರಸ್ತುತ ಎಂದರು. ಬಿಜೆಪಿ ಜಿಲ್ಲಾ ಎಸ್‌ಟಿ ಮೋರ್ಚಾ ಉಪಾಧ್ಯಕ್ಷ ಮರಿಸ್ವಾಮಿ ನಾಯಕ್, ಜಯಪುರ ಮಹಾ ಶಕ್ತಿ ಕೇಂದ್ರದ ಅಧ್ಯಕ್ಷ ಸತೀಶ್, ಎಸ್‌ಟಿ ಮೋರ್ಚಾ ಅಧ್ಯಕ್ಷ ಉಮೇಶ್, ಗುರುಸಿದ್ದು, ಮುಖಂಡರಾದ ಚಂದ್ರಣ್ಣ, ಕೆಂಪಣ್ಣ, ಶ್ರೀರಂಗ ಮತ್ತಿತರರು ಹಾಜರಿದ್ದರು.



ಮೈಸೂರಿನ ಜಿಲ್ಲಾ ಪತ್ರಕರ್ತರ ಭವನದಲ್ಲಿ ಪ್ರೇಮಾತನಯ ಗುರೂಜಿ ಅವರು ಶಿರಡಿ ಸಾಯಿಬಾಬಾರನ್ನು ಕುರಿತು ಕನ್ನಡದಲ್ಲಿ ರಚಿಸಿರುವ 'ಭಜನಾವಳಿ'ಗಳ ಪುಸ್ತಕವನ್ನು ಬಿಡುಗಡೆ ಮಾಡಿದ ಕೆ.ಆರ್.ಆಸ್ಪತ್ರೆಯ ನಿವೃತ್ತ ಡೀನ್ ಅಂಡ್ ಡೈರೆಕ್ಟರ್ ಮತ್ತು ಚರ್ಮಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ಹೆಚ್.ಹನುಮಂತಪ್ಪ ಅವರನ್ನು ಸನ್ಮಾನಿಸಲಾಯಿತು. ಪ್ರೇಮಾತನಯ ಗುರೂಜಿ, ವಿಪ್ರ ಮುಖಂಡ ಡಾ.ರಘುರಾಂ, ಬಿಜೆಪಿ ಮುಖಂಡ ಬಿ.ಶಿವಣ್ಣ ಚಿತ್ರದಲ್ಲಿದ್ದಾರೆ.

ನಿಧನ

ಬಿ.ರವಿಕುಮಾರ್



ಮೈಸೂರು, ಫೆ.12– ಮೈಸೂರಿನ ಕೆ.ಆರ್.ಮೊಹಲ್ಲಾ ಹಲ್ಲಿನಬೀದಿ ನಿವಾಸಿ ಬಿ.ರವಿಕುಮಾರ್(42) ಹೃದಯಾಘಾತದಿಂದ ಸ್ವಗೃಹದಲ್ಲಿ ಭಾನುವಾರ ನಿಧನರಾದರು. ಮೃತರು ತಾಯಿ, ಪತ್ನಿ, ಪುತ್ರ ಇಬ್ಬರೂ ಪುತ್ರಿಯರು ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ ಚಾಮುಂಡಿಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ಸೋಮವಾರ ಅಂತ್ಯಕ್ರಿಯೆ ಬೆಳಗ್ಗೆ 11 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಿ.ಸುಶೀಲಾ



ಮೈಸೂರು, ಫೆ.12– ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಗೋಪಾಲಪುರ ಗ್ರಾಮದ ಗುರುಸ್ವಾಮಿ ಅವರ ಪತ್ನಿ ಸುಶೀಲಾ (65) ಅವರು ಭಾನುವಾರ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತಿ, ಪುತ್ರ ಪೊಲೀಸ್ ಇಲಾಖೆಯ ಮಲ್ಲೇಶ್, ಮಗಳು, ಸೊಸೆ, ಅಳಿಯ ಮತ್ತು ಮೊಮ್ಮಕ್ಕಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ಗೋಪಾಲಪುರ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸತೀಶ್ ಪ್ರೇಮ್‌ಕುಮಾರ್



ಮೈಸೂರಿನ ವಿಶ್ವೇಶ್ವರನಗರ 6ನೇ ಕ್ರಾಸ್‌ನ ನಿವಾಸಿ, ಹೋಲ್ಡ್ಸ್‌ವರ್ತ್ ಮೆಮೋರಿಯಲ್ ಆಸ್ಪತ್ರೆ (ಮಿಷನ್ ಆಸ್ಪತ್ರೆ)ಯ ನಿವೃತ್ತ ಹಿರಿಯ ಲೆಕ್ಕಾಧಿಕಾರಿ ಸತೀಶ್ ಪ್ರೇಮ್‌ಕುಮಾರ್ (66) ಭಾನುವಾರ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪುತ್ರ ವರುಣ್ ಡೇನಿಯಲ್ ಮತ್ತು ಅಪಾರ ಬಂಧು ಬಳಗ ಹಾಗೂ ಸ್ನೇಹಿತರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ಬೆಳಗ್ಗೆ ಮೈಸೂರಿನ ಗಾಂಧಿನಗರದ ಮಹದೇವಪುರ ರಸ್ತೆಯಲ್ಲಿರುವ ಸಿಎಸ್‌ಐ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಿನ ಅನಾಥಾಲಯದಲ್ಲಿ ತಾತಯ್ಯ ಸ್ಮರಣಾರ್ಥ ಉಪನ್ಯಾಸ

ಜಮ್ಮು–ಕಾಶ್ಮೀರ ದೇಶದ ಅವಿಭಾಜ್ಯ ಅಂಗ ಎಂದು ಮಾಡಿ ತೋರಿಸಿದವರು ಮೋದಿ

● ವಕೀಲ, ಸಾಂಸ್ಕೃತಿಕ ಚಿಂತಕ ಸಿ.ವಿ.ಕೇಶವಮೂರ್ತಿ ● ಜಮ್ಮು-ಕಾಶ್ಮೀರ ಸೇರಿದಂತೆ ತುಂಡು ತುಂಡಾಗಿದ್ದ ದೇಶೀಯ ಸಂಸ್ಥಾನಗಳನ್ನು ಒಂದುಗೂಡಿಸಿದವರು ಸರ್ದಾರ್ ವಲ್ಲಭಬಾಯಿ ಪಟೇಲ್ ● ಜಮ್ಮು-ಕಾಶ್ಮೀರ ದೇಶದ ಭಾಗವಾಗದೇ ಹೋಗಲು ಜವಾಹರಲಾಲ್ ನೆಹರು ಕಾರಣ

ಮೈಸೂರು, ಫೆ.12(ಆರ್‌ಕೆಬಿ)– ಜಮ್ಮು–ಕಾಶ್ಮೀರವನ್ನು ಭಾರತದ ಉಳಿದ ಭಾಗಗಳೊಂದಿಗೆ ಸಂಯೋಜಿಸಲು 370ನೇ ವಿಧಿಯನ್ನು ತೆಗೆದು ಹಾಕಲಾಯಿತು. ಇದರ ನಂತರ, ಜಮ್ಮು ಮತ್ತು ಕಾಶ್ಮೀರದ ಸ್ಥಾನಮಾನವನ್ನು ಕೇಂದ್ರಾಡಳಿತ ಪ್ರದೇಶಕ್ಕೆ ಬದಲಾಯಿಸಲಾಯಿತು. ಭಾರತದ ರಾಷ್ಟ್ರಪತಿಗಳು ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನುಷ್ಠಾನ) ಆದೇಶ, 2019 ಅನ್ನು 5 ಆಗಸ್ಟ್ 2019ರಂದು ಹೊರಡಿಸಿದರು. ಭಾರತೀಯ ಸಂವಿಧಾನದ 370ನೇ ವಿಧಿಯ ಷರತ್ತು (1)ರ ಪ್ರಕಾರ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾದ ಪೂರ್ವ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸುವ ಮೂಲಕ ಜಮ್ಮು–ಕಾಶ್ಮೀರ ದೇಶದ ಅವಿಭಾಜ್ಯ ಅಂಗ ಎಂಬುದನ್ನು ಮಾಡಿ ತೋರಿಸಿದವರು ಪ್ರಧಾನಿ ನರೇಂದ್ರ ಮೋದಿ ಎಂದು ವಕೀಲ, ಸಾಂಸ್ಕೃತಿಕ ಚಿಂತಕ ಸಿ.ವಿ.ಕೇಶವಮೂರ್ತಿ ತಿಳಿಸಿದರು.

ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ದಿ ಅನಾಥಾಲಯದ ಅನ್ನಪೂರ್ಣ ಸಭಾಂಗಣದಲ್ಲಿ ತಾತಯ್ಯ ಸ್ಮರಣಾರ್ಥ ಉಪನ್ಯಾಸ ಮಾಲೆಯಲ್ಲಿ 'ಸಂವಿಧಾನದ ಹಂದರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಂಬಂಧಗಳು' ಕುರಿತು ಅವರು ಮಾತನಾಡಿದರು. ಜಮ್ಮು–ಕಾಶ್ಮೀರ ದೇಶದ ಭಾಗವಾಗಲಿಲ್ಲ. ಇದಕ್ಕೆ ನೆಹರು ಕಾರಣ. ಜಮ್ಮು–ಕಾಶ್ಮೀರ ಸೇರಿದಂತೆ ತುಂಡು ತುಂಡಾಗಿದ್ದ ದೇಶೀಯ ಸಂಸ್ಥಾನಗಳನ್ನು ಒಂದುಗೂಡಿಸಿದವರು ಸರ್ದಾರ್ ವಲ್ಲಭಬಾಯಿ ಪಟೇಲ್. ಅಂದಿನ ಪ್ರಧಾನಿ ಜವಾಹರ್‌ಲಾಲ್ ನೆಹರು ಮಾಡದ ಕೆಲಸವನ್ನು ಪಟೇಲರು ಮಾಡಿದರು. ಇತ್ತೀಚೆಗೆ ಸಂವಿಧಾನದ 370ನೇ ವಿಧಿಯನ್ನು ರದ್ದುಪಡಿಸಿ, ಜಮ್ಮು–ಕಾಶ್ಮೀರವನ್ನು ಉಳಿಸಿಕೊಳ್ಳಲು ಸಾಧ್ಯ ಮಾಡಿದ್ದು ಪ್ರಧಾನಿ ನರೇಂದ್ರ ಮೋದಿ ಎಂದು ಹೇಳಿದರು.



ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ದಿ ಅನಾಥಾಲಯದ ಅನ್ನಪೂರ್ಣ ಸಭಾಂಗಣದಲ್ಲಿ ಭಾನುವಾರ ಏರ್ಪಡಿಸಿದ್ದ ತಾತಯ್ಯ ಸ್ಮರಣಾರ್ಥ ಉಪನ್ಯಾಸ ಮಾಲೆಯಲ್ಲಿ 'ಸಂವಿಧಾನದ ಹಂದರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಂಬಂಧಗಳು' ಕುರಿತು ವಕೀಲ, ಸಾಂಸ್ಕೃತಿಕ ಚಿಂತಕ ಸಿ.ವಿ.ಕೇಶವಮೂರ್ತಿ ಮಾತನಾಡಿದರು.

ಕಾಂಗ್ರೆಸ್ ಪಕ್ಷವು ಚುನಾವಣಾ ಪೂರ್ವದಲ್ಲಿ ನೀಡಿದ್ದ ಪ್ರಣಾಳಿಕೆಯಲ್ಲಿ ನಮ್ಮ ಆಳ್ವಿಕೆಯಲ್ಲಿ ಭಾಷಾವಾರು ಪ್ರಾಂತ್ಯ ಮಾಡುತ್ತೇವೆ ಎಂದಿತ್ತು ಹಾಗಾಗಿ ಕನ್ನಡ, ತೆಲುಗು, ತಮಿಳು ಸೇರಿದಂತೆ ಭಾಷಾವಾರು ಪ್ರಾಂತ್ಯದ ಕೂಗೆದ್ದಿತು. ಅದಕ್ಕೆ ನೆಹರು ನೇಮಕ ಮಾಡಿದ ಸಮಿತಿ ಭಾಷಾ ಪ್ರಾಂತ್ಯ ರಚನೆ ಸೂಕ್ತವಲ್ಲ ಎಂಬ ವರದಿ ನೀಡಿತ್ತು. ಆ ನಂತರ ಭಾಷಾವಾರು ಪ್ರಾಂತ್ಯ ರಚನೆ ಹೋರಾಟ ತೀವ್ರವಾದಾಗ ಹೊಸ ಆಯೋಗ ರಚಿಸಲಾಯಿತು. ಅದರ ವರದಿ ಪ್ರಕಾರ ಭಾಷಾವಾರು ಪ್ರಾಂತ್ಯ ರಚನೆ ಮಾಡಲಾಯಿತು. ಇದರಿಂದ ಹೊಸ ಹೊಸ ಸಮಸ್ಯೆಗಳು ಉದ್ಭವವಾಗತೊಡಗಿತು. ಅದರ ಫಲವೇ ಕರ್ನಾಟಕ–ತಮಿಳುನಾಡು ನಡುವಿನ ಕಾವೇರಿ ವಿವಾದ. ಇಂತಹ ಹತ್ತಾರು ಸಮಸ್ಯೆಗಳು ಉಂಟಾದವು ಎಂದರು.

ದೇಶದಲ್ಲಿ ಭಾಷಾವಾರು ಪ್ರಾಂತ್ಯ ರಚನೆ ಆಯಿತೇ ಹೊರತು ನಾವೆಲ್ಲರೂ ಒಂದೇ ಧ್ವಜ, ಇರುವುದೊಂದು ಭಾರತ. ನಮಗೆಲ್ಲರಿಗೂ ಇರುವುದು ಒಂದೇ ಪೌರತ್ವ ದೇಶದಲ್ಲಿ ರಾಷ್ಟ್ರಪತಿ, ಪ್ರಧಾನಿ ಆಡಳಿತ. ರಾಜ್ಯಪಾಲರನ್ನು ರಾಷ್ಟ್ರಪತಿಗಳೇ ನೇಮಕ ಮಾಡುತ್ತಾರೆ. ಹಾಗಾಗಿ ರಾಜ್ಯದಲ್ಲಿ ಕೇಂದ್ರದ ಪ್ರತಿನಿಧಿಯಾಗಿ ರಾಜ್ಯಪಾಲರು ಕಾರ್ಯನಿರ್ವಹಿಸುತ್ತಾರೆ. ಇವೆಲ್ಲವೂ ಸಂವಿಧಾನದಿಂದ ಸಾಧ್ಯವಾಯಿತು ಎಂದು ಕೇಶವಮೂರ್ತಿ ತಿಳಿಸಿದರು.

ಈ ನಡುವೆ ದೇಶ ವಿರೋಧಿ ಭಾವನೆ ಬಿತ್ತುವ ಹಾಗೂ ಕಾನೂನು ಪ್ರಕಾರ ರಚಿತವಾದ ಸರ್ಕಾರವನ್ನು ಬುಡಮೇಲು ಮಾಡುವ ಯತ್ನಗಳು ನಡೆದರೆ, ಅಂಥವುಗಳ ವಿರುದ್ಧ ಕ್ರಮ ಕೈಗೊಳ್ಳುವುದು ಕೇಂದ್ರ ಸರ್ಕಾರದ ಕೆಲಸ. ಸಂವಿಧಾನದ 355ನೇ ವಿಧಿ ಪ್ರಕಾರ ಒಕ್ಕೂಟದ ಕರ್ತವ್ಯವು ಪ್ರತಿ ರಾಜ್ಯವನ್ನು ಬಾಹ್ಯ ಆಕ್ರಮಣ ಮತ್ತು ಆಂತರಿಕ ಅಡಚಣೆಯಿಂದ ರಕ್ಷಿಸಲು ಮತ್ತು ಪ್ರತಿ ರಾಜ್ಯದ ಸರ್ಕಾರವು ನಿಬಂಧನೆಗಳಿಗೆ ಅನುಸಾರವಾಗಿ ನಡೆಸಲ್ಪಡುತ್ತದೆ ಎಂಬುದು ಒಕ್ಕೂಟದ ಕರ್ತವ್ಯವಾಗಿರುತ್ತದೆ. ಪ್ರತಿಯೊಂದು ರಾಜ್ಯ ಸರ್ಕಾರ ಒಂದು ಸಂವಿದಾನದದಲ್ಲಿ ಅಡಕವಾಗಿರುವ ನಿಯಮಗಳಡಿ ಕೆಲಸ ನಿರ್ವಹಿಸಬೇಕು. ಇದು ಸಂವಿಧಾನದ ಹಂದರ. ಭಾಷಾವಾರು ಪ್ರಾಂತ್ಯ ಅಂದಾಕ್ಷಣ ನಾವು ಬೇರೆ ಆಗುವುದಿಲ್ಲ. ಎಲ್ಲರೂ ಭಾರತೀಯರೇ ಆಗಿರುತ್ತೇವೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಜಿಎಸ್‌ಎಸ್ ಯೋಗ ಫೌಂಡೇಶನ್‌ನ ವ್ಯವಸ್ಥಾಪಕ ಟ್ರಸ್ಟಿ ಡಿ.ಶ್ರೀಹರಿ ಮಾತನಾಡಿ, 8 ಮತ್ತು 9ನೇ ತರಗತಿ ವಿದ್ಯಾರ್ಥಿಗಳ ನೇತೃತ್ವದಲ್ಲಿ ನಗರದ ರಕ್ಷಣೆಗಾಗಿ 2 ಲಕ್ಷ ಜನರನ್ನು ಒಳಗೊಂಡ 'ಅಲರ್ಟ್ ಸಿಟಿಜನ್ ಟೀಮ್' ಸಿದ್ಧಗೊಳಿಸಿದ್ದೇವೆ. ಮೈಸೂರಿನ ರಕ್ಷಣೆ ಮತ್ತು ಸುರಕ್ಷತೆಯ ಪ್ರಚಾರಕ್ಕೆ ಒಂದು ಲಕ್ಷ ಶಾಲಾ ವಿದ್ಯಾರ್ಥಿಗಳ ಸೇನೆ ತಯಾರುಗೊಳಿಸಿದ್ದೇವೆ ಎಂದರು.

ದೇಶವಿರೋಧಿ ಶಕ್ತಿಗಳು ನಗರವನ್ನು ಹಿಡಿತಕ್ಕೆ ತೆಗೆದುಕೊಳ್ಳಲು ಬಯಸಿದರೆ, ಅದಕ್ಕೆ ಹೆಚ್ಚಿನ ಶ್ರಮ ಬೇಕಿಲ್ಲ. ಡಿಡಿಗೆ ಗುಂಡು ಹೊಡೆದು, ಪೊಲೀಸ್ ಆಯುಕ್ತ ಕಚೇರಿಯನ್ನು ವಶಪಡಿಸಿಕೊಂಡರೆ ಸಾಕು. ಇಂತಹ ಪರಿಸ್ಥಿತಿ ಬರಬಾರದು ಎಂದರೆ ನಾವು ಸದಾ ಒಗ್ಗಟ್ಟಿನಿಂದ ಸನ್ನದ್ಧರಾಗಿರುವುದು ಮುಖ್ಯ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಕೇವಲ ನಮ್ಮ ಭವಿಷ್ಯ, ಜೊತೆಗೆ ಅವರೇ ನಮಗೆ ಪ್ರಸ್ತುತ. ಹಿರಿಯರ ಅನುಭವಯುಕ್ತ ಸಲಹೆಗಳನ್ನು ಸ್ವೀಕರಿಸುವ ಹಾಗೂ ಜವಾಬ್ದಾರಿ ಹೊರಲು ಅವರು ಜಾತಿ ಭೇದ ತೊರೆದು ಸಿದ್ಧರಿರಬೇಕು. ಹಿಂದುಳಿದ ಜಾತಿಯಿಂದ ಬಂದ ಪ್ರಧಾನಿ ಮೋದಿ ಅವರ ಗುರಿ ಮತ್ತು ಉದ್ದೇಶ ಶ್ರೇಷ್ಠವಾಗಿತ್ತು. ಆಸೆ ಆಮಿಷಕ್ಕೆ ಬಲಿಯಾದರೆ ಮತ್ತೊಮ್ಮೆ ದಾಸ್ಯಕ್ಕೆ ಒಳಗಾಗಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಕಾರ್ಯಕ್ರಮದಲ್ಲಿ ಅನಾಥಾಲಯ ಆಡಳಿತ ಮಂಡಳಿ ಅಧ್ಯಕ್ಷ ಗೋಪಿನಾಥ್, ಸದಸ್ಯ ಡಾ.ಸತ್ಯನಾರಾಯಣ ಉಪಸ್ಥಿತರಿದ್ದರು.

ರಾಜ್ಯ ಬಜೆಟ್‌ನಲ್ಲಿ ಪರಿಶಿಷ್ಟ ಪಂಗಡದ ಶ್ರೇಯೋಭಿವೃದ್ಧಿಗೆ ಹೆಚ್ಚಿನ ಅನುದಾನ ಕಲ್ಪಿಸಿ

ನಾಯಕರ ಹಿತರಕ್ಷಣಾ ವೇದಿಕೆ ಒತ್ತಾಯ

ಮೈಸೂರು,ಫೆ.12(ಪಿಎಂ)–ಪ್ರಸಕ್ತ ಸಾಲಿನ ರಾಜ್ಯ ಬಜೆಟ್‌ನಲ್ಲಿ ಪರಿಶಿಷ್ಟ ಪಂಗಡದ ಶ್ರೇಯೋಭಿವೃದ್ಧಿ ಹೆಚ್ಚಿನ ಅನುದಾನ ಕಲ್ಪಿಸಬೇಕೆಂದು ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಒತ್ತಾಯಿಸಿದೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪ ನಾಯಕ, ಪರಿಶಿಷ್ಟ ಪಂಗಡದಲ್ಲಿ ಸುಮಾರು 52 ಬುಡಕಟ್ಟು ಜನಾಂಗಗಳಿದ್ದು, ರಾಜ್ಯದಲ್ಲಿ ಒಟ್ಟಾರೆ 65 ಲಕ್ಷ ಜನಸಂಖ್ಯೆ ಹೊಂದಿದೆ. ಈ ಸಮುದಾಯಗಳಿಗೆ ಫೆ.17ರಂದು ಮಂಡಿಸಲಿರುವ ರಾಜ್ಯ ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ಕಲ್ಪಿಸಬೇಕೆಂದು ಆಗ್ರಹಿಸಿದರು.

ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಮೂಲಕ ನೀಡುವ ನೇರ ಸಾಲವನ್ನು 50 ಸಾವಿರ ರೂ.ನಿಂದ 3 ಲಕ್ಷ ರೂ.ಗೆ ಹೆಚ್ಚಳ ಮಾಡಬೇಕು. ಅಲ್ಲದೆ, ಇದೇ ನಿಗಮದಡಿ ಅನುಷ್ಠಾನಗೊಳ್ಳುವ ಗಂಗಕಲ್ಯಾಣ ಯೋಜನೆಯಡಿ ಕೊಳವೆ ಬಾವಿ ಕೊರೆಯುವ ಸಂಬಂಧ ಫಲಾನುಭವಿಗಳ ಸಂಖ್ಯೆಯನ್ನು ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 50ಕ್ಕೆ ಹೆಚ್ಚಿಸಬೇಕು. ಜೊತೆಗೆ ಪರಿಶಿಷ್ಟ ಪಂಗಡದ ವಿದ್ಯಾರ್ಥಿವೇತನ ಹೆಚ್ಚಿಸಬೇಕು ಎಂದರು.



ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ 8ನೇ ತರಗತಿಯಿಂದ ಸ್ನಾತಕೋತ್ತರ ಪದವಿವರೆಗೆ ಉಚಿತವಾಗಿ ಲ್ಯಾಪ್‌ಟಾಪ್ ವಿತರಿಸಬೇಕು. ಮೈಸೂರು ನಗರದಲ್ಲಿ ವಾಲ್ಮೀಕಿ ಪ್ರತಿಮೆ ಸ್ಥಾಪಿಸುವ ಸಂಬಂಧ ಬಜೆಟ್‌ನಲ್ಲಿ ಘೋಷಣೆ ಮಾಡಬೇಕು. ಪರಿಶಿಷ್ಟ ಜಾತಿ, ಪಂಗಡದ ಗುತ್ತಿಗೆದಾರರಿಗೆ 50 ಲಕ್ಷ ರೂ.ವರೆಗಿನ ಸರ್ಕಾರಿ ಕಾಮಗಾರಿ ಗುತ್ತಿಗೆಯಲ್ಲಿ ಮೀಸಲಾತಿ ಜಾರಿಯಲ್ಲಿದ್ದು, ಇದನ್ನು 1 ಕೋಟಿ ಮೊತ್ತದ ಕಾಮಗಾರಿವರೆಗೆ ಹೆಚ್ಚಳ ಮಾಡಬೇಕು. ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಪರಿಶಿಷ್ಟ ಜಾತಿ, ಪಂಗಡದವರಿಗೆ ಸಾಲ ಸೌಲಭ್ಯ ನೀಡುವಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವ ಕಾರಣ ಸಹಕಾರ ಬ್ಯಾಂಕ್‌ಗಳ ಮೂಲಕ ಸಾಲ ಸೌಲಭ್ಯ ನೀಡಲು ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು.

ಪ್ರತಿ ತಾಲೂಕಿನಲ್ಲಿ ಹೆಚ್ಚುವರಿಯಾಗಿ ಒಂದೊಂದು ಮಹಿಳಾ ಹಾಸ್ಟೆಲ್ ಹಾಗೂ ಪುರುಷರ ಹಾಸ್ಟೆಲ್ ತೆರೆಯಬೇಕು. ಕಳೆದ 8 ವರ್ಷಗಳಿಂದ ಭರ್ತಿ ಮಾಡದಿರುವ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಶೀಘ್ರ ಕ್ರಮ ವಹಿಸಬೇಕು. ರಾಜ್ಯದಲ್ಲಿ ಹೊಸದಾಗಿ 7 ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುವ ಘೋಷಣೆ ಮಾಡಿದ್ದು, ಅದರಂತೆ ಒಂದು ವಿಶ್ವವಿದ್ಯಾನಿಲಯಕ್ಕೆ ಮಹರ್ಷಿ ವಾಲ್ಮೀಕಿ ಹೆಸರು ನಾಮಕರಣ ಮಾಡಬೇಕು ಎಂದು ಒತ್ತಾಯಿಸಿದರು. ಮೈಸೂರು ವಿವಿಯಲ್ಲಿ ಪ್ರಾರಂಭಿಸಿರುವ ವಾಲ್ಮೀಕಿ ಅಧ್ಯಯನ ಪೀಠಕ್ಕೆ ವಿವಿಯ ಮಾನಸಗಂಗೋತ್ರಿ ಆವರಣದಲ್ಲಿ ಕಟ್ಟಡ ಸೇರಿದಂತೆ ಅಗತ್ಯ ಸೌಲಭ್ಯ ಕಲ್ಪಿಸಿಕೊಡಬೇಕು ಎಂದು ಒತ್ತಾಯಿಸಿದರು. ವೇದಿಕೆ ಉಪಾಧ್ಯಕ್ಷರಾದ ವೆಂಕಟೇಶ್ ನಾಯಕ, ರೈಲ್ವೆ ಸಿದ್ದಯ್ಯ, ಮುಖಂಡರಾದ ರಘು ಯಡಕೊಳ, ಸ್ವಾಮಿ ಗೋಷ್ಠಿಯಲ್ಲಿದ್ದರು.

ಅನ್ವಯಿಕ ಗಣಿತದ ಬಗ್ಗೆ ಯಶಸ್ವಿ ವಿಚಾರಗೋಷ್ಠಿ

ಮೈಸೂರು, ಫೆ. 12– ಮೈಸೂರು ಊಟಿ ರಸ್ತೆಯಲ್ಲಿರುವ ಜೆ.ಎಸ್.ಎಸ್ ಕಲಾ, ವಾಣಿಜ್ಯ, ಮತ್ತು ವಿಜ್ಞಾನ ಕಾಲೇಜಿನಲ್ಲಿ ಗಣಿತ ವಿಭಾಗದ ವತಿಯಿಂದ ಐಕ್ಯೂಎಸ್‌ಸಿ ಪ್ರಾಯೋಜಿತ "ಅಪ್ಲಿಕೇಶನ್ ಆಫ್ ಆಲ್ಜಿಬ್ರಾ ಆ್ಯಂಡ್ ಅನ್ಯಾಲಿಸಿಸ್" ವಿಷಯದಲ್ಲಿ ಒಂದು ದಿನದ ವಿಚಾರ ಗೋಷ್ಠಿಯನ್ನು ಏರ್ಪಡಿಸಲಾಗಿತ್ತು. ಬೆಂಗಳೂರು ವಿಶ್ವವಿದ್ಯಾನಿಲಯದ ಗಣಿತ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ.ಬಿ.ಚಲುವರಾಜು ಗೋಷ್ಠಿಯನ್ನು ಉದ್ಘಾಟಿಸಿ, ಗಣಿತದಲ್ಲಿನ ಇತ್ತೀಚಿನ ಸಂಶೋಧನೆಗಳ ಬಗ್ಗೆ ಹೇಳಿ ಅವುಗಳ ಅನ್ವಹಿಕ ಉಪಯುಕ್ತತೆಗಳನ್ನು ವಿವರಿಸಿದರು.



ಕಾಲೇಜಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಪ್ರೊ. ಬಿ. ವಿ. ಸಾಂಬಶಿವಯ್ಯ ಅಧ್ಯಕ್ಷ ಭಾಷಣ ನೇರವೇರಿಸಿ ಕೊಡುವುದರೊಟ್ಟಿಗೆ ಗಣಿತ ಮತ್ತು ವಿಶೇಷವಾಗಿ ಆಲ್ಜಿಬ್ರಾ ವಿಷಯದ ಮಹತ್ವ ವಿವರಿಸಿದರು.

ಪ್ರಾಂಶುಪಾಲ ಪ್ರೊ.ಎಂ.ಪಿ.ವಿಜಯೇಂದ್ರಕುಮಾರ್, ಗಣಿತ ವಿಭಾಗದ ಪ್ರೊ.ಎಸ್ ಲಿಂಗಣ್ಣ ಮತ್ತು ಪ್ರೊ.ಎಂ.ಮಹದೇವಸ್ವಾಮಿ ವೇದಿಕೆಯಲ್ಲಿದ್ದರು. ವಿಭಾಗದ ಪ್ರೊ. ರಂಜಿತಾ ಸ್ವಾಗತ ಕೋರಿದರು. ಪ್ರೊ.ಜ್ಯೋತಿಯವರು ವಂದನಾರ್ಪಣೆ ಮಾಡಿದರು. ಪ್ರೊ.ಎಚ್.ಎಂ ಆಶಾ ನಿರೂಪಿಸಿದರು. ಕುಮಾರಿ ರೇಖಾಶ್ರೀ ಪ್ರಾರ್ಥಿಸಿದರು. ಒಟ್ಟು ಮೂರು ಗೋಷ್ಠಿಗಳು ನಡೆದಿದ್ದು, ಮೊದಲ ಗೋಷ್ಠಿಯಲ್ಲಿ ಡಾ.ಚಲುವರಾಜು, ಎರಡನೇ ಗೋಷ್ಠಿಯಲ್ಲಿ ತುಮಕೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಡಾ. ಬೋರೇಗೌಡ ಉಪನ್ಯಾಸ ನೀಡಿದರು. ಕೊನೆಯ ಗೋಷ್ಠಿಯಲ್ಲಿ ಈ ಕಾಲೇಜಿನಲ್ಲಿ ಅಧ್ಯಯನ ಮಾಡಿದ್ದ ಕೆ.ಭರತ್ ವಿಷಯ ಮಂಡಿಸಿದರು. ಪ್ರತಿ ಗೋಷ್ಠಿಯ ಕೊನೆಯಲ್ಲಿ ಪ್ರಶ್ನೋತ್ತರಗಳಿಗೆ ಅವಕಾಶ ಕೊಡಲಾಗಿದ್ದು, ಸಭಿಕರು ತಮ್ಮ ಸಂಶಯಗಳನ್ನು ಪರಿಹರಿಸಿಕೊಂಡರು. ವಿವಿಧ ಕಾಲೇಜುಗಳಿಂದ ಬಂದಿದ್ದ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ್ದರು.


ಇಂದು, ನಾಳೆ 'ಜೇಡಿಕಟ್ಟೆ ಮಹದೇಶ್ವರ ಸ್ವಾಮಿ' ಜಾತ್ರೆ: ಸಕಲ ಸಿದ್ಧತೆ

ಮೈಸೂರು,ಫೆ.12–ಮೈಸೂರು ತಾಲೂಕಿನ ಜಯಪುರ ಗ್ರಾಮದಲ್ಲಿ 'ಜೇಡಿಕಟ್ಟೆ ಮಹದೇಶ್ವರ ಸ್ವಾಮಿ' ಜಾತ್ರಾ ಮಹೋತ್ಸವಕ್ಕೆ ಸಕಲ ಸಿದ್ದತೆಗಳು ನಡೆದಿವೆ.

ಫೆ.13, 14ರಂದು ಜಾತ್ರಾ ಮಹೋತ್ಸವ ಹಾಗೂ ಕೊಂಡೊತ್ಸವಕ್ಕೆ ಸಿದ್ಧತೆಗಳು ಭರದಿಂದ ಸಾಗಿದ್ದು, ಜಯಪುರ, ಮಾವಿನಹಳ್ಳಿ ಹಾಗೂ ಬರಡನಪುರ ಗ್ರಾಮಸ್ಥರು ಒಟ್ಟಿಗೆ ಸೇರಿ ಜಾತ್ರೆಯನ್ನು ಆಚರಿಸಲಿದ್ದಾರೆ. ಕಳೆದ 15 ದಿನಗಳ ಹಿಂದೆ 3 ಊರಿನ ಗ್ರಾಮಸ್ಥರು ಕೊಂಡೊತ್ಸವಕ್ಕೆ 5 ಎತ್ತಿನ ಗಾಡಿಗಳಲ್ಲಿ 'ಕಗ್ಗಲಿ' ಮರಗಳನ್ನು ಕಡಿದು ಜಾತ್ರಾ ಮಾಳದಲ್ಲಿ ಶೇಖರಿಸಿದ್ದಾರೆ. ಜಾತ್ರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಮಹದೇಶ್ವರ ಸ್ವಾಮಿಯ ಹುಲಿವಾಹನ ಮೂರ್ತಿಯನ್ನು ಶುಕ್ರವಾರ ಮಾವಿನಹಳ್ಳಿ ಗ್ರಾಮದಿಂದ ಬರಡನಪುರ ಗ್ರಾಮಕ್ಕೆ ಪೂಜೆ ಸಲ್ಲಿಸಿ ತರಲಾಯಿತು. ಬರಡನಪುರ ಗ್ರಾಮದಲ್ಲಿ ಫೆ.14ರ ಸೋಮವಾರ ಸೂರ್ಯೋದಯಕ್ಕೂ ಮುನ್ನ ಹುಲಿವಾಹನ ಮೂರ್ತಿಗೆ ಅಭಿಷೇಕ ನೆರವೇರಿಸಿ ಮೆರವಣಿಗೆ ಪ್ರಾರಂಭವಾಗುತ್ತದೆ. ಭಾರಿ ಗಾತ್ರದ ಹೂವಿನ ಹಾರಗಳಿಂದ ಸಿಂಗರಿಸಿ ಭಕ್ತರು ಮೂರ್ತಿಯನ್ನು ಹೊತ್ತು ಜಯಪುರ ಮಾರ್ಗವಾಗಿ ಜೇಡಿಕಟ್ಟೆ ಮಹದೇಶ್ವರಸ್ವಾಮಿ ದೇವಸ್ಥಾನಕ್ಕೆ ತರುತ್ತಾರೆ.

ಸೋಮವಾರ ರಾತ್ರಿ ಸರ್ಪದ ವಾಹನ ಮೆರವಣಿಗೆ, ಹಾಲರವಿ, ಬಿರುದು ಬಾವಲಿಗಳು ಮೆರವಣಿಗೆಯಲ್ಲಿ ಸಾಗುತ್ತವೆ. ಜಯಪುರ ವೃತ್ತದಲ್ಲಿ ಮದ್ದು–ಗುಂಡುಗಳನ್ನು ಸಿಡಿಸಲಾಗುತ್ತದೆ. ಮಂಗಳವಾರ ಮುಂಜಾನೆ ಕೊಂಡೋತ್ಸವ ಜರುಗಲಿದ್ದು, ಮೂರು ಗ್ರಾಮಗಳಲ್ಲಿ ಜಾತ್ರೆಯ ಸಂಭ್ರಮ ಕಳೆಗಟ್ಟಿದೆ. ವರ್ಣರಂಜಿತ ವಿದ್ಯುತ್ ದೀಪಾಲಂಕಾರ ವ್ಯವಸ್ಥೆ ಮಾಡಲಾಗಿದೆ ಎಂದು ದೇವಸ್ಥಾನ ಸಮಿತಿ ಕಾರ್ಯದರ್ಶಿ ನಾಗೇಶ್ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.2.2023 ಸೋಮವಾರ, ಮಳೆ ನಕ್ಷತ್ರ: ಧನಿಷ್ಠ, 6.02.2023ರಿಂದ 18.02.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಮಾಘ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ವಿಶಾಖ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ: ಆಡಿ. ಆನಂದಕುಮಾರ್, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ನೃತ್ಯ ಶಿಲ್ಪ ಯಾತ್ರೆ: ಲೇಖನ ಮತ್ತು ಪ್ರಸ್ತುತಿ–ಡಾ.ಬಿ.ಎನ್.ಮನೋರಮ, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರಿ, ಅಂಬಯ್ಯನುಲಿ, ವ್ಯಾಖ್ಯಾನ–ಡಾ.ಹೆಚ್.ಎನ್.ಮಂಜುರಾಜ್, 7.25 ಭಾವಗೀತೆ, 8.30 ಬದುಕು ಅಕ್ಷಯವಾಗಲಿ ಪ್ರಾಯೋಜಿತ ಕಾರ್ಯಕ್ರಮ, 9.00 ನೆನಪಿನಂಗಳ: ಹಿರಿಯ ವಿಜ್ಞಾನ ಬರಹಗಾರರಾದ ಜೆ.ಆರ್.ಲಕ್ಷ್ಮಣರಾವ್ ಅವರೊಂದಿಗೆ ಡಾ. ಹಾ.ಮಾ.ನಾಯಕ್ ಅವರು ನಡೆಸಿದ್ದ ಸಂವಾದ, 10.00 ಲಯ ಸಂಭ್ರಮ: ಮೃದಂಗ ಹಾಗೂ ಮದ್ದಳೆಯ ನಡುವಿನ ವ್ಯತ್ಯಸ ಹಾಗೂ ಮದ್ದಳೆಯ ಇತಿಹಾಸ ತಿಳಿಸಿಕೊಡುತ್ತಾರೆ ಅನಂತ ಪದ್ಮನಾಭ ಪಾಠಕ್, ಪ್ರಸ್ತುತಿ–ಹೆಚ್.ಎಲ್.ಶಿವಶಂಕರಸ್ವಾಮಿ. ಮಧ್ಯಾಹ್ನ: 12.30 ದೇವರನಾಮ: ಡಾ.ಕೆ.ಶ್ರೀನಿವಾಸ್, ಎಂ.ಎಸ್.ಶೀಲ, 12.45 ನಮ್ಮ ಆರೋಗ್ಯ: ಕ್ಯಾನ್ಸರ್ ಚಿಕಿತ್ಸೆಯಲ್ಲಿ ಉಪಶಮನ ಆರೈಕೆ ಕುರಿತು, ಡಾ.ವಿದ್ಯಾ ಎನ್. ಅವರೊಂದಿಗೆ ಮಾತುಕತೆ, 1.20 ಭಾವಗೀತೆ–ಎಂ.ಕೆ.ಜಯಶ್ರೀ, ಕಸ್ತೂರಿ ಶಂಕರ್, 3.00 ಕೆ.ಸುಧಾ–ಹಾಡುಗಾರಿಕೆ. 4.00 ಮಹಿಳಾರಂಗ ಜನಪದ ರೂಪಕ ಸ್ಪಂದನಾಮಳಿ ಸಮಾಜದ ಸದಸ್ಯರಿಂದ. ಸಂಜೆ: 4.30 ಝೇಂಕಾರ ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿರಂಗ: ಕಿಸಾನ್ ವಾಣಿ.ರಾತ್ರಿ: 9.30 ಹಳ್ಳಿಹಾಡು.

■ **ಜಾಗತಿಕ ಲಿಂಗಾಯತ ಮಹಾಸಭಾ, ಮೈಸೂರು ಘಟಕ:** ಬೀದರ್ ಜಿಲ್ಲೆ ಬಸವ ಕಲ್ಯಾಣದಲ್ಲಿ ರಾಷ್ಟ್ರೀಯ ಲಿಂಗಾಯತ ಮಹಾಧಿವೇಶನದ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲಾ ಪ್ರಚಾರ ಉದ್ಘಾಟನೆ, ಸ್ಥಳ: ಬಸವೇಶ್ವರ ವೃತ್ತದಲ್ಲಿರುವ ಬಸವ ಪುತ್ಥಳಿ ಬಳಿ, ಬೆಳಗ್ಗೆ 10.30ಕ್ಕೆ.

■ **ಪರಿಸರ ವಿಜ್ಞಾನ ವಿಭಾಗ, ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್:** ವಿಜ್ಞಾನ ವಿದ್ಯಾರ್ಥಿಗಳಿಗಾಗಿ ಪರಿಸರ ಶಿಬಿರ, ಸ್ಥಳ: ಕುಕ್ಕರಹಳ್ಳಿ ಕೆರೆ ಆವರಣ, ಬೆಳಗ್ಗೆ 10.30ಕ್ಕೆ.

■ **ಶರಣ ಸಾಹಿತ್ಯ ಪರಿಷತ್ತು:** ದತ್ತಿ ಕಾರ್ಯಕ್ರಮ, ವಿದ್ಯಾರ್ಥಿಗಳಿಂದ ವಾಚನ–ವ್ಯಾಖ್ಯಾನ, ಉದ್ಘಾಟನೆ: ಖ್ಯಾತ ಕವಿ ಡಾ.ಜಯಪ್ಪ ಹೊನ್ನಾಳಿ, ಅಧ್ಯಕ್ಷತೆ: ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ, ಸ್ಥಳ: ಶ್ರೀ ಸಿದ್ದೇಶ್ವರ ಪ್ರೌಢಶಾಲೆ, ವಿಜಯನಗರ 1ನೇ ಹಂತ, ಮಧ್ಯಾಹ್ನ 2 ಗಂಟೆಗೆ.

■ **ಮೈಸೂರು ವಿಶ್ವವಿದ್ಯಾನಿಲಯ, ಆಂತರಿಕ ಗುಣಮಟ್ಟ ಖಾತರಿ ಘಟಕ :** ವಿಶೇಷೋಪನ್ಯಾಸ ಕಾರ್ಯಕ್ರಮ, ಸಂಪನ್ಮೂಲ ವ್ಯಕ್ತಿ: ಮುಂಬೈ ಐಐಟಿ ಪ್ರಾಧ್ಯಾಪಕ ಡಾ.ಚೇತನ್ ಸಿಂಗ್ ಸೋಲಂಕಿ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ರಾಜಶೇಖರ್, ಸ್ಥಳ: ವಿಜ್ಞಾನ ಭವನ, ಮಾನಸ ಗಂಗೋತ್ರಿ, ಮಧ್ಯಾಹ್ನ 2.15ಕ್ಕೆ.

■ **ಸಾರಿಗೆ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ :** ಶ್ರೀ ಶಿವಲಿಂಗ ಮತ್ತು ಶ್ರೀ ರಾಜರಾಜೇಶ್ವರಿ ವಿಗ್ರಹಗಳ ಪ್ರತಿಷ್ಠಾಪನೆ ಹಾಗೂ ಕಳಸರೋಹಣ ಕಾರ್ಯಕ್ರಮ, ಬೆಳಗ್ಗೆ 9.30ಕ್ಕೆ ಅದ್ರೋದಕ ಸಮೇತ ಪೂಜೆ, ಸಂಜೆ 5 ಗಂಟೆಗೆ ನವಗ್ರಹ ಇತರ ಪೂಜೆಗಳು, ಕಳಸರೋಹಣ ಮತ್ತು ಕುಂಭಾಭಿಷೇಕ, ರಾತ್ರಿ 8 ಗಂಟೆಗೆ ನವಗ್ರಹ ಹೋಮ, ಮೃತ್ಯುಂಜಯ ಹೋಮ, ರುದ್ರ ಹೋಮ, ಶಿವಲಿಂಗ ಸ್ಥಾಪನೆ ಮತ್ತು ಇತರ ಪೂಜಾ ಕಾರ್ಯಕ್ರಮ, ಸ್ಥಳ: ಶ್ರೀ ಪ್ರಸನ್ನ ಗಣಪತಿ ದೇವಾಲಯ, ಕೆಎಸ್‌ಆರ್‌ಟಿಸಿ ಲೇಔಟ್, ನಾಡನಹಳ್ಳಿ.

ಆಂಧ್ರ ನೂತನ ರಾಜ್ಯಪಾಲರಾಗಿ ಕನ್ನಡಿಗ ಅಬ್ದುಲ್ ನಜೀರ್

ಸಿಎಂ ಬೊಮ್ಮಾಯಿ ಸೇರಿ ಗಣ್ಯರಿಂದ ಶುಭಾಶಯ

ಬೆಂಗಳೂರು, ಫೆ.12– ಸುಪ್ರೀಂಕೋರ್ಟ್ ಹಾಗೂ ಕರ್ನಾಟಕ ಹೈಕೋರ್ಟ್‌ನಲ್ಲಿ ನ್ಯಾಯಮೂರ್ತಿಗಳಾಗಿ ಸೇವೆ ಸಲ್ಲಿಸಿದ್ದ ಕನ್ನಡಿಗ ಎಸ್. ಅಬ್ದುಲ್ ನಜೀರ್ ಅವರನ್ನು



ಆಂಧ್ರಪ್ರದೇಶದ ನೂತನ ರಾಜ್ಯಪಾಲರಾಗಿ ನೇಮಕ ಮಾಡಲಾಗಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಸೇರಿದಂತೆ ಹಲವು ಗಣ್ಯರು ಅವರಿಗೆ ಶುಭಾಶಯ ಕೋರಿದ್ದಾರೆ.

ನೂತನವಾಗಿ ಆಂಧ್ರ ಪ್ರದೇಶದ ರಾಜ್ಯಪಾಲರಾಗಿ ನಿಯುಕ್ತಿಗೊಂಡಿರುವ ಹೆಮ್ಮೆಯ ಕನ್ನಡಿಗ ಎಸ್. ಅಬ್ದುಲ್ ನಜೀರ್ ರವರಿಗೆ ಹಾರ್ದಿಕ ಅಭಿನಂದನೆಗಳು. ಮೂಲತಃ ಮಂಗಳೂರಿನ ಬೆಳುವಾಯಿಯವರಾದ ಇವರು ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ವಕೀಲರಾಗಿ ಸೇವೆ ಸಲ್ಲಿಸಿ, ನಂತರ ಸುಪ್ರಿಂಕೋರ್ಟ್‌ನಲ್ಲಿ ನ್ಯಾಯಮೂರ್ತಿಗಳಾಗಿ, ನಿವೃತ್ತರಾಗಿದ್ದರು ಎಂದು ಸಿಎಂ ಬೊಮ್ಮಾಯಿ ಟ್ವೀಟ್ ಮಾಡಿದ್ದಾರೆ.

ಇನ್ನು ಆಂಧ್ರ ಪ್ರದೇಶದ ನೂತನ ರಾಜ್ಯಪಾಲರಾಗಿ ನಿಯುಕ್ತಿಗೊಂಡಿರುವ ಮಂಗಳೂರಿನ ಬೆಳುವಾಯಿ ಗ್ರಾಮದ ಎಸ್.ಅಬ್ದುಲ್ ನಜೀರ್ ಅವರಿಗೆ ಅಭಿನಂದನೆಗಳು ಎಂದು ಪ್ರಹ್ಲಾದ್ ಜೋಶಿ ಅವರು ಟ್ವೀಟ್ ಮಾಡಿದ್ದಾರೆ.

ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಸಹ ಅಬ್ದುಲ್ ನಜೀರ್ ಅವರನ್ನು ಅಭಿನಂದಿಸಿದ್ದು, ಸುಪ್ರೀಂ ಕೋರ್ಟ್ ಹಾಗೂ ಕರ್ನಾಟಕ ಹೈಕೋರ್ಟ್‌ಗಳಲ್ಲಿ ನ್ಯಾಯಾಧೀಶರಾಗಿ ಉತ್ತಮ ಸೇವೆ ಸಲ್ಲಿಸಿ, ಪ್ರಸ್ತುತ ಆಂಧ್ರಪ್ರದೇಶದ ರಾಜ್ಯಪಾಲರಾಗಿ ನೇಮಕಗೊಂಡಿರುವ ಎಸ್. ಅಬ್ದುಲ್ ನಜೀರ್ ಅವರಿಗೆ ಹಾರ್ದಿಕ ಅಭಿನಂದನೆಗಳು ಎಂದು ಟ್ವೀಟ್ ಮಾಡಿದ್ದಾರೆ.

ಟರ್ಕಿ–ಸಿರಿಯಾ ಭೂಕಂಪ: ಸಾವಿನ ಸಂಖ್ಯೆ 50 ಸಾವಿರ ಗಡಿ ದಾಟಲಿದೆ–ವಿಶ್ವಸಂಸ್ಥೆ



ಕಹ್ರಾಮನ್ಮರಸ್, ಫೆ12– ಟರ್ಕಿ ಮತ್ತು ಸಿರಿಯಾದಲ್ಲಿ ಸಂಭವಿಸಿದ ಭೀಕರ ಭೂಕಂಪದಲ್ಲಿ ಮೃತಪಟ್ಟವರ ಸಂಖ್ಯೆ ಭಾನುವಾರ 28 ಸಾವಿರಕ್ಕೆ ಏರಿಕೆಯಾಗಿದ್ದು, ಈ ಸಂಖ್ಯೆ ದ್ವಿಗುಣವಾಗಬಹುದು ಅಥವಾ ಅದಕ್ಕಿಂತ ಹೆಚ್ಚು ಆಗಬಹುದು ಎಂದು ವಿಶ್ವಸಂಸ್ಥೆಯ ಮಾನವೀಯ ನೆರವು ವಿಭಾಗದ ಮುಖ್ಯಸ್ಥ ಮಾರ್ಟಿನ್ ಗ್ರಿಫಿತ್ಸ್ ಅವರು ಹೇಳಿದ್ದಾರೆ. ಪರಿಸ್ಥಿತಿ ಪರಿಶೀಲಿಸಲು ಶನಿವಾರ ಟರ್ಕಿಯ ದಕ್ಷಿಣ ನಗರವಾದ ಕಹ್ರ ಮನ್‌ಮರಸ್‌ಗೆ ಆಗಮಿಸಿ ರುವ ಗ್ರಿಫಿತ್ಸ್ ಅವರು, ಸಾವಿನ ಸಂಖ್ಯೆ 50 ಸಾವಿರ ಗಡಿ ದಾಟುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ.

ನಾವು ಅವಶೇಷಗಳಡಿಯಲ್ಲಿ ಸಿಲುಕಿರುವವರನ್ನು ನಿಖರವಾಗಿ ಅಂದಾಜು ಮಾಡುವುದು ಕಷ್ಟ ಎಂದು ನಾನು ಭಾವಿಸುತ್ತೇನೆ. ಆದರೆ ಖಂಡಿತವಾಗಿಯೂ ಸಾವಿನ ಸಂಖ್ಯೆ ದ್ವಿಗುಣ ಅಥವಾ ಅದಕ್ಕಿಂತ ಹೆಚ್ಚಾಗಲಿದೆ ಎಂದು ಗ್ರಿಫಿತ್ಸ್ ಅವರು ಶನಿವಾರ ಸ್ಕೈ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ನಾವು ನಿಜವಾಗಿಯೂ ಸತ್ತವರ ಸಂಖ್ಯೆಯನ್ನು ನಿಖರವಾಗಿ ಎಣಿಸಲು ಪ್ರಾರಂಭಿಸಿಲ್ಲ ಎಂದು ಅವರು ಹೇಳಿದ್ದಾರೆ. ಶೀಘ್ರದಲ್ಲೇ, ರಕ್ಷಣಾ ಸಿಬ್ಬಂದಿಗಳು ಮಾನವೀಯ ನೆರವು ಏಜೆನ್ಸಿಗಳಿಗೆ ದಾರಿ ಮಾಡಿಕೊಡುತ್ತಾರೆ. ಮುಂದಿನ ತಿಂಗಳುಗಳಲ್ಲಿ ಭೂಕಂಪ ಪೀಡಿತರನ್ನು ನೋಡಿಕೊಳ್ಳುವುದು ಅವರ ಕೆಲಸವಾಗಲಿದೆ ಎಂದು ಅವರು ಹೇಳಿದ್ದಾರೆ.

ಭೂಕಂಪದಿಂದಾಗಿ, ಟರ್ಕಿ ಮತ್ತು ಸಿರಿಯಾ ಸೇರಿದತೆ 2.6 ಕೋಟಿ ಜನರು ತೊಂದರೆಗೀಡಾಗಿದ್ದು, ತಾತ್ಕಾಲಿಕ ಟೆಂಟ್‌ಗಳನ್ನು ನಿರ್ಮಿಸಿ ಜನರನ್ನು ಸ್ಥಳಾಂತರಿಸಲಾಗುತ್ತಿದೆ. ಟರ್ಕಿಯಲ್ಲಿ ಇದುವರೆಗೆ 24,617 ಮತ್ತು ಸಿರಿಯಾದಲ್ಲಿ 3,574 ಜನರು ಸಾವನ್ನಪ್ಪಿದ್ದಾರೆ. ಎರಡೂ ದೇಶಗಳಲ್ಲಿ ಒಟ್ಟು 28,191 ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಮತ್ತು ವೈದ್ಯರು ತಿಳಿಸಿದ್ದಾರೆ.

ಚಿರತೆ ಹಾವಳಿ ನಿಯಂತ್ರಣಕ್ಕೆ ಪರಿಣಾಮಕಾರಿ ಕಾರ್ಯಾಚರಣೆಗೆ ಸೂಚನೆ

ಮಂಡ್ಯ, ಫೆ.12– ಮೈಸೂರು,ಮಂಡ್ಯ ಜಿಲ್ಲೆಗಳಲ್ಲಿ ಹೆಚ್ಚುತ್ತಿರುವ ಚಿರತೆ ಹಾವಳಿ ನಿಯಂತ್ರಣಕ್ಕೆ ಸೂಕ್ತ ಕ್ರಮ ವಹಿಸುವಂತೆ ವಿಧಾನಪರಿಷತ್ ಸದಸ್ಯ ದಿನೇಶ ಗೂಳಿಗೌಡ ಚಿರತೆ ಟಾಸ್ಕ್‌ಫೋರ್ಸ್‌ಗೆ ಸೂಚನೆ ನೀಡಿದರು.



ಮೈಸೂರು ಮತ್ತು ಮಂಡ್ಯ ಜಿಲ್ಲೆಯ ಟಾಸ್ಕ್ ಫೋರ್ಸ್ ಮುಖ್ಯಸ್ಥ ಐಎಫ್‌ಎಸ್ ಅಧಿಕಾರಿ, ಅರಣ್ಯ ಇಲಾಖೆ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ಸೌರಭ್ ಕುಮಾರ್ ಅವರನ್ನು ಮಂಡ್ಯದಲ್ಲಿ ಭಾನುವಾರ ಭೇಟಿಯಾಗಿ ಸಂಬಂಧ ಚರ್ಚೆ ನಡೆಸಿದರು.

ಮಂಡ್ಯದಲ್ಲಿ ಇತ್ತೀಚೆಗೆ ಚಿರತೆಗಳ ಹಾವಳಿ ಹೆಚ್ಚಿದೆ. ಚಿರತೆಗಳು ಮನುಷ್ಯರ ಮೇಲೆ ದಾಳಿ ಮಾಡುತ್ತಿವೆ. ಕೆ.ಆರ್.ಪೇಟೆ, ಮದ್ದೂರು, ಮೇಲುಕೋಟೆ, ಮಳವಳ್ಳಿ, ನಾಗಮಂಗಲ ಭಾಗದಲ್ಲಿ ಚಿರತೆಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದು, ಸಾಕುಪ್ರಾಣಿಗಳಾದ ದನ, ನಾಯಿ, ಕುರಿ, ಮೇಕೆಗಳನ್ನು ಹೊತ್ತೊಯ್ಯುತ್ತಿವೆ. ಇದರಿಂದ ರೈತರು, ವಿದ್ಯಾರ್ಥಿಗಳು ಆತಂಕಗೊಂಡಿದ್ದಾರೆ. ಜನರ ಭಯ ನಿವಾರಿಸಲು ಜಾಗೃತಿ ಮೂಡಿಸುವ ಕಾರ್ಯವಾಗಬೇಕು. ಅಗತ್ಯಬಿದ್ದರೆ ಬೋನ್‌ಗಳನ್ನು ಇಟ್ಟುಚಿರತೆಗಳನ್ನು ಹಿಡಿಯಬೇಕು. ಜನರ ರಕ್ಷಣೆಗೆ ಟಾಸ್ಕ್‌ಫೋರ್ಸ್ ಸನ್ನದ್ಧವಾಗಿರಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಟಾಸ್ಕ್ ಫೋರ್ಸ್ ಮುಖ್ಯಸ್ಥ ಸೌರಭ್ ಕುಮಾರ್, ಚಿರತೆಗಳು ತಮ್ಮ ಸಂತಾನೋತ್ಪತ್ತಿಯ ಸಮಯದಲ್ಲಿ ಕಬ್ಬಿನ ಗದ್ದೆಗಳಿಗೆ ಬರುತ್ತಿವೆ. ಕಬ್ಬು ಕಟಾವಿಗೆ ಬರುವ ಅಥವಾ ಈ ಭಾಗದಲ್ಲಿ ಓಡಾಡುವ ರೈತರ ಮೇಲೆ ದಾಳಿ ಮಾಡುತ್ತಿವೆ. ಅಲ್ಲದೆ, ನಗರ ಪ್ರದೇಶದಲ್ಲಿ ಮಾಂಸ ತ್ಯಾಜ್ಯಗಳ ವಿಲೇವಾರಿ ಸರಿಯಾಗಿ ಆಗುತ್ತಿಲ್ಲ. ಬೀದಿ ನಾಯಿಗಳು, ಹಂದಿಗಳ ಪ್ರಮಾಣ ಹೆಚ್ಚಿದೆ. ಇದರಿಂದ ಚಿರತೆಗಳು ಆಹಾರ ಹುಡುಕಿಕೊಂಡು ನಗರ ಪ್ರದೇಶಗಳಿಗೆ ಬರುತ್ತಿವೆ ಎಂದು ಚಿರತೆಗಳು ನಗರ ಪ್ರದೇಶಕ್ಕೆ ಬರುತ್ತಿರುವ ಬಗ್ಗೆ ವಿವರಿಸಿದರು.

ಚಿರತೆಗಳ ವರ್ತನೆ ಹಾಗೂ ಅವುಗಳ ನಿಯಂತ್ರಣದ ಬಗ್ಗೆ ಗುಜರಾತ್‌ನ ಗಿರ್ ಅರಣ್ಯಾಧಿಕಾರಿಗಳು, ಮುಂಬೈನ ಸಂಜಯ ಗಾಂಧಿ ರಾಷ್ಟ್ರೀಯ ಉದ್ಯಾನದ ಅಧಿಕಾರಿಗಳ ಜತೆ ಚರ್ಚಿಸಲಾಗಿದೆ. ಚಿರತೆಗಳನ್ನು ಸೆರೆ ಹಿಡಿದಲ್ಲಿ ದೂರದ ಕಾಡಿಗೆ ಬಿಡಲು ವ್ಯವಸ್ಥೆ ಮಾಡಲಾಗಿದೆ ಎಂದು ಚಿರತೆಗಳ ನಿಯಂತ್ರಣಕ್ಕೆ ಕೈಗೊಂಡ ಕ್ರಮಗಳ ಬಗ್ಗೆ ಸೌರಭ್‌ಕುಮಾರ್ ತಿಳಿಸಿದ್ದಾರೆ ಎಂದು ದಿನೇಶ ಗೂಳಿಗೌಡ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸಹಾಯವಾಣಿ ಆರಂಭ

ಮಂಡ್ಯ ಹಾಗೂ ಮೈಸೂರು ಎರಡು ಜಿಲ್ಲೆಗಳನ್ನು ಸೇರಿಸಿ ಚಿರತೆ 24X7 ಸಹಾಯವಾಣಿಯನ್ನು ಜ.31 ರಂದು ರಚಿಸಲಾಗಿದ್ದು, ಹಾಗೇ ಡಿಸಿಎಫ್ ನೇತೃತ್ವದಲ್ಲಿ ಒಬ್ಬ ವಲಯ ಅರಣ್ಯ ಸಂರಕ್ಷಣಾಧಿಕಾರಿ ನಾಲ್ವರು ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, ಎಂಟು ಫಾರೆಸ್ಟ್ ಗಾರ್ಡ್ ಹಾಗೂ 40 ಜನ ಸಹಾಯಕರ ಈ ಟಾಸ್ಕ್‌ಫೋರ್ಸ್ ರಚನೆಯಾಗಿದ್ದು, ಈಗಾಗಲೇ ಕಾರ್ಯಾಚರಣೆ ಪ್ರಾರಂಭಿಸಲಾಗಿದೆ. ಸಹಾಯವಾಣಿ 9481996026 ಆಗಿದ್ದು, ಕರೆ ಮಾಡಿದ ಶೀಘ್ರ ಅರಣ್ಯಾಧಿಕಾರಿಗಳು ಸ್ಥಳಕ್ಕೆ ತೆರಳಲಿದ್ದಾರೆ. ಸಹಾಯವಾಣಿಗೆ ಸ್ವತಃ ಕರೆ ಮಾಡಿ ಪರಿಶೀಲನೆ ನಡೆಸಿದ್ದೇನೆ. ಸದ್ಯ ದಿನಕ್ಕೆ ಮೂರ್ನಾಲ್ಕು ಕರೆಗಳು ಬರುತ್ತಿವೆ. ಜನರು ಆತಂಕಗೊಳ್ಳಬಾರದು, ಎಚ್ಚರದಿಂದ ಇರಬೇಕು. ಅಗತ್ಯವಿದ್ದಾಗ ಸಹಾಯವಾಣಿಗೆ ಕರೆ ಮಾಡಿ ಸಹಾಯ ಪಡೆದುಕೊಳ್ಳಬೇಕು ಎಂದು ವಿಧಾನ ಪರಿಷತ್ ಸದಸ್ಯ ದಿನೇಶ ಗೂಳಿಗೌಡ ಮನವಿ ಮಾಡಿದ್ದಾರೆ.

ಚಾಮುಂಡೇಶ್ವರಿ ಕ್ಷೇತ್ರದ ಜನರಿಗೆ ಕಾಂಗ್ರೆಸ್, ಜೆಡಿಎಸ್‌ನಿಂದ ಅನ್ಯಾಯ

ಬಿಜೆಪಿ ಮುಖಂಡ ಅರುಣ್‌ಕುಮಾರ್ ಗೌಡ ಆರೋಪ



ಮೈಸೂರು, ಫೆ12(ಎಸ್‌ಬಿಡಿ)– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಜನರಿಗೆ ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳಿಂದ ಅನ್ಯಾಯವಾಗಿದೆ ಎಂದು ಬಿಜೆಪಿ ಮುಖಂಡ ಎನ್.ಅರುಣ್ ಕುಮಾರ್ ಗೌಡ ಹೇಳಿದರು.

ಜಯಪುರ ಹೋಬಳಿ ಕೆಲ್ಲಹಳ್ಳಿ ಗ್ರಾಮದಲ್ಲಿ ಬಿಜೆಪಿ ಸೇರಿದ ಹಲವು ಮುಖಂಡರನ್ನು ಪಕ್ಷಕ್ಕೆ ಸ್ವಾಗತಿಸಿ ಮಾತನಾಡಿದ ಅವರು, ಚಾಮುಂಡೇಶ್ವರಿ ಕ್ಷೇತ್ರದ ಜನ ಕಾಂಗ್ರೆಸ್ ಹಾಗೂ ಜೆಡಿಎಸ್ ಬೆಂಬಲಿಸಿದ್ದರು. ಆದರೆ ಮತ ಪಡೆದು ಶಾಸಕರಾದವರು ಕ್ಷೇತ್ರದ ಅಭಿವೃದ್ಧಿ ಮರೆತಿದ್ದಾರೆ. ಈ ಮೂಲಕ ಎರಡೂ ಪಕ್ಷಗಳು ತಮಗೆ ಆಶೀರ್ವದಿಸಿ ಅವಕಾಶ ನೀಡಿದ ಜನರಿಗೆ ಅನ್ಯಾಯ ಮಾಡಿವೆ ಎಂದರು.

ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ಸಾಕಷ್ಟು ಜನಪರ ಕಾರ್ಯಕ್ರಮಗಳನ್ನು ನೀಡುತ್ತಲೇ ಬಂದಿದೆ. ರಾಜ್ಯದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅತ್ಯುತ್ತಮ ಆಡಳಿತ ನೀಡಿದ್ದಾರೆ. ರೈತಪರ ನಾಯಕ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ನೀಡಿದ ಸಾಕಷ್ಟು ಅಭಿವೃದ್ಧಿ ಯೋಜನೆಗಳು ಇನ್ನೂ ಜನರ ಮನಸ್ಸಿನಲ್ಲಿ ಹಸಿರಾಗಿವೆ. ಹಾಗಾಗಿ ರಾಜ್ಯದ ಜನರಲ್ಲಿ ಬಿಜೆಪಿ ಮೇಲಿನ ನಂಬಿಕೆ ಇನ್ನಷ್ಟು ಗಟ್ಟಿಯಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಮತ್ತೆ ಬಿಜೆಪಿ ಬಹುಮತದೊಂದಿಗೆ ಸರ್ಕಾರ ರಚನೆ ಮಾಡುವುದು ನಿಶ್ಚಿತ. ಕೇಂದ್ರ ಹಾಗೂ ರಾಜ್ಯದಲ್ಲಿ ಡಬಲ್ ಇಂಜಿನ್ ಸರ್ಕಾರ ಶತಸಿದ್ಧ. ಈ ಪರಿಸ್ಥಿತಿಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲೂ ಬಿಜೆಪಿ ಅಭ್ಯರ್ಥಿಗೆ ಬೆಂಬಲಿಸಿ ಶಾಸಕರನ್ನಾಗಿ ಆಯ್ಕೆ ಮಾಡಬೇಕು. ಇದು ನಮ್ಮ ನಿಮ್ಮೆಲ್ಲರ ಕರ್ತವ್ಯವೂ ಆಗಿದೆ. ಬಿಜೆಪಿ ಜನಪರ ಕಾರ್ಯಗಳ ಬಗ್ಗೆ ಜನರಲ್ಲಿ ಮನವರಿಕೆ ಮಾಡಿಕೊಡೋಣ ಎಂದು ಪಕ್ಷದ ಕಾರ್ಯಕರ್ತರಲ್ಲಿ ಮನವಿ ಮಾಡಿದರು.

ಇದೇ ವೇಳೆ ಬೇರೆ ಪಕ್ಷಗಳಲ್ಲಿ ಗುರುತಿಸಿಕೊಂಡಿದ್ದ ಕೆಲ್ಲಹಳ್ಳಿ ಗ್ರಾಮದ ಉಮೇಶ್, ಅನಿಲ್, ಮಹಾದೇವ, ರವಿಕುಮಾರ್, ಚೇತನ್, ಬಸವರಾಜು, ಸ್ವಾಮಿ, ಯೋಗೇಶ್, ಕುಮಾರ, ನಂದೀಶ್, ಶಿವುಬಾಬು, ಪ್ರಭಾಕರ್, ಪಚ್ಚೆಗೌಡ ಮತ್ತಿತರರಿಗೆ ಬಿಜೆಪಿ ಬಾವುಟ ನೀಡಿ ಪಕ್ಷಕ್ಕೆ ಸ್ವಾಗತಿಸಿದರು. ಪಕ್ಷದ ಮುಖಂಡರಾದ ಗೋಪಾಲ್ ಗೌಡ, ವಿಜಯ್ ಗೌಡ, ಎನ್.ಕೆ.ರವಿಕುಮಾರ್, ಮೂಗನಹುಂಡಿ ಮಂಜು, ಪ್ರಭು, ಕೋಟೆಹುಂಡಿ ಮಾಲೆಗೌಡ ಮತ್ತಿತರರು ಉಪಸ್ಥಿತರಿದ್ದರು.

4 ಹೈಕೋರ್ಟ್‌ಗಳಿಗೆ ಮುಖ್ಯ ನ್ಯಾಯಮೂರ್ತಿಗಳ ನೇಮಕ

ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು

ನವದೆಹಲಿ, ಫೆ12– ನಾಲ್ಕು ಹೈಕೋರ್ಟ್‌ಗಳಿಗೆ ಮುಖ್ಯ ನ್ಯಾಯಮೂರ್ತಿಗಳನ್ನು ಭಾನುವಾರ ನೇಮಕ ಮಾಡಲಾಗಿದೆ ಎಂದು ಕಾನೂನು ಸಚಿವ ಕಿರಣ್ ರಿಜಿಜು ತಿಳಿಸಿದ್ದಾರೆ.

ಅವರು ಟ್ವಿಟರ್‌ನಲ್ಲಿ ಹೊಸ ನೇಮಕಾತಿಗಳನ್ನು ಪ್ರಕಟಿಸಿದ್ದಾರೆ. ಭಾರತದ ಸಂವಿಧಾನದ ಅಡಿಯಲ್ಲಿ ಸಂಬಂಧಿತ ನಿಬಂಧನೆಗಳ ಪ್ರಕಾರ ಕೆಳಗಿನ ನ್ಯಾಯಾಧೀಶರನ್ನು ವಿವಿಧ ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳಾಗಿ ನೇಮಿಸಲಾಗಿದೆ. ಅವರೆಲ್ಲರಿಗೂ ನಾನು ಶುಭ ಹಾರೈಸುತ್ತೇನೆ! ಎಂದು ರಿಜಿಜು ಟ್ವೀಟ್ ಮಾಡಿದ್ದಾರೆ.

ಗುಜರಾತ್ ಹೈಕೋರ್ಟ್‌ನ ನ್ಯಾಯಮೂರ್ತಿ ಸೋನಿಯಾ ಗಿರಿಧರ್ ಗೋಕಣಿ ಅವರನ್ನು ಮುಖ್ಯ ನ್ಯಾಯಮೂರ್ತಿಯಾಗಿ ನೇಮಕ ಮಾಡಲಾಗಿದೆ. ಗುಜರಾತ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದ ಅರವಿಂದ್ ಕುಮಾರ್ ಅವರು ಸುಪ್ರೀಂ ಕೋರ್ಟ್‌ಗೆ ಪದೋನ್ನತಿ ಹೊಂದಿದ ನಂತರ ಸೋನಿಯಾ ಗಿರಿಧರ್ ಅವರನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿಯಾಗಿ ನೇಮಿಸಲಾಗಿತ್ತು.

ರಾಜಸ್ಥಾನ ಹೈಕೋರ್ಟ್‌ನ ನ್ಯಾಯಮೂರ್ತಿ ಸಂದೀಪ್ ಮೆಹ್ತಾ ಅವರನ್ನು ಗುವಾಹಟಿ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಿಸಲಾಗಿದೆ. ಒರಿಸ್ಸಾ ಹೈಕೋರ್ಟ್‌ನ ನ್ಯಾಯಮೂರ್ತಿ ಜಸ್ವಂತ್ ಸಿಂಗ್ ಅವರನ್ನು ತ್ರಿಪುರಾ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಬಡ್ತಿ ನೀಡಲಾಗಿದೆ. ಗುವಾಹಟಿ ಹೈಕೋರ್ಟ್ ನ್ಯಾಯಮೂರ್ತಿಯಾಗಿದ್ದ ಎನ್. ಕೋಟೇಶ್ವರ್ ಸಿಂಗ್ ಅವರನ್ನು ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕ ಮಾಡಲಾಗಿದೆ.

ಬಜೆಟ್ ಅಧಿವೇಶನ: ಇಂದು ಪ್ರತಿಪಕ್ಷಗಳ ಸಭೆ ಕರೆದ ಮಲ್ಲಿಕಾರ್ಜುನ ಖರ್ಗೆ

ನವದೆಹಲಿ, ಫೆ.12– ಕಾಂಗ್ರೆಸ್ ಅಧ್ಯಕ್ಷ ಮತ್ತು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಸೋಮವಾರ ಸಮಾನಮನಸ್ಕ ಪ್ರತಿಪಕ್ಷಗಳ ಸಭೆ ಕರೆದಿದ್ದಾರೆ. ರಾಜ್ಯಸಭೆ ಕಲಾಪ ಆರಂಭಕ್ಕೂ ಮುನ್ನ ಸಂಸತ್ತಿನಲ್ಲಿರುವ ಖರ್ಗೆ ಅವರ ಕಚೇರಿಯಲ್ಲಿ ಸಭೆ ನಡೆಯಲಿದೆ. ನಾಳೆ ರಾಜ್ಯಸಭೆಯಲ್ಲಿ ಮೋದಿ ಸರ್ಕಾರದ ವಿರುದ್ಧ ಪ್ರತಿಪಕ್ಷಗಳ ಕಾರ್ಯತಂತ್ರವನ್ನು ರೂಪಿಸಲು ಈ ಸಭೆ ಕರೆಯಲಾಗಿದೆ ಎಂದು ನಂಬಲಾಗಿದೆ.

ಮೈಸೂರು ಮಿತ್ರ

ಸೋಮವಾರ 13 ಫೆಬ್ರವರಿ 2023

ನಕ್ಕರೆ ಅದೇ ಸ್ವರ್ಗ

ಹೆಂಡತಿ : ಇಂಗ್ಲೀಷ್ ಪೇಪರ್ ಓದುತ್ತಾ, ರೀ ಕನ್ನಡದಲ್ಲಿ ಅದೆಂಥಾ ಫಿಲ್ಮ್ ತೆಗಿತ್ತಾರೆ, ಇಲ್ಲಿ ನೋಡಿ, 'ಬೀಡಿ ಸೇದಿ ಬಂದ' ಅಂತೆ ಸಿನೆಮಾ ಹೆಸರು.

ಗಂಡ : ಅಯ್ಯೋ... 'ಬೀಡಿ ಸೇದಿ ಬಂದ' ಅಲ್ಲಾ ಲೇ ಅದು 'ಬಿಡಿಸಿದ ಬಂಧ'...

ಮೈಸೂರು ಮಿತ್ರ

ಸೋಮವಾರ, 13 ಫೆಬ್ರವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಮನಸ್ಸು ಮಲಿನವಾದರೆ
ಮಾತು ಕಲ್ಮಶವಾಗಿರುತ್ತದೆ...

– ಪರಮಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮೀಜಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕುಂಬಾರನ ಮಗಳು ಲಾಭ ಬರದ ಹೊರತು ಮಡಿಕೆ ಒಡೆಯುವುದಿಲ್ಲ.

ನಿಮ್ಮ ಪತ್ರಗಳು

ಹೆಚ್‌ಡಿಕೆ ಹೇಳಿಕೆ ಶೋಭೆ ತರುವಂತಹದ್ದಲ್ಲ...

ಮಾನ್ಯರೇ,

ರಾಜ್ಯ ವಿಧಾನಸಭೆ ಚುನಾವಣೆ ಹತ್ತಿರವಾಗುತ್ತಿದ್ದಂತೆ ವಿವಿಧ ಪಕ್ಷಗಳು ಚುನಾವಣಾ ಪೂರ್ವ ಪ್ರಚಾರಕ್ಕೆ ಅಣಿಯಾಗಿವೆ. ರಾಜ್ಯದಲ್ಲಿ ಜನತಾ ಪಕ್ಷದಿಂದ ಬೇರ್ಪಟ್ಟು ಜನತಾದಳ (ಜಾತ್ಯಾತೀತ) ಎಂಬ ಪ್ರಾದೇಶಿಕ ಪಕ್ಷ ರಚಿಸಿಕೊಂಡು ತಮ್ಮದೇ ಆದ ಛಾಪನ್ನೂ ಮೂಡಿಸುತ್ತಿರುವ ಜೆಡಿಎಸ್ ಪಕ್ಷವು ವಿಧಾನಸಭಾ ಚುನಾವಣಾ ಪ್ರಯುಕ್ತ ಪಂಚರತ್ನ ಯಾತ್ರೆಯನ್ನು ಆರಂಭಿಸಿದೆ. ಈ ಪಂಚರತ್ನ ಯಾತ್ರೆಯ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ.ಕುಮಾರಸ್ವಾಮಿಯವರು ಇತ್ತೀಚೆಗೆ ಭಾರತೀಯ ಜನತಾ ಪಾರ್ಟಿ (ಬಿ.ಜೆ.ಪಿ)ಯ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಪ್ರಹ್ಲಾದ್ ಜೋಷಿಯವರ ಹೆಸರನ್ನು ಆರ್‌ಎಸ್‌ಎಸ್ ನಿರ್ಧರಿಸುವುದನ್ನು ಉಲ್ಲೇಖಿಸುತ್ತಾ, ಒಂದು ವರ್ಗದ ಜನರ ಭಾವನೆಗಳಿಗೆ ಧಕ್ಕೆ ತಂದಿರುವುದು ಶೋಭೆ ತರುವಂತಹ ವಿಚಾರವಲ್ಲ.

ಪ್ರಹ್ಲಾದ್ ಜೋಷಿಯವರು ಮೂಲತಃ ದಕ್ಷಿಣ ಭಾರತದ ಬ್ರಾಹ್ಮಣರಲ್ಲ. ಅವರು ಮರಾಠಿ ಪೇಶ್ವೆ ಪಂಗಡಕ್ಕೆ ಸೇರಿದವರೆಂದು ಹೇಳುತ್ತಾ, ಜಗತ್ತಿಗೆ ಮಾದರಿ ದೇವ ಸಂಸ್ಥಾನವೆಂದು ಪ್ರಸಿದ್ಧಿ ಪಡೆದ ದಕ್ಷಿಣ ಭಾರತದ ಶ್ರೀಮನ್ ಮಹಾ ಸಂಸ್ಥಾನ ಶೃಂಗೇರಿಯ ಮೇಲೆ ಮರಾಠ ಪೇಶ್ವೆಗಳು ದಾಳಿ ನಡೆಸಿದ ಬಗ್ಗೆ ಮಾತನಾಡಿರುವುದು ಅವರ ರಾಜಕೀಯ ಹತಾಶೆಯ ಪರಮಾವಧಿಯಾಗಿರುತ್ತದೆ. ಇತಿಹಾಸವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಭಾರತದ ಸಂಸ್ಕೃತಿ, ಚರಿತ್ರೆ, ಮತ್ತು ಪ್ರಸಿದ್ಧ ದೇವಾಲಯಗಳ ಮೇಲೆ ನಿರಂತರ ದಾಳಿ ನಡೆದಿರುವುದು ಇವರಿಗೆ ತಿಳಿದಿಲ್ಲವೇ. ಯಾವುದೇ ಒಂದು ಧರ್ಮ, ಪಂಗಡ, ಜಾತಿ, ಸಮುದಾಯಕ್ಕೆ ಸೇರಿದ ವ್ಯಕ್ತಿಗಳ ಮೇಲೆ ರಾಜಕೀಯದ ಬೇಳೆ ಬೇಯಿಸಿಕೊಳ್ಳುವ ಸಲುವಾಗಿ ಇಂತಹ ಹೇಳಿಕೆ ನೀಡುವುದು ಎಷ್ಟು ಸಮಂಜಸ.

ಹಿಂದೊಮ್ಮೆ ಒಕ್ಕಲಿಗ ಮಠದ ಮೇಲೆ ಮುನಿಸಿಕೊಂಡು ಪರ್ಯಾಯವಾಗಿ ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠವನ್ನು ಸ್ಥಾಪಿಸಿದ್ದು ಯಾರು ಎಂಬುದನ್ನು ಜನರಿಗೆ ತಿಳಿಸಿಕೊಡಿ ಸನ್ಮಾನ್ಯ ಕುಮಾರಸ್ವಾಮಿಯವರೇ. ಬ್ರಾಹ್ಮಣ ಸಮುದಾಯದವರು **"ಸರ್ವೇಜನಾಃ ಸುಖಿನೋಭವಂತು"** ಎಂಬ ಧ್ಯೇಯ ವಾಕ್ಯವನ್ನು ಪರಿಪಾಲಿಸಿಕೊಂಡು ಯಾರಿಗೂ ತೊಂದರೆ ಕೊಡದೆ ತಮ್ಮದೇ ಆದ ಜ್ಞಾನ ಮಾರ್ಗದಿಂದ ಜೀವನವನ್ನು ಸಾಗಿಸುತ್ತಿದ್ದಾರೆ. ತಮ್ಮ ಅಧಿಕಾರದ ಲಾಲಸೆಗಾಗಿ ಮನಸ್ಸಿಗೆ ಬಂದ ಹಾಗೆ ಹೇಳಿಕೆ ನೀಡುವುದನ್ನು ಬಿಟ್ಟು ಸಮಾನಾಂತರವಾಗಿ ಚಿಂತಿಸುವುದು ಒಳಿತು.

ಇತಿಹಾಸವನ್ನು ಯಾರೂ ತಿರುಚಲು ಸಾಧ್ಯವಿಲ್ಲ. ಹಾಗೇ ಇತಿಹಾಸವೆಲ್ಲವೂ ಸತ್ಯವೂ ಹೌದು ಎಂಬುದನ್ನು ಸನ್ಮಾನ್ಯರು ಒಪ್ಪಿಕೊಳ್ಳಬೇಕಾಗುತ್ತದೆ. ಆಯಾ ಕಾಲಮಾನದ ಪ್ರಕಾರ ನಡೆದ ಘಟನಾವಳಿಗಳು, ಅಂದಿನ ಆಳ್ವಿಕೆ ನಡೆಸುತ್ತಿದ್ದ ರಾಜ ಮನೆತನ, ಸಾಮಂತರು, ಅರಸರು, ಪಾಳೇಗಾರರ ಹಾಗೂ ಇನ್ನಿತರ ಆಕ್ರಮಣಕಾರರ ನಡುವೆ ಸಂಘರ್ಷವೇರ್ಪಡುತ್ತಿತ್ತು ಎಂಬ ಜ್ಞಾನವನ್ನು ಪರಾಮರ್ಶಿಸಬೇಕು.

ಸಂವಿಧಾನ ನೀಡಿದ ಅಭಿಪ್ರಾಯ ಸ್ವಾತಂತ್ರ್ಯವನ್ನು ಒಂದು ವರ್ಗದ ಜನರ ಸೂಕ್ಷ್ಮ ಭಾವನೆಗಳ ವಿರುದ್ಧ ಬಳಸುವುದು ಎಷ್ಟು ಸೂಕ್ತ ಎಂಬುದು ಪ್ರಶ್ನಾರ್ಹ. ಮುಂದಾದರೂ ಹೇಳಿಕೆಗಳನ್ನು ನೀಡುವಾಗ ಜವಾಬ್ದಾರಿತನವನ್ನು ತೋರಿಸಲಿ ಎಂಬುದೇ ನಮ್ಮ ಆಶಯ.

– ವೇಣು, ಬೀರಿಹುಂಡಿ, ಮೈಸೂರು

ಕರುನಾಡಿನಲ್ಲಿ ಭಾರತ ಮಾತೆ ದೇಗುಲ

ಮಾನ್ಯರೇ,

ನಮ್ಮ ದೇಶದಲ್ಲಿ ಮೊದಲ ಭಾರತ ಮಾತೆ ದೇಗುಲವಿರುವುದು ಭಾರತ ಭೂಶಿರ ಮಂದಿರ ಸುಂದರಿ ಕನ್ಯಾಕುಮಾರಿಯಲ್ಲಿ ಸಿಂಹವಾಹನಳಾಗಿ, ಈಗ ಎರಡನೇ ದೇಗುಲ ನಮ್ಮದೇ ನೆಲದ ಪುತ್ತೂರಿನ ಸಮೀಪದ ಹನುಮ ಗಿರಿಯಲ್ಲಿ ಅಮರ ಜ್ಯೋತಿ ಮಂದಿರವಾಗಿ ಭಾರತ ಮಾತೆ ದೇಗುಲ ಲೋಕಾರ್ಪಣೆಗೊಂಡಿದೆ. ಇದು ನಿಜಕ್ಕೂ ನಮಗೆಲ್ಲ ಸಂತಸದ ಹಾಗೂ ಹೆಮ್ಮೆಯ ಸಂಗತಿ.

ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ, ಎಂಬಂತೆ ನಮ್ಮ ತಾಯಿ ಹಾಗೂ ತಾಯಿ ನೆಲ ಸ್ವರ್ಗಕ್ಕಿಂತಲು ಮೇಲು, ನಮ್ಮ ತಾಯಿ ಭಾರತ ಮಾತೆಯನ್ನು ಪೂಜಿಸಲು ದೇಗುಲ ನಿರ್ಮಿತವಾಗಿರುವುದು ಸಮಂಜಸ ಹಾಗೂ ಅರ್ಥಪೂರ್ಣ.

ನಮಗೆಲ್ಲ ಆಶ್ರಯದಾತಳಾಗಿ ಅನ್ನ ನೀರು ಕೊಟ್ಟು ಕಾಪಾಡುತ್ತಿರುವ ಆಕೆಗೆ ಭಕ್ತಿಪೂರ್ವಕವಾಗಿ ವಂದಿಸಿ ಅರ್ಚಿಸಿ ನಮಸ್ಕರಿಸುವ ಸುಂದರ ಸ್ಥಳ. ಭಾರತ ಮಾತೆಯನ್ನು ಕಾಯುತ್ತಿರುವ ಯೋಧ ಹಾಗೂ ಅನ್ನದಾತ ರೈತನ ಶಿಲಾ ಪ್ರತಿಮೆಗಳು ವಿಶೇಷ ಹಾಗೂ ಸಮರ್ಪಕ. ಮೂಲ ಸಂವಿಧಾನ ಗ್ರಂಥವೇ ಈ ದೇಗುಲದ ಭಗವದ್ಗೀತೆ. ಇಷ್ಟೆಲ್ಲಾ ವಿಶೇಷವಿರುವ ಈ ದೇಗುಲಕ್ಕೆ ದೇಶ ಪ್ರೇಮಿಗಳು ದೇಶಭಕ್ತರು ಒಮ್ಮೆ ಭೇಟಿ ನೀಡಲೇ ಬೇಕು.

– ಪುಷ್ಪಲತಾ ಫಣಿರಾಜ್, ಅಗ್ರಹಾರ ಮೈಸೂರು.

ಮತದಾನ...

ಮತ–ದಾನದ ಬದಲು
ಮತ–ಮಾರಾಟ ಸಲ್ಲದು
ಹಲವಾರು ತೊಡಕುಗಳ ದಾಟಿ
ಸಿಕ್ಕ ಅಪೂರ್ವ ಅತ್ಯಮೂಲ್ಯ ಮುತ್ತದು
ಜಾತಿ–ಮತ ಮೀರಿ
ಲಿಂಗ–ಧರ್ಮ ದೂರಿ
ಷಡ್ಯಂತರಗಳೆದುರು ಗಟ್ಟಿಯಾಗಿ ಬೇರೂರಿ
ಬೆಳೆಯಲು ನೆರವಾದ ಮೂಲಭೂತ ಹಕ್ಕು;
ಫಲವತ್ತಾದ ಮತದ ಮಣ್ಣಲ್ಲಿ
ಜಾತೀಯತೆಯೆಂಬ ವಿಷಬೀಜ ಬಿತ್ತಿ
ತಾರತಮ್ಯದ ರಾಸಾಯನಿಕ ಸಿಂಪಡಿಸಿ
ಅಪ್ರಮಾಣಿಕ ನಾಯಕರ ಇಳುವರಿ ತೆಗೆದರೆ
ಪ್ರಕೃತಿಯ ಒಡಲ ಸಹಬಾಳ್ವೆ ಎಲ್ಲಿ ಹೋದೀತು?
ತೆಗೆದ ನಿಧಿಯ ಒಡಲಲ್ಲೆ ಹಾಳುಗೆಡವಿ
ಮುಖವಾಡ ಧರಿಸಿದ ರಾಜಕೀಯ ನಾಯಕರ
ಕೈಯಲ್ಲಿ ಮುದುಡಿ ಎಸೆಯುವ ರದ್ದಿಯಾಗದೆ
ಯೋಗ್ಯರಿಗೆ ಸಲ್ಲುವಂತೆ ಮತದಾನ ಮಾಡಿ
ಒಂದೊಂದು ಮತಕ್ಕೂ ಅರ್ಥ ನೀಡಿ.

–ಆರ್.ರಕ್ಷಿತಾ, ವಿದ್ಯಾರ್ಥಿನಿ
ಮಹಾರಾಣಿ ಕಲಾ ಕಾಲೇಜು



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866–77284

ಬೆರಗು

ಪ್ರೀತಿ ಮಾಯೆ ಹುಷಾರು!

ಎರಡು–ಮೂರು ದಶಕಗಳ ಹಿಂದೆ ಫೆಬ್ರವರಿ ತಿಂಗಳು ಬಂತೆಂದರೆ ಯುವ ವಿದ್ಯಾರ್ಥಿಗಳಿಗೆ ಪರೀಕ್ಷಾ ಜ್ವರ ಕಾಣಿಸಿಕೊಳ್ಳುತ್ತಿತ್ತು. ಆದರೆ ಇಂದಿನ ಪೀಳಿಗೆಯ ಅನೇಕ ಯುವಕ–ಯುವತಿಯರಿಗೆ ಫೆಬ್ರವರಿಯಲ್ಲಿ ಪ್ರೇಮ ಜ್ವರ ಕಾಣಿಸಿಕೊಳ್ಳುತ್ತದೆ. ಶಾಲಾ–ಕಾಲೇಜುಗಳನ್ನು ವಿದ್ಯಾ ಮಂದಿರವೆಂದು ಭಾವಿಸಿ, ಉತ್ತಮ ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ಕಲಿಯಲಿ ಎಂಬ ಉದ್ದೇಶದಿಂದ ಪೋಷಕರು ಮಕ್ಕಳನ್ನು ಶಾಲಾ–ಕಾಲೇಜುಗಳಿಗೆ ಸೇರಿಸುತ್ತಿದ್ದರು. ಅಷ್ಟೇ ಭಯ ಹಾಗೂ ಭಕ್ತಿಯಿಂದ ವಿದ್ಯಾರ್ಥಿಗಳು ಸಹ ಶಾಲಾ ಕಾಲೇಜುಗಳನ್ನು ಸದ್ಬಳಕೆ ಮಾಡಿಕೊಳ್ಳುತ್ತಿದ್ದರು. ತಾಯಿ–ತಂದೆಯನ್ನು ಪೂಜಿಸುವಷ್ಟೇ ಗುರುಹಿರಿಯರನ್ನು ಗೌರವಿಸುತ್ತಿದ್ದರು. ಆದರೆ ಇಂದಿನ ಶಾಲಾ ಕಾಲೇಜುಗಳ ವಾತಾವರಣವೇ ಬದಲಾಗಿ ಹೋಗಿದೆ. ಮಾಹಿತಿ ತಂತ್ರಜ್ಞಾನದ ಈ ಆಧುನಿಕ ಯುಗದಲ್ಲಿ ಶಾಲಾ ಕಾಲೇಜಿಗೆ ಬರುವ ಬಹುತೇಕ ವಿದ್ಯಾರ್ಥಿಗಳ ಉದ್ದೇಶವೇ ಮಾರ್ಪಾಡಾಗಿದೆ. ಸ್ಪೆಷಲ್ ಕ್ಲಾಸ್, ಹೋಂವರ್ಕ್, ರೆಕಾರ್ಡ್, ಲ್ಯಾಬ್ ಈ ಪದಗಳ ಬದಲಾಗಿ ಲವ್, ಪ್ರಪೋಸ್, ಕ್ರಷ್, ಬ್ರೇಕ್ ಅಪ್ ಪದಗಳು ಹೆಚ್ಚು ಚಾಲ್ತಿಯಲ್ಲಿವೆ. ಉತ್ತಮ ಶಿಕ್ಷಣದೊಂದಿಗೆ ಉದ್ಯೋಗ ಪಡೆದು ಬದುಕನ್ನು ಹಸನು ಮಾಡಿಕೊಳ್ಳುವ ಬದಲು 'ಹರ್ಷದ ಕೂಳಿಗೆ ವರ್ಷದ ಕೂಳು ಕಳೆದುಕೊಂಡಂತೆ' ಎಂಬ ಗಾದೆ ಮಾತಿನಂತೆ ವಿದ್ಯಾರ್ಥಿ ಜೀವನದಲ್ಲಿಯೇ ಪ್ರೀತಿ–ಪ್ರೇಮ ಎಂಬ ಮಾಯೆಯ ವರ್ತುಲದಲ್ಲಿ ಸಿಲುಕಿ ತಮ್ಮ ಅಮೂಲ್ಯ ಭವಿಷ್ಯಕ್ಕೆ ತಾವೆ ಕೊಡಲಿ ಇಟ್ಟುಕೊಳ್ಳುತ್ತಿದ್ದಾರೆ. ಸಣ್ಣ–ಸಣ್ಣ ಆಸೆಗಳಿಗೋಸ್ಕರ ದೊಡ್ಡ ದೊಡ್ಡ ಕನಸುಗಳನ್ನು ಬಲಿಕೊಟ್ಟುಬಿಡುತ್ತಾರೆ. ಕ್ಯಾಂಪಸ್ ಸೆಲೆಕ್ಷನ್ ಪ್ರಕ್ರಿಯೆಯಲ್ಲಿ ಉತ್ತಮ ಸಂಸ್ಥೆ/ಕಂಪನಿಗಳಲ್ಲಿ ಕೆಲಸ ಗಿಟ್ಟಿಸುವ ಹಾಗೆಯೇ ಇಂದು ತಮ್ಮ ಜೀವನ ಸಂಗಾತಿಯನ್ನು ಕ್ಯಾಂಪಸ್‌ನಲ್ಲಿಯೇ ಆಯ್ಕೆ ಮಾಡಿಕೊಳ್ಳಲು ಮುಂದಾಗುತ್ತಿರುವುದು ವಿಪರ್ಯಾಸದ ಸಂಗತಿ.

ಪ್ರತಿ ವರ್ಷ ಫೆಬ್ರವರಿ 14ರಂದು 'ವ್ಯಾಲೆಂಟೈನ್ಸ್ ಡೇ'ಅನ್ನು ಜಾಗತಿಕವಾಗಿ ಆಚರಿಸಲಾಗುತ್ತದೆ. ಇದನ್ನು ನಮ್ಮ ಭಾಷೆಯಲ್ಲಿ 'ಪ್ರೇಮಿಗಳ ದಿನ' ಎಂದು ಹೆಸರಿಸಲಾಗಿದೆ. ರೋಮ್ ದೇಶದಲ್ಲಿ ಸೇಂಟ್ ವ್ಯಾಲೆಂಟೇನ್ ಎಂಬ ಪಾದ್ರಿಯೊಬ್ಬ ಮೂರನೇ ಶತಮಾನದಲ್ಲಿದ್ದನು. ಅಂದಿನ ದೊರೆ ಕ್ಲಾಡಿಯಸ್ 2 ಮದುವೆಯಾದ ಸೈನಿಕರು ಅಸಮರ್ಥರು ಎಂದು ಭಾವಿಸಿ ಮದುವೆಯನ್ನೇ ರದ್ದುಗೊಳಿಸಿದ್ದನು. ಇದನ್ನು ಒಪ್ಪದ ಪಾದ್ರಿ ವ್ಯಾಲೆಂಟೇನ್ ಗುಟ್ಟಾಗಿ ಮದುವೆಗಳನ್ನು ಮಾಡಿಸುತ್ತಿದ್ದನು. ದೊರೆಗೆ ಇದು ಗೊತ್ತಾಗಿ ಪಾದ್ರಿಗೆ ಮರಣ ದಂಡನೆಯನ್ನು ವಿಧಿಸಿ ಜೈಲಿಗೆ ಅಟ್ಟುತ್ತಾನೆ. ಫೆಬ್ರವರಿ 14 ರಂದು ಪಾದ್ರಿಯನ್ನು ನೇಣಿಗೆ ಏರಿಸಲಾಗುತ್ತದೆ. ಆದರೆ ಪಾದ್ರಿಯು ಜೈಲು ಅಧಿಕಾರಿಯ ಮಗಳನ್ನೇ ಮೋಹಿಸಿರುತ್ತಾನೆ. ತನ್ನ ಪ್ರೇಯಸಿಗೆ ಕಳುಹಿಸಿದ್ದ ಪ್ರೇಮಪತ್ರದ ಕೊನೆಯಲ್ಲಿ 'ನಿನ್ನ ಪ್ರೀತಿಯ ವ್ಯಾಲೆಂಟೇನ್ ನಿಂದ' ಎಂದು ಬರೆದಿರುತ್ತಾನೆ. ಪ್ರತಿವರ್ಷ ರೋಮನ್ನರು ಫೆಬ್ರುವರಿ ಮಧ್ಯಭಾಗದಲ್ಲಿ 'ಲೂಪರ್ ಕೇಲಿಯ' ಎಂಬ ಹಬ್ಬವನ್ನು ಆಚರಿಸುತ್ತಾರೆ. ಪಾದ್ರಿ ವ್ಯಾಲೆಂಟೇನ್ ಸ್ಮರಣಾರ್ಥ ಆ ಹಬ್ಬವನ್ನು ಫೆಬ್ರವರಿ 14ಕ್ಕೆ ಆಚರಿಸುವ ಪರಿಪಾಠ ಬರುತ್ತದೆ. ಇದು ವ್ಯಾಲೆಂಟೇನ್ಸ್ ಡೇ ಹಿನ್ನೆಲೆ. ಪರದೇಶದ ಒಂದು ಹಬ್ಬದ ದಿನವನ್ನು ನಮ್ಮ ದೇಶದ ಯುವಕರು ಪ್ರೇಮಿಗಳ ದಿನ ಎಂದು ವೈವಿಧ್ಯಮಯ ರೀತಿಯಲ್ಲಿ ಆಚರಿಸುತ್ತಿರುವುದು ಅರ್ಥಹೀನವಾದುದು.

'ಪ್ರೀತಿ' ಎಂಬುದು ಕೆಲವರಿಗೆ ವರವಾಗಿ ಪರಿಣಮಿಸಿದರೆ ಅನೇಕರಿಗೆ ಜೀವನದ ಬಹು ದೊಡ್ಡ ಶಾಪವಾಗಿ ಕಾಡುತ್ತದೆ. ಯೌವನದ ಅಮೂಲ್ಯ ಶಕ್ತಿ ಹಾಗೂ ಯುಕ್ತಿಯನ್ನು ಪ್ರೀತಿ–ಪ್ರೇಮ ಎಂಬ ವಿಚಾರಕ್ಕೆ ಹಾಳುಮಾಡಿಕೊಂಡು, ತಾವು ಯಾತನೆ ಅನುಭವಿಸುವುದರ ಜೊತೆಗೆ ಹೆತ್ತವರ ಹಾಗೂ ಸಂಬಂಧಿಕರ ನೋವಿಗೂ ಕಾರಣರಾಗುತ್ತಾರೆ. ಯೌವದನದಲ್ಲಿ ದೇಹದಲ್ಲಾಗುವ ಜೈವಿಕ ಬದಲಾವಣೆಯಿಂದ ಗಂಡು ಹಾಗೂ ಹೆಣ್ಣು ಪರಸ್ಪರ ಆಕರ್ಷಣೆಗೆ ಒಳಗಾಗುವುದು ಸಹಜ. ಹದಿಹರೆಯದ ವಯಸ್ಸಿನಲ್ಲಿ ಮಿದುಳಿನಲ್ಲಿ ಬಿಡುಗಡೆಯಾಗುವ 'ಆಂಡ್ರೋಜನ್' ಹಾರ್ಮೋನ್‌ನಿಂದ ಮಕ್ಕಳಲ್ಲಿ ವಿರುದ್ಧ ಲಿಂಗಿಯ ಕಡೆ ಆಕರ್ಷಣೆ ಮೂಡುವುದು ಪ್ರಕೃತಿದತ್ತವಾದ ಸಂಗತಿ. ಆಕರ್ಷಣೆಗೆ ಇತಿಮಿತಿ ಇದ್ದರೆ ಸಹಜವಾಗಿರುತ್ತಾರೆ. ಎಲ್ಲೆ ಮೀರಿದಾಗಲೇ ಅಸಹಜ ಬೆಳವಣಿಗಗಳು ನಡೆಯುತ್ತವೆ. ಸಾಮಾಜಿಕ ಸ್ವಾಸ್ಥ್ಯ ಕಾಪಾಡಲು ಮನುಷ್ಯ ಎಲ್ಲವನ್ನೂ ನಿಗ್ರಹಿಸಿಕೊಂಡು ಸಂಯಮದಿಂದ ವರ್ತಿಸುವ ಅನಿವಾರ್ಯತೆ ಇದೆ. ಶಿಕ್ಷಣದಿಂದ ಅಂತಹ ಸಂಯಮವನ್ನು ಕಲಿಯುವ ಅಗತ್ಯವಿದೆ. ಆದರೆ 'ಹುಚ್ಚುಕೋಡಿ ಮನಸು ಇದು ಹದಿನಾರರ ವಯಸ್ಸು' ಎಂಬ ಗೀತೆಯಂತೆ ಹದಿಹರೆಯದವರು ಆಕರ್ಷಣೆಗೆ ಒಳಗಾದವರನ್ನು ಒಲಿಸಿಕೊಳ್ಳಲು ಇನ್ನಿಲ್ಲದ ರೀತಿ ಪ್ರಯತ್ನಿಸುತ್ತಾರೆ.

ಇಂದಿನ ದಿನಮಾನದಲ್ಲಿ ಯುವಕರು ಮೊಬೈಲ್ ಫೋನ್‌ನಲ್ಲಿ ಬಳಸುವ ಸಾಮಾಜಿಕ ಜಾಲತಾಣಗಳ ಮಾಯಾಜಾಲದಿಂದ ತಮ್ಮ ಪ್ರೀತಿಯ ಉದ್ದೇಶಗಳನ್ನೇ ಬದಲಿಸಿಕೊಂಡಿದ್ದಾರೆ. ಪ್ರೇಮ ಪ್ರಕರಣಗಳಲ್ಲಿ ಕೆಲವು ಮಾಂಗಲ್ಯದ ಗಂಟಿನಲ್ಲಿ ಅಂತ್ಯವಾದರೆ, ಮತ್ತೆ ಕೆಲವರು ಅತ್ತ ಮದುವೆಯನ್ನು ಮಾಡಿಕೊಳ್ಳಲಾಗದೆ, ಇತ್ತ ಬಿಟ್ಟಿರಲೂ ಆಗದೆ ಪ್ರೀತಿಯೇ ಕಗ್ಗಂಟಾಗಿ ಪರಿಣಮಿಸುತ್ತವೆ. ಹೆತ್ತವರು ನೋಡಿದ ಹುಡುಗ/ಹುಡುಗಿಯ ಜೊತೆ ನಿಶ್ಚಿತಾರ್ಥ ಅಥವಾ ಮದುವೆ ಹಿಂದಿನ ದಿನ ಪ್ರೇಯಸಿ/ಪ್ರಿಯಕರನೊಂದಿಗೆ ಪಲಾಯನ ಮಾಡಿ ಅಪ್ರಬುದ್ಧತೆ ಪ್ರದರ್ಶಿಸುತ್ತಾರೆ. ಪ್ರೀತಿಯ ಹೆಸರಿನಲ್ಲಿ ಯುವತಿಯರನ್ನು ಆಕರ್ಷಿಸಿ ದುರ್ಬಳಕೆ ಮಾಡಿಕೊಳ್ಳುವ ಜಾಲಗಳ ಕುರಿತು ವರದಿಯಾಗುತ್ತಿವೆ. ವಾಸ್ತವ ಅರಿಯದೆ ಬಣ್ಣದ ಮಾತಿಗೆ ಮರುಳಾಗಿ, ಮೋಹದ ಪಾಶಕ್ಕೆ ಸಿಲುಕಿ ಸುಳ್ಳು ಪ್ರೇಮಿಗೆ ಮೈಮನಗಳನ್ನು ಅರ್ಪಿಸುವ ಯುವತಿಯರು ಮೋಸ ಹೋದ ನಂತರ ಜೀವ ಕಳೆದುಕೊಂಡ ಪ್ರಕರಣಗಳನ್ನು ಸಹ ಕಾಣಬಹುದು. ಕೆಲವರನ್ನು ಪೇಮಿಸಿದ ಪ್ರೇಮಿಯೇ ಅಮಾನುಷವಾಗಿ ಮುಗಿಸಿದರೆ, ಮತ್ತೆ ಕೆಲವರು ತಮಗಾದ ಅನ್ಯಾಯವನ್ನು ಎದುರಿಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇನ್ನೂ ಕೆಲವು ವಿಶೇಷ ಪ್ರಕರಣಗಳಲ್ಲಿ ಪೋಷಕರು ಸಮಾಜದಲ್ಲಿ ತಮಗಾದ ಅವಮಾನವನ್ನು ಸಹಿಸಲಾಗದೆ ಮರ್ಯಾದ ಹತ್ಯೆ ಮಾಡಿದ ಉದಾಹರಣೆಗಳು ಸಹ ಇವೆ. ಇವೆಲ್ಲವೂ ಯುವಕರ ತಪ್ಪು ನಿರ್ಧಾರಗಳಿಂದ ಆದ ಆತಂಕಕಾರಿ ಘಟನೆಗಳಾಗಿರುತ್ತವೆ.

ಕಾಲವೊಂದಿತ್ತು, ಕಾಲೇಜಿನಲ್ಲಿ ಯಾರಿಗಾದರೂ ಬಾಯ್‌ಫ್ರೆಂಡ್ ಅಥವಾ ಗರ್ಲ್‌ಫ್ರೆಂಡ್ ಇದ್ದಾರೆ ಎಂದರೆ ಅವರನ್ನು ಕೀಳಾಗಿ ಕಾಣಲಾಗುತ್ತಿತ್ತು. ಆದರೆ ಈ ಪೀಳಿಗೆಯ ಯುವಕ ಯುವತಿಯರಿಗೆ ಸಂಗಾತಿ ಇಲ್ಲವೆಂದರೆ ಕೀಳರಿಮೆ ಕಾಡುವ ಮಟ್ಟಕ್ಕೆ ಅನಾರೋಗ್ಯಕರ ಮನೋಭಾವ ಬೆಳೆದಿದೆ. ಶಾಲಾ ಕಾಲೇಜುಗಳಲ್ಲಿ ಆದರ್ಶ ವಿದ್ಯಾರ್ಥಿಗಳಾಗಲು ಬಯಸುವ ಬದಲು ಆದರ್ಶ ದಂಪತಿಗಳಾಗಲು ಆತುರ ಪಡುತ್ತಿರುವುದು ನಿಜಕ್ಕೂ ವಿಷಾಧಕರ ಸಂಗತಿ. ಭವಿಷ್ಯತ್ತಿನ ಭದ್ರತೆಯ ಭಯವೇ ಇಲ್ಲದೇ ಈ ಕ್ಷಣದಲ್ಲಿಯೇ ಎಲ್ಲವನ್ನೂ ಅನುಭವಿಸಿಬಿಡಬೇಕು ಎಂದು ಹಪಹಪಿಸಿ ತಮ್ಮ ಮೈಮನಗಳನ್ನು ಮಲಿನ ಮಾಡಿಕೊಂಡು ಇಡೀ ಜೀವನ ಪರ್ಯಂತ ಅದಕ್ಕಾಗಿ ಪಶ್ಚಾತ್ತಾಪ ಪಡುವ ಅನೇಕರನ್ನು ನಾವು ಕಾಣಬಹುದು. ತಮ್ಮ ಕಾಲ ಮೇಲೆ ತಾವು ನಿಂತ ಮೇಲೆ ತಾವು ಮೆಚ್ಚಿದ ಹುಡುಗ–ಹುಡುಗಿಯನ್ನು ಜೀವನ ಸಂಗಾತಿ ಆರಿಸಿಕೊಂಡರೆ ಹೆತ್ತವರು ಸಹ ಇಲ್ಲವೆನ್ನುವುದಿಲ್ಲ, ಆದರೆ ವಿದ್ಯಾರ್ಥಿ ದೆಸೆಯಲ್ಲಿಯೇ ಬಾಳಸಂಗಾತಿಯನ್ನು ಆರಿಸಿಕೊಳ್ಳಲು ಮುಂದಾಗುತ್ತಿರುವುದು ಅನಾರೋಗ್ಯಕರ ಬೆಳವಣಿಗೆಯಾಗಿದೆ.



ಕಾಲವೊಂದಿತ್ತು, ಕಾಲೇಜಿನಲ್ಲಿ ಯಾರಿಗಾದರೂ ಬಾಯ್‌ಫ್ರೆಂಡ್ ಅಥವಾ ಗರ್ಲ್‌ಫ್ರೆಂಡ್ ಇದ್ದಾರೆ ಎಂದರೆ ಅವರನ್ನು ಕೀಳಾಗಿ ಕಾಣಲಾಗುತ್ತಿತ್ತು. ಆದರೆ ಈ ಪೀಳಿಗೆಯ ಯುವಕ ಯುವತಿಯರಿಗೆ ಸಂಗಾತಿ ಇಲ್ಲವೆಂದರೆ ಕೀಳರಿಮೆ ಕಾಡುವ ಮಟ್ಟಕ್ಕೆ ಅನಾರೋಗ್ಯಕರ ಮನೋಭಾವ ಬೆಳೆದಿದೆ. ಶಾಲಾ-ಕಾಲೇಜುಗಳಲ್ಲಿ ಆದರ್ಶ ವಿದ್ಯಾರ್ಥಿಗಳಾಗಲು ಬಯಸುವ ಬದಲು ಆದರ್ಶ ದಂಪತಿಗಳಾಗಲು ಆತುರ ಪಡುತ್ತಿರುವುದು ನಿಜಕ್ಕೂ ವಿಷಾಧಕರ ಸಂಗತಿ. ಭವಿಷ್ಯತ್ತಿನ ಭದ್ರತೆಯ ಭಯವೇ ಇಲ್ಲದೇ ಈ ಕ್ಷಣದಲ್ಲಿಯೇ ಎಲ್ಲವನ್ನೂ ಅನುಭವಿಸಿಬಿಡಬೇಕು ಎಂದು ಹಪಹಪಿಸಿ ತಮ್ಮ ಮೈಮನಗಳನ್ನು ಮಲಿನ ಮಾಡಿಕೊಂಡು ಇಡೀ ಜೀವನಪರ್ಯಂತ ಅದಕ್ಕಾಗಿ ಪಶ್ಚಾತ್ತಾಪ ಪಡುವ ಅನೇಕರನ್ನು ನಾವು ಕಾಣಬಹುದು. ತಮ್ಮ ಕಾಲ ಮೇಲೆ ತಾವು ನಿಂತ ಮೇಲೆ ತಾವು ಮೆಚ್ಚಿದ ಹುಡುಗ-ಹುಡುಗಿಯನ್ನು ಜೀವನ ಸಂಗಾತಿ ಆರಿಸಿಕೊಂಡರೆ ಹೆತ್ತವರು ಸಹ ಇಲ್ಲವೆನ್ನುವುದಿಲ್ಲ, ಆದರೆ ವಿದ್ಯಾರ್ಥಿ ದೆಸೆಯಲ್ಲಿಯೇ ಬಾಳಸಂಗಾತಿಯನ್ನು ಆರಿಸಿಕೊಳ್ಳಲು ಮುಂದಾಗುತ್ತಿರುವುದು ಅನಾರೋಗ್ಯಕರ ಬೆಳವಣಿಗೆಯಾಗಿದೆ.

ಪ್ರೀತಿಯ ಪಾವಿತ್ರ್ಯತೆಯನ್ನೇ ಅರಿಯದೆ ಸಿನೆಮಾ–ಧಾರವಾಹಿಗಳಿಂದ ಪ್ರಭಾವಿತರಾಗಿ ಆಕರ್ಷಣೆಯನ್ನೇ ಪ್ರೀತಿಯೆಂದು ಭ್ರಮಿಸಿ ಯಾವುದೋ ಒಂದೆರಡು ವಿಚಾರಗಳಿಗೆ ಇಷ್ಟವಾಗುವ ಯುವಕ ಅಥವಾ ಯುವತಿ ಹತ್ತಿರವಾಗುತ್ತಿದ್ದಂತೆ ಇಷ್ಟವಾಗದೇ ಇರುವ ಅನೇಕ ಅಭ್ಯಾಸಗಳು ಅವರಲ್ಲಿ ಇರುತ್ತವೆ. ಅಷ್ಟರಲ್ಲಿ ಅವರು ಪ್ರೇಮ ಪಯಣದಲ್ಲಿ ಬಹುದೂರು ಸಾಗಿರುತ್ತಾರೆ. ಸೌಂದರ್ಯ ನೋಡಿ ಮೋಹಿಸಿದವರು ವ್ಯಕ್ತಿತ್ವ ನೋಡಿ ಭ್ರಮನಿರಸನಗೊಂಡಿರುತ್ತಾರೆ. 'ಅನೇಕರು ಸೌಂದರ್ಯಕ್ಕೆ ಬಹಳ ಬೇಗ ಮರಳಾಗಿಬಿಡುತ್ತಾರೆ, ಬಾಳಬೇಕಾಗಿರುವುದು ವ್ಯಕ್ತಿತ್ವದ ಜೊತೆ ಎಂಬ ವಾಸ್ತವ ಗೊತ್ತಿರುವುದಿಲ್ಲ. ಮನೆಯ ಬಾಗಿಲು ಎಷ್ಟೇ ಸುಂದರವಾಗಿದ್ದರೂ ಬಾಗಿಲಲ್ಲೇ ಯಾರೂ ವಾಸಿಸುವುದಿಲ್ಲ' ಎಂಬ ಅಮೂಲ್ಯವಾದ ಮಾತನ್ನು ಸಂತರೊಬ್ಬರು ಹೇಳಿದ್ದಾರೆ. ಕಲ್ಪನಾ ಲೋಕದಲ್ಲಿ ವಿಹರಿಸಿ ಆನಂದಿಸಿದರೆ ಮುಂದೊಂದು ದಿನ ವಾಸ್ತವದಲ್ಲಿ ಯಾತನೆಯನ್ನು ಅನುಭವಿಸಬೇಕಾಗುತ್ತದೆ.

ಹೆಣ್ಣುಮಕ್ಕಳನ್ನು ಓದಿಸಿ, ಮದುವೆ ಮಾಡುವುದು ದೊಡ್ಡ ಜವಾಬ್ದಾರಿ ಕೆಲಸ, ಆದ್ದರಿಂದ ಹೆಣ್ಣುಮಕ್ಕಳೇ ಹೊರೆ ಎಂದು ಪೋಷಕರು ಭಾವಿಸುತ್ತಿದ್ದರು. ಆದರೆ ಇಂದು ಗಂಡು ಮಕ್ಕಳಿಗೆ ಶಿಕ್ಷಣ ಕೊಡಿಸಿ, ಕೆಲಸಕ್ಕೆ ಸೇರಿಸಿ ಅವರ ಬದುಕನ್ನು ಒಂದು ದಡ ಸೇರಿಸುವುದು ಅನೇಕ ಪೋಷಕರಿಗೆ ಇಂದು ಸವಾಲಿನ ಸಂಗತಿಯಾಗಿದೆ. ಜವಾಬ್ದಾರಿ ಇಲ್ಲದ ವಯಸ್ಸಿನಲ್ಲಿ ಹುಡುಗಾಟಿಕೆಗೆ ಅನಾಹುತಗಳನ್ನು ಮಾಡಿಕೊಳ್ಳುವ ಅನೇಕ ಯುವಕರು ಇದ್ದಾರೆ. ತನ್ನ ಪ್ರೇಯಸಿಯನ್ನು ಮೆಚ್ಚಿಸಲು ಬೈಕ್‌ಗೆ, ಮೊಬೈಲ್ ಫೋನ್‌ಗೆ ಅಪ್ಪನ ಬಳಿ ಡಿಮ್ಯಾಂಡ್ ಮಾಡಿ, ಸಾಲ ಮಾಡಿಸುವ ಅನೇಕ ಪುತ್ರಮಹಾಶಯರು ಇದ್ದಾರೆ. 'ಪ್ರೀತಿ ಹಾಗೂ ಯುದ್ಧದಲ್ಲಿ ಮಾಡಿದ್ದೆಲ್ಲವೂ ಸರಿ' ಎಂಬ ಆಂಗ್ಲ ಕವಿ ಜಾನ್ ಲಿಲ್ಲಿಯ ಮಾತಿನಂತೆ ಯೌವನದ ಮದದಲ್ಲಿ ಯುವಕರು ಅನೇಕ ಸಾಹಸಗಳನ್ನು ಮಾಡಲು ಮುಂದಾಗುತ್ತಾರೆ. ಇದರಿಂದ 'ಮಕ್ಕಳಿಗೆ ಚೆಲ್ಲಾಟ, ಹೆತ್ತವರಿಗೆ ಪ್ರಾಣ ಸಂಕಟ' ಎಂದಂತಾಗುತ್ತದೆ. ಅನೇಕ ಹುಂಬರು ಹೆತ್ತವರ ತ್ಯಾಗ, ಶ್ರಮ, ಪ್ರೀತಿ ಏನನ್ನೂ ಪರಿಗಣಿಸದೆ ತಾವು ಮಾಡಿದ್ದೇ ಸರಿ ಎಂದು ತಪ್ಪು ದಾರಿ ಹಿಡಿದು, ಹೆತ್ತ ತಪ್ಪಿಗೆ ತಾಯಿತಂದೆ ಜೀವಮಾನ ವಿಡೀ ಕಣ್ಣೀರಿನಲ್ಲಿ ಕೈತೊಳೆಯುವಂತೆ ಮಾಡಿಬಿಡುತ್ತಾರೆ.

ಶಿಕ್ಷಣವಂತರು ಎಂದರೆ ಕೇವಲ ಅಕ್ಷರಸ್ಥರು ಎಂದು ಇಂದಿನ ಯುವಪೀಳಿಗೆ ಭಾವಿಸಿದಂತಿದೆ. ಶಿಕ್ಷಿತರು ಎಂದು ಸಮಾಜದ ಜವಾಬ್ದಾರಿಯುತ ಪ್ರಜೆಗಳು. ಸಮಾಜದ ಆರೋಗ್ಯವನ್ನು ಕಾಪಾಡುವ ಹೊಣೆ ಅವರದ್ದಾಗಿರುತ್ತದೆ. ಯಾರೋ ಶ್ರೀಮಂತರ ಮಕ್ಕಳು ಕಾಲೇಜಿನಲ್ಲಿ ಶೋಕಿ ಮಾಡುತ್ತಾರೆ ಎಂದ ಮಾತ್ರಕ್ಕೆ ಕೆಲವು ಪ್ರತಿಭಾವಂತ ವಿದ್ಯಾರ್ಥಿಗಳು ಅವರನ್ನು ಕಂಡು ಅನುಸರಿಸಲು ಹೋಗಿ ತಮ್ಮ ಬದುಕನ್ನು ಹಾಳುಮಾಡಿಕೊಳ್ಳಬೇಕಿಲ್ಲ. ಶಾಲಾಕಾಲೇಜುಗಳಲ್ಲಿ ಶಿಸ್ತಿನಿಂದ ವರ್ತಿಸಿ, ಹೆತ್ತವರು–ಗುರುಹಿರಿಯರ ಮಾತನ್ನು ಪಾಲಿಸಿ, ತಮ್ಮ ಬದುಕಿನ ಉದ್ದೇಶವನ್ನು ಅರಿತು ಬದುಕನ್ನು ಹಸನು ಮಾಡಿಕೊಂಡ ಅನೇಕ ಯುವಕ–ಯುವತಿಯರು ಇದ್ದಾರೆ. ಅವರನ್ನು ಮಾದರಿಯಾಗಿ ತೆಗೆದುಕೊಳ್ಳಬೇಕು. ತಮ್ಮ ಹುಚ್ಚಾಟಗಳಿಂದ ಹೆತ್ತವರ ಕನಸುಗಳನ್ನು ಭಗ್ನ ಮಾಡಿದಲ್ಲಿ ಅದಕ್ಕಿಂತ ದೊಡ್ಡ ಅಪರಾಧ ಮತ್ತೊಂದಿಲ್ಲ. ಜೀವನದಲ್ಲಿ ಸೆಟಲ್ ಆದರೆ ಉತ್ತಮ ಬಾಳಸಂಗಾತಿ ಅರಸಿ ಬರುವುದರಲ್ಲಿ ಅನುಮಾನವೇ ಇಲ್ಲ. ಅಲ್ಲಿಯವರೆಗೆ ತಾಳ್ಮೆಯಿಂದ ಇದ್ದವರು ಜಾಣರಾಗುತ್ತಾರೆ. ಏನಂತೀರಿ?

ಪದ ತಾಂಬೂಲ: ಪ್ರೇಮದ ಹಾದಿ ಎಲ್ಲರಿಗೂ ನುಣುಪಾದ ಹೆದ್ದಾರಿಯಲ್ಲ, ಅನಿರೀಕ್ಷಿತ ತಿರುವುಗಳ ಕಲ್ಲುಮುಳ್ಳುಗಳ ಹಾದಿ.

ಸಾಮಾಜಿಕ ಸಮಾನತೆಗೆ ಮಡಿವಾಳ ಮಾಚಿದೇವರ ಕೊಡುಗೆ ಅಪಾರ

ಶಾಸಕ ಜಿ.ಟಿ.ದೇವೇಗೌಡ ಅಭಿಮತ



ಮೈಸೂರು, ಫೆ.12(ಎಸ್‌ಬಿಡಿ)– ಸಾಮಾಜಿಕ ಸಮಾನತೆ ಹಾಗೂ ಜ್ಞಾನ ವಿಸ್ತರಣೆಗೆ ಮಡಿವಾಳ ಮಾಚಿದೇವರು ಮಹತ್ತರ ಕೊಡುಗೆ ನೀಡಿದ್ದಾರೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಹೇಳಿದರು.

ಮೈಸೂರು ತಾಲೂಕು, ಜಯಪುರ ಹೋಬಳಿ, ಹಾರೋಹಳ್ಳಿ ಗ್ರಾಮದಲ್ಲಿ ವೀರ ಮಡಿವಾಳ ಮಾಚಿದೇವರ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದ ಅಸಮಾನತೆ ತೊಡೆಯಲು ಶಿವಶರಣರು ಅವಿರತವಾಗಿ ಶ್ರಮಿಸಿದ್ದಾರೆ. ಜನರಲ್ಲಿ ಜ್ಞಾನದ ಬೆಳಕು ಮೂಡಿಸುವ ಮೂಲಕ ಭೇದ ಭಾವ ತೊಡೆಯುವ ಕಾಯಕ ಮಾಡಿದ್ದಾರೆ. ಈ ನಿಟ್ಟಿನಲ್ಲಿ ಶಿವಶರಣ ಮಡಿವಾಳ ಮಾಚಿದೇವರ ಸೇವೆ ಅವಿಸ್ಮರಣೀಯವಾಗಿದೆ ಎಂದು ನುಡಿದರು.

ಮೌಢ್ಯಗಳಿಂದ ದೀನರ ಶೋಷಣೆ ನಡೆಯುತ್ತಿದ್ದ ಕಾಲದಲ್ಲಿ ಮಾಚಿದೇವರು ಜನರಲ್ಲಿ ಅರಿವು ಮೂಡಿಸಿದ್ದರು. ಸಮಾನತೆ ಸಂದೇಶ ಸಾರುವ ಮೂಲಕ ಶೋಷಣೆ ತಡೆಗಟ್ಟಲು ಶ್ರಮಿಸಿದ್ದರು. ತಾವು ಕಷ್ಟದಲ್ಲಿದ್ದರೂ ಬಡ ಜನರ ಉದ್ಧಾರಕ್ಕಾಗಿ ಕೆಲಸ ಮಾಡಿದರು. ಮನುಕುಲಕ್ಕೆ ಬದುಕಿನ ಸನ್ಮಾರ್ಗ ತೋರಿದ್ದರು. ಮಾಚಿದೇವರ ಸ್ಮರಣೆ ಹಾಗೂ ಅವರ ಮಾರ್ಗದರ್ಶನದಂತೆ ಮುನ್ನಡೆಯುತ್ತಿರುವ ಕಾರಣದಿಂದಲೇ ಮಡಿವಾಳ ಸಮುದಾಯದವರು ವಿಶಾಲ ಮನೋಧರ್ಮ ಹೊಂದಿದ್ದಾರೆ ಎಂದು ಅಭಿಪ್ರಾಯಿಸಿದರು.

ಸಮಾರಂಭದಲ್ಲಿ ತಾಲೂಕು ಪಂಚಾಯಿತಿ ಮಾಜಿ ಉಪಾಧ್ಯಕ್ಷರಾದ ಜಯಪುರ ಜವರನಾಯಕ, ರಾಜು, ಪ್ರಶಾಂತ್, ಚನ್ನಕೇಶವ, ಮುಖಂಡರಾದ ಮುತಾಲಿಕ್, ನಾಗರಾಜು, ರೇಣುಕಾ, ಮಹದೇವಪ್ಪ, ಮಲ್ಲಿಕಾರ್ಜುನ, ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಮೂರ್ತಿ, ಮಹದೇವನಾಯಕ, ನಿಂಗೇಗೌಡ, ರಾಮಚಂದ್ರ, ಸಣ್ಣಸ್ವಾಮಿ, ಕುಮಾರ್, ನಿಂಗರಾಜು ಮತ್ತಿತರ ಮುಖಂಡರು ಭಾಗವಹಿಸಿದ್ದರು.

ಶ್ರೀ ಭೋಗೇಶ್ವರ, ಸಪ್ತಮಾತೃಕಾ ದೇವಾಲಯದಲ್ಲಿ ಮಹಾಶಿವರಾತ್ರಿ

ಮೈಸೂರು, ಫೆ.12– ಮೈಸೂರಿನ ಬೋಗಾದಿ ರಿಂಗ್ ರಸ್ತೆಯಲ್ಲಿರುವ ಇತಿಹಾಸ ಪುರಾಣ ಪ್ರಸಿದ್ಧ ಶ್ರೀಕ್ಷೇತ್ರ ಶ್ರೀ ಭೋಗೇಶ್ವರ, ಶ್ರೀ ಸಪ್ತಮಾತೃಕಾ ಹಿರಿದೇವಮ್ಮ ದೇವಸ್ಥಾನದಲ್ಲಿ ನ.18ರಂದು ಮಹಾಶಿವರಾತ್ರಿ ಜಾತ್ರಾ ಮಹೋತ್ಸವ ನೆರವೇರಲಿದೆ.

ಅಂದು ಬೆಳಗ್ಗೆ 5ಕ್ಕೆ ಸಂಕಲ್ಪ, ರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಶಿವ ಸಹಸ್ರನಾಮಾರ್ಚನೆ, ಅಷ್ಟೋತ್ತರ ಹಾಗೂ ದಿನವಿಡೀ ಅರ್ಚನೆ–ರುದ್ರಾಭಿಷೇಕ, ಶಿವ ಪಂಚಾಕ್ಷರಿ, ತ್ರಿರತಿ ಹೋಮ, ಪೂರ್ಣಾಹುತಿ, ಯಾಮದ ಪೂಜೆ ಸೇವೆಗಳು ನಡೆಯಲಿವೆ. ಬೆಳಗ್ಗೆ 9ರಿಂದ ರಾತ್ರಿ 2 ಗಂಟೆವರೆಗೆ ಭಕ್ತಿಗೀತೆ, ಭಜನೆ, ಭಾವ ಗೀತೆ, ವಾದ್ಯ ಸಂಗೀತ, ಭರತ ನಾಟ್ಯ, ಕಥಕ್ ನೃತ್ಯ, ನೃತ್ಯ ರೂಪಕ, ಜನಪದ ಗೀತೆ, ಕಂಸಾಳೆ, ತಂಬೂರಿ ತತ್ವಪದ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ದೇವಸ್ಥಾನದ ಸೇವಾ ಟ್ರಸ್ಟ್ ಅಧ್ಯಕ್ಷ ಬಿ.ಪಿ.ಕನ್ನೇಗೌಡ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

23 ಟನ್ ಪರಿಹಾರ ಸಾಮಗ್ರಿಯೊಂದಿಗೆ ಭೂಕಂಪ ಪೀಡಿತ ಸಿರಿಯಾ ತಲುಪಿದ ಭಾರತದ ಏಳನೇ ವಿಮಾನ

ಟರ್ಕಿ, ಫೆ.12– ಶತಮಾನದಲ್ಲಿಯೇ ಅತ್ಯಂತ ವಿನಾಶಕಾರಿ ಭೂಕಂಪಕ್ಕೆ ಸಿಲುಕಿ ತತ್ತರಿಸಿರುವ ಟರ್ಕಿ ಹಾಗೂ ಸಿರಿಯಾ ದೇಶಕ್ಕೆ ಭಾರತ ನೆರವಿನ ಹಸ್ತ ಚಾಚಿದೆ. ಆಪರೇಷನ್ ದೋಸ್ತ್ ಹೆಸರಿನಲ್ಲಿ ವೈದ್ಯಕೀಯ ಹಾಗೂ ಪರಿಹಾರ ಸಾಮಗ್ರಿಗಳನ್ನು ಟರ್ಕಿಗೆ ಭಾರತ ತಲುಪಿಸಿದೆ.



23 ಟನ್ ಪರಿಹಾರ ಸಾಮಗ್ರಿ ಹೊತ್ತ ಭಾರತದ ಏಳನೇ ವಿಮಾನ ಅದಾನ ವಿಮಾನ ನಿಲ್ದಾಣ ತಲುಪಿದ್ದು, ಸ್ಥಳೀಯ ಉಪ ಆಡಳಿತಾಧಿಕಾರಿ ಮೌತಾಜ್ ದೌಹುಜಿ ಡಮಾಸ್ಕಸ್ ವಿಮಾನ ನಿಲ್ದಾಣದಲ್ಲಿ ಸ್ವೀಕರಿಸಿದ್ದಾರೆ. ಈ ವಿಷಯವನ್ನು ಭಾರತೀಯ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗಚಿ ತಮ್ಮ ಟ್ವೀಟರ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ಏಳನೇ ಆಪರೇಷನ್ ದೋಸ್ತ್ ವಿಮಾನ ಶನಿವಾರ ಉತ್ತರ ಪ್ರದೇಶದ ಗಾಜಿಯಾಬಾದ್‌ನ ಹಿಂದನ್ ವಾಯುನೆಲೆಯಿಂದ ಭೂಕಂಪ ಪೀಡಿತ ಸಿರಿಯಾ ಮತ್ತು ಟರ್ಕಿಗೆ ನಿರ್ಗಮಿಸಿತ್ತು. ಭಾರತೀಯ ವಾಯುಪಡೆಯ ಸಿ 17 ವಿಮಾನದಲ್ಲಿ ಪರಿಹಾರ ಸಾಮಗ್ರಿಗಳು, ವೈದ್ಯಕೀಯ ನೆರವು, ತುರ್ತು ಆರೈಕೆ ಮೆಡಿಸನ್, ವೈದ್ಯಕೀಯ ಉಪಕರಣಗಳನ್ನು ಸಾಗಿಸಲಾಯಿತು. ಸಿರಿಯಾಕ್ಕೆ 23 ಟನ್ ಹಾಗೂ ಟರ್ಕಿಗೆ 12 ಟನ್ ಸೇರಿದಂತೆ ಒಟ್ಟಾರೇ 35 ಟನ್ ಪರಿಹಾರ ಸಾಮಗ್ರಿ ಸಾಗಿಸಲಾಗಿದೆ ಎಂದು ಭಾರತೀಯ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ಬಡ ಮಕ್ಕಳಿಗೆ ವಸತಿ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ

ಸಚಿವ ಕೋಟ ಶ್ರೀನಿವಾಸ ಪೂಜಾರಿ



ಮಂಡ್ಯ, ಫೆ.12– ರಾಜ್ಯದಲ್ಲಿ 830 ಸರ್ಕಾರಿ ವಸತಿ ಶಾಲೆಗಳಿದ್ದು, 2.5 ಲಕ್ಷ ಬಡ ವಿದ್ಯಾರ್ಥಿಗಳಿಗೆ ಮೂಲ ಸೌಕರ್ಯಗಳೊಂದಿಗೆ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ ಎಂದು ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ವಿವೇಕ ವಿದ್ಯಾ ವಾಹಿನಿ ಟ್ರಸ್ಟ್ ಹಾಗೂ ರಾಮಕೃಷ್ಣ ವಿವೇಕಾನಂದ ಆಶ್ರಮದ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ಎಲ್ಲಾ ವಸತಿ ಪ್ರೌಢಶಾಲೆಗಳ 5500ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ನಡೆದ ಮೌಲ್ಯ ಶಿಕ್ಷಣ ಆಧಾರಿತ ನಿರ್ಮಾಣಂ ಪರೀಕ್ಷೆ, ಉಪನ್ಯಾಸ, ಸಂವಾದ ಮತ್ತು ಬಹುಮಾನ ವಿತರಣೆ ಕಾರ್ಯಕ್ರಮಗಳ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು. ವಸತಿ ಶಾಲೆಗಳಿಗಾಗಿ ಇಲಾಖೆಯಿಂದ ವರ್ಷಕ್ಕೆ ಅಂದಾಜು 1250 ರಿಂದ 1500 ಕೋಟಿ ವೆಚ್ಚವಾಗುತ್ತದೆ. 17.000 ಶಿಕ್ಷಕರು ಹಾಗೂ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದರು.

ಕನಿಷ್ಟ ವೇತನ ಪಡೆಯುವವರ ಮಕ್ಕಳು, ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದವರು, ಅಲೆಮಾರಿ, ಅನಾಥ ಮಕ್ಕಳು ವಸತಿ ಶಿಕ್ಷಣ ಶಾಲೆಗೆ ಸೇರಿದರೆ ಅವರಿಗೆ ಪಿಯುವರೆಗೆ ಎಲ್ಲಾ ಮೂಲ ಸೌಕರ್ಯ ಕೊಟ್ಟು, ಉತ್ತಮ ಶಿಕ್ಷಣ ನೀಡಲಾಗುತ್ತಿದೆ. ಸಮವಸ್ತ್ರ ಊಟ, ವಸತಿ, ಶೂ, ಪುಸ್ತಕಗಳನ್ನು ಉಚಿತವಾಗಿ ನೀಡಲಾಗುತ್ತಿದೆ ಎಂದರು.

ಪ್ರತಿಷ್ಠಿತ ಶಾಲೆಗಳಿಗೆ ದಾಖಲಾತಿ ಯೋಜನೆಯಲ್ಲಿ ಸ್ಮಾಶನದಲ್ಲಿ ಕೆಲಸ ಮಾಡುವವರು, ಪೌರಕಾರ್ಮಿಕರು, ಮ್ಯಾನ್ಯುಯಲ್ ಸ್ಕ್ಯಾವೆಂಜರ್, ದೇವದಾಸಿಯರ ಮಕ್ಕಳಿಗೆ ಮೊದಲ ಆದ್ಯತೆ ನೀಡಲಾಗುತ್ತಿದೆ ಎಂದರು.

ವಸತಿ ಶಾಲೆಗಳಲ್ಲಿ (ಕ್ರೈಸ್)ನಲ್ಲಿ 99.5 ರಷ್ಟು ಮಕ್ಕಳು ಉತ್ತೀರ್ಣರಾಗಿ ಶಾಲೆಗಳಿಗೆ ಉತ್ತಮ ಹೆಸರು ದೊರೆಯುತ್ತಿದೆ. ಕ್ರೈಸ್ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ 14 ಮಕ್ಕಳಿಗೆ ಐಐಟಿ, ಐಎಎಮ್‌ನಲ್ಲಿ 22 ಮಕ್ಕಳಿಗೆ ಮೆಡಿಕಲ್ ಸೀಟು ದೊರಕಿದೆ. ಇದು ಶಾಲೆ ಉತ್ತಮ ಕಾರ್ಯ ನಿರ್ವಹಣೆಗೆ ಉದಾಹರಣೆ ಎಂದರು.

ಬಡವರ ಮಕ್ಕಳು ವಸತಿ ಶಾಲೆಗಳಿಗೆ ದಾಖಲಾದ ನಂತರ ಪಿಯುವರೆಗೂ ಶಿಕ್ಷಣ ದೊರಕಬೇಕೆಂದು ಸ್ವಂತ ಕಟ್ಟಡ ಇರುವ 540 ವಸತಿ ಶಾಲೆಗಳಲ್ಲಿ ಪಿಯು ಕಾಲೇಜು ಪ್ರಾರಂಭಿಸಲು ಚಿಂತಿಸಲಾಗುತ್ತಿದೆ ಎಂದರು. ಹೊಸ ಹಾಸ್ಟಲ್ ಅವಶ್ಯಕತೆ ಇರುವ ಸ್ಥಳಗಳನ್ನು ಗುರುತಿಸಿ 100 ಡಾ.ಬಿ.ಆರ್.ಅಂಬೇಡ್ಕರ್, 50 ಕನಕದಾಸರ ಹಾಸ್ಟಲ್, ಎಲ್ಲಾ ವರ್ಗದ ಸಾವಿರ ಮಕ್ಕಳ ಸಂಖ್ಯೆ ಬಲವಿರುವ ದೀನ್ ದಯಾಳ್ ಹಾಸ್ಟಲ್ ಪ್ರಾರಂಭಿಸ ಲಾಗುವುದು ಎಂದರು.

ಮೈಸೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ಸರ್ವಜ್ಞನಂದ ಮಹಾರಾಜ್ ಸ್ವಾಮೀಜಿ, ಜಿಲ್ಲಾಧಿಕಾರಿ ಡಾ.ಹೆಚ್.ಎನ್ ಗೋಪಾಲಕೃಷ್ಣ ಮಾತನಾಡಿದರು. ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ರಂಗೇಗೌಡ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಕೆ.ಶ್ರೀನಿವಾಸ್, ಸಮಾಜ ಕಲ್ಯಾಣ ಇಲಾಖೆ ತಾಲೂಕು ಅಧಿಕಾರಿ ಕಾವ್ಯಶ್ರೀ, ವಿವೇಕ ವಿದ್ಯಾವಾಹಿನಿ ಟ್ರಸ್ಟ್‌ನ ನಿತ್ಯಾನಂದ ವಿವೇಕವಂಶಿ, ಪ್ರಭಂಜನ, ವಸತಿನಿಲಯ ಪಾಲಕ ವಿನೋದ ಕುಮಾರ್ ಸೇರಿದಂತೆ ಇನ್ನಿತರರಿದ್ದರು.

ಕಬ್ಬಿನಗದ್ದೆಗೆ ಬಿದ್ದ ಬೆಂಕಿ ನಂದಿಸಲು ಹೋದ ರೈತ ಸಜೀವ ದಹನ



ಮಂಡ್ಯ, ಫೆ.12– ಕಬ್ಬಿಗೆ ಆಕಸ್ಮಿಕವಾಗಿ ಹೊತ್ತಿಕೊಂಡ ಬೆಂಕಿ ನಂದಿಸುತ್ತಿದ್ದ ರೈತನೋರ್ವ ಸಜೀವ ದಹನವಾಗಿರುವ ಘಟನೆ ತಾಲೂಕಿನ ಮೊಡಚಾಕನಹಳ್ಳಿ ಗ್ರಾಮದಲ್ಲಿ ಭಾನುವಾರ ನಡೆದಿದೆ.

ಗ್ರಾಮದ ಮಹಾಲಿಂಗಯ್ಯ(60) ಮೃತಪಟ್ಟ ರೈತ. ಭಾನುವಾರ ಮಧ್ಯಾಹ್ನ 1 ಗಂಟೆ ವೇಳೆ ತಾನು ಬೆಳೆದಿದ್ದ ಕಬ್ಬಿನ ಗದ್ದೆಯಲ್ಲಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿದೆ. ಇದನ್ನು ನಂದಿಸಲು ಮೃತ ಮಹಾಲಿಂಗಯ್ಯ ಮುಂದಾಗಿದ್ದಾರೆ. ಆಗ ಇದ್ದಕ್ಕಿದ್ದಂತೆ ಕೆಲವೇ ನಿಮಿಷಗಳಲ್ಲಿ ಬೆಂಕಿ ಅಕ್ಕಪಕ್ಕದ ಜಮೀನಿಗೂ ವ್ಯಾಪಿಸಿದೆ. ದಟ್ಟಹೊಗೆ ನೋಡಿ ಜಮೀನಿನ ಬಳಿ ಗ್ರಾಮಸ್ಥರು ದೌಡಾಯಿಸಿದ್ದಾರೆ. ಅಷ್ಟರೊಳಗೆ ಮಹಾಲಿಂಗಯ್ಯ ಬೆಂಕಿ ಕೆನ್ನಾಲಿಗೆಗೆ ಸಿಲುಕಿದ್ದರು. ಆಗ ಗ್ರಾಮಸ್ಥರು ಮಣ್ಣು, ಕಲ್ಲು, ನೀರು ಹಾಕಿ ಬೆಂಕಿ ನಂದಿಸಲು ಪ್ರಯತ್ನಪಟ್ಟರು. ಆದರೆ ಮಹಾಲಿಂಗಯ್ಯ ಬೆಂಕಿಯಲ್ಲಿ ಸಂಪೂರ್ಣವಾಗಿ ಸುಟ್ಟು ಕರಕಲಾಗಿದ್ದರು.

ಸುಮಾರು 20 ಎಕರೆಗೂ ಹೆಚ್ಚು ಕಬ್ಬು ಬೆಳೆ ನಾಶವಾಗಿದೆ. ರೈತರಾದ ಮಹೇಶ್ ಅವರ 8 ಎಕರೆ, ಜವರೇಗೌಡರ 1.5 ಎಕರೆ, ಪಾಪಣ್ಣನವರ 2 ಎಕರೆ, ಶಂಕರ್ ಅವರ 1 ಎಕರೆ ಕಬ್ಬು ಸುಟ್ಟು ಭಸ್ಮವಾಗಿದೆ. ಅಲ್ಲದೆ, ಮಹೇಶ್ ಎಂಬುವರ ಒಂದೂವರೆ ಎಕರೆ ಬಾಳೆ ತೋಟವೂ ಬೆಂಕಿಗಾಹುತಿಯಾಗಿದ್ದು, ಲಕ್ಷಾಂತರ ರೂ. ನಷ್ಟವಾಗಿದೆ.

ಶಿವಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬೆಂಕಿ ಹೇಗೆ ಹೊತ್ತಿಕೊಂಡಿತು ಎಂಬುದರ ಬಗ್ಗೆ ನಿಖರ ಮಾಹಿತಿ ಇಲ್ಲ. ಮೃತ ರೈತ ಕುಟುಂಬಕ್ಕೆ ಹಾಗೂ ಕಬ್ಬು ನಷ್ಟವಾಗಿರುವ ರೈತರಿಗೆ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಪರಿಹಾರ ಒದಗಿಸುವ ಭರವಸೆ ನೀಡಿದ ಸುಮಲತಾ: ಮೊಡಚಾಕನಹಳ್ಳಿಯಲ್ಲಿ ಆಕಸ್ಮಿಕವಾಗಿ ಕಬ್ಬಿನ ಗದ್ದೆಗೆ ತಗುಲಿದ ಬೆಂಕಿ ನಂದಿಸಲು ಹೋಗಿ ರೈತ ಮಹಾಲಿಂಗಯ್ಯ ಸಾವಿಗೆ ಸಂಸದೆ ಸುಮಲತಾ ಸಂತಾಪ ಸೂಚಿಸಿದ್ದಾರೆ. ಅಲ್ಲದೆ, ಮೃತ ರೈತ ಕುಟುಂಬಕ್ಕೆ ಪರಿಹಾರ ಒದಗಿಸುವ ಸಂಬಂಧ ಖುದ್ದಾಗಿ ಮುಖ್ಯಮಂತ್ರಿ ಅವರೊಂದಿಗೆ ಶೀಘ್ರ ಚರ್ಚಿಸಿ ಪರಿಹಾರ ಒದಗಿಸುವ ಭರವಸೆ ನೀಡಿದ್ದಾರೆ ಎಂದು ಆಪ್ತ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಮಂಡ್ಯ, ಫೆ.12– ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಅಂತರರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳಲ್ಲಿ ಪದಕ ವಿಜೇತರಾದ ಕ್ರೀಡಾಪಟುಗಳಿಗೆ ಕೇಂದ್ರ ಸರ್ಕಾರದಿಂದ ನಗದು ಪುರಸ್ಕಾರವನ್ನು ನೀಡಲಾಗುವುದು. ಆಸಕ್ತರು DBT-MIS Portal (https://dbtvas-sports.gov.in ಮೂಲಕ ಏ.30 ರೊಳಗೆ ಅರ್ಜಿ ಸಲ್ಲಿಸಬಹುದು.

ಶ್ರೀರಂಗಪಟ್ಟಣ ಜೆಡಿಎಸ್ ಅಭ್ಯರ್ಥಿ ಎಂದು ಮತ ನೀಡಿ

ಜೆಡಿಎಸ್ ಬಂಡಾಯ ಅಭ್ಯರ್ಥಿ ತಗ್ಗಹಳ್ಳಿ ವೆಂಕಟೇಶ್ ಮನವಿ



ಮಂಡ್ಯ, ಫೆ.12– ಶ್ರೀರಂಗಪಟ್ಟಣ ಕ್ಷೇತ್ರದ ಜೆಡಿಎಸ್ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದು, ನಾನೇ ಜೆಡಿಎಸ್ ಅಭ್ಯರ್ಥಿ ಎಂದು ಭಾವಿಸಿ ನನಗೆ ಮತ ನೀಡಬೇಕು ಎಂದು ಜೆಡಿಎಸ್ ಬಂಡಾಯ ಅಭ್ಯರ್ಥಿ ತಗ್ಗಹಳ್ಳಿ ವೆಂಕಟೇಶ್ ಮನವಿ ಮಾಡಿದರು.

ತಾಲೂಕಿನ ಸಂತೆ ಕಸಲಗೆರೆ ಗ್ರಾಮದ ಭೂಮಿ ಸಿದ್ದೇಶ್ವರಸ್ವಾಮಿ ದೇವಾಲಯದ ಸಮುದಾಯ ಭವನದಲ್ಲಿ ಆಯೋಜಿಸಿದ್ದ ತಮ್ಮ ಹಿತೈಷಿಗಳು ಹಾಗೂ ಅಭಿಮಾನಿಗಳ ಸಭೆಯಲ್ಲಿ ಮಾತನಾಡಿದ ಅವರು, ಜೆಡಿಎಸ್ ಪಕ್ಷಕ್ಕೆ ಕಳೆದ 30 ವರ್ಷಗಳಿಂದ ಸಾಮಾನ್ಯ ಕಾರ್ಯಕರ್ತನಾಗಿ ಪ್ರಾಮಾಣಿಕನಾಗಿ ದುಡಿದಿದ್ದೇನೆ. ಆದರೆ ಆ ಪ್ರಾಮಾಣಿಕತೆಗೆ ಯಾವುದೇ ಬೆಲೆ ಇಲ್ಲದಂತಾಗಿದೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹಾಗೂ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರು ಟಿಕೆಟ್ ಭರವಸೆ ನೀಡುತ್ತಾ ನಂತರ ಟಿಕೆಟ್ ಕೊಡದೆ ಮೋಸ ಮಾಡಿದರು. ಆದರೂ ಕೊನೆ ಘಳಿಗೆವರೆಗೂ ಕಾಯುತ್ತೇನೆ. ಆದರೂ ಕೊಡಲಿಲ್ಲ ಎಂದರೆ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತೇನೆ. ನನ್ನ ಕೈ ಬಿಡಬೇಡಿ ಎಂದು ಭಾವುಕರಾದರು.

ಹಾಲಿ ಹಾಗೂ ಮಾಜಿ ಶಾಸಕರ ಬೆಂಬಲಿಗರು ಹರಡುತ್ತಿರುವ ಅಪಪ್ರಚಾರಗಳಿಗೆ ಕಿವಿಗೊಡಬೇಡಿ. ನನ್ನ ಬಳಿ ಹಣವಿಲ್ಲದಿದ್ದರೂ ಜನರ ಪ್ರೀತಿ, ವಿಶ್ವಾಸಗಳಿಸಿದ್ದೇನೆ. ರಾಜಕೀಯದಲ್ಲಿ ಗಾಡ್ ಫಾದರ್ ಇಲ್ಲದೆ ಬೆಳೆದಿದ್ದೇನೆ. ಜನರೇ ನನ್ನ ಗಾಡ್ ಫಾದರ್. ಈ ಚುನಾವಣೆ ಹಣದ ಚುನಾವಣೆಯಾಗದೆ, ಜನರ ಚುನಾವಣೆಯಾಗಲಿದೆ. ಹಣದಿಂದಲೇ ಚುನಾವಣೆ ನಡೆಸಲು ಸಾಧ್ಯವಿಲ್ಲ ಎಂಬುದು ಸಾಕಷ್ಟು ಬಾರಿ ಸಾಬೀತಾಗಿದೆ ನನ್ನ ಸಭೆಗೆ ಹೋಗಬಾರದೆಂದು ಶಾಸಕ ರವೀಂದ್ರ ಶ್ರೀಕಂಠಯ್ಯ ಕೆಲವರನ್ನು ತಡೆದಿದ್ದಾರೆ. ಬಹುತೇಕ ಜೆಡಿಎಸ್ ಕಾರ್ಯಕರ್ತರು ಪರೋಕ್ಷವಾಗಿ ಬೆಂಬಲ ವ್ಯಕ್ತಪಡಿಸಿದ್ದು, ಚುನಾವಣೆಯಲ್ಲಿ ಬೆಂಬಲಿಸುವುದಾಗಿ ತಿಳಿಸಿದ್ದಾರೆ ಎಂದರು.

ಶಾಸಕ ರವೀಂದ್ರ ಶ್ರೀಕಂಠಯ್ಯ ಜೆಡಿಎಸ್ ಕಾರ್ಯಕರ್ತರು, ಮುಖಂಡರಿಗೆ ಬೆಲೆ ನೀಡುತ್ತಿಲ್ಲ. ಅವರ ಕಷ್ಟ ಸುಖಗಳಿಗೆ ಸ್ಪಂದಿಸುತ್ತಿಲ್ಲ ಎಂದು ಅನೇಕರು ನನ್ನ ಬಳಿ ಹೇಳಿದ್ದಾರೆ. ಅಲ್ಲದೆ, ಕ್ಷೇತ್ರಕ್ಕೆ ಬರದೆ ಕಾರ್ಯಕರ್ತರ ಫೋನ್‌ಗಳನ್ನು ತೆಗೆಯದೆ ನಿರ್ಲಕ್ಷ್ಯ ವಹಿಸಿದ್ದಾರೆ. ಕೆಲವು ಮುಖಂಡರು ರಾಜೀನಾಮೆ ನೀಡಿದ್ದಾರೆ. ವರಿಷ್ಠರು ಮನೆ ಬಾಗಿಲಿಗೆ ಹೋಗಿ ಟಿಕೆಟ್ ನೀಡಿ ಗೆಲ್ಲಿಸಿದರು. ಆದರೆ ಕಾರ್ಯಕರ್ತರನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ನಾನು ಬಂಡಾಯ ಸಾರಿದ ಮೇಲೆ ಈಗ ಕ್ಷೇತ್ರದಲ್ಲಿ ಸಂಚರಿಸುತ್ತಿದ್ದಾರೆ. ಕೊತ್ತತ್ತಿ ಹೋಬಳಿ ನಿರ್ಲಕ್ಷ್ಯ ಮಾಡಿದ್ದ ಶಾಸಕ ರವೀಂದ್ರ ಶ್ರೀಕಂಠಯ್ಯ, ಚುನಾವಣೆ ಹತ್ತಿರವಾಗುತ್ತಿದ್ದಂತೆ ಅಲ್ಲಲ್ಲಿ ಗುದ್ದಲಿ ಹಿಡಿದು, ಜೆಸಿಬಿ ತೆಗೆದುಕೊಂಡು ಹೋಗಿ ಪೂಜೆ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಮಾಜಿ ಶಾಸಕ ರಮೇಶ್‌ಬಾಬು ಅವರಿಗೆ ಅಕ್ರಮಗಳೇ ಸುತ್ತುವರೆದಿವೆ. ಅವರು ಮಾಡಿರುವ ಅಕ್ರಮಗಳು ಒಂದೊಂದಾಗಿ ಹೊರಗೆ ಬರುತ್ತಿವೆ. ಯಾವಾಗ ಬೇಕಾದರೂ ಜೈಲಿಗೆ ಹೋಗಬಹುದು. ಅವರು ಸಹ ನನ್ನ ವಿರುದ್ಧ ಇಲ್ಲಸಲ್ಲದ ಅಪಪ್ರಚಾರಗಳನ್ನು ಮಾಡುತ್ತಿದ್ದಾರೆ. ಇದನ್ನೆಲ್ಲ ನಂಬಬೇಡಿ ಎಂದರು.

ಈ ವೇಳೆ ರೈತ ಮುಖಂಡರಾದ ಪ್ರಸನ್ನ ಎನ್.ಗೌಡ, ಎಸ್.ಸಿ.ಮಧುಚಂದನ್, ವಿಕ್ರಾಂತ್ ಲೋಕೇಶ್, ಪ್ರಸನ್ನ, ಮಂಜುನಾಥ್, ಗ್ರಾಪಂ ಅಧ್ಯಕ್ಷ ಲಕ್ಷ್ಮಮ್ಮ, ಲಿಖಿತ, ಲಂಕೇಶ್ ಮಂಗಲ, ಸಿದ್ದೇಗೌಡ, ದಲಿತ ಮುಖಂಡ ಮುಕುಂದ, ಎಂ.ಬಿ. ಲೋಕೇಶ್ ಸೇರಿದಂತೆ ಇತರರು ಭಾಗವಹಿಸಿದ್ದರು.

ದೇವಸ್ಥಾನ, ಕೆರೆಕಟ್ಟೆ ನಿರ್ಮಾಣದಲ್ಲಿ ಶಾಸಕ ಸಿಎಸ್‌ಪಿ ಮುಂದೆ

ಬೇಬಿ ಮಠದ ಪೀಠಾಧ್ಯಕ್ಷ ಡಾ.ಶ್ರೀತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಬಣ್ಣನೆ



ಚಿನಕುರಳಿ, ಫೆ.12– ದೇವಸ್ಥಾನ, ಕೆರೆಕಟ್ಟೆ ನಿರ್ಮಾಣ ವಿಚಾರದಲ್ಲಿ ಶಾಸಕ ಸಿ.ಎಸ್.ಪುಟ್ಟರಾಜು ಸದಾ ಮುಂದೆ ಇರುತ್ತಾರೆ ಎಂದು ಬೇಬಿ ದುರ್ದಂಡೇಶ್ವರ ಮಠದ ಪೀಠಾಧ್ಯಕ್ಷ ಡಾ.ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಬಣ್ಣಿಸಿದರು.

ಬೇಬಿ ಗ್ರಾಮದ ಶ್ರೀಬಸವೇಶ್ವರಸ್ವಾಮಿ ದೇವಾಲಯ ಜೀರ್ಣೋದ್ಧಾರ ಮತ್ತು ನೂತನ ವಿಮಾನ ಗೋಪುರ ಕಳಸ ಪ್ರತಿಷ್ಠಾಪನೆ, ಮಹಾಕುಂಭಾಭಿಷೇಕ ಹಾಗೂ ಶ್ರೀಮರಿದೇವರು ಶಿವಯೋಗಿ ಸ್ವಾಮಿಗಳ 129ನೇ ಜಯಂತಿ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ದೇವಾಲಯಗಳ ನಿರ್ಮಾಣ ಹಾಗೂ ರೈತರಿಗೆ ಅನುಕೂಲವಾಗುವ ಕೆರೆಕಟ್ಟೆ ನಿರ್ಮಾಣ ವಿಚಾರದಲ್ಲಿ ಶಾಸಕ ಸಿ.ಎಸ್.ಪುಟ್ಟರಾಜು ಸದಾ ಮುಂದೆ ಇರುತ್ತಾರೆ. ಅವರು ಸಣ್ಣ ನೀರಾವರಿ ಸಚಿವರಾಗಿದ್ದ ವೇಳೆ ಹಲವು ಕೆರೆಕಟ್ಟೆ, ಏತನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದಾರೆ. ಅಲ್ಲದೇ ದೇವಾ ಲಯಗಳ ನಿರ್ಮಾಣಕ್ಕೂ ಸಾಕಷ್ಟು ಕೊಡುಗೆ ನೀಡಿದ್ದಾರೆ. ಇತ್ತೀಚೆಗೆ ಚಿನಕುರಳಿಯಲ್ಲಿ ದೇವಾಲಯಗಳು, ಸಮುದಾಯ ಭವನಗಳನ್ನು ಅದ್ಭುತವಾಗಿ ನಿರ್ಮಿಸಿ ಲೋಕಾರ್ಪಣೆ ಮಾಡಿದ್ದಾರೆ. ಬೇಬಿ ಗ್ರಾಮದಲ್ಲಿ ಜೀರ್ಣೋದ್ಧಾರಗೊಂಡಿರುವ ಶ್ರೀಬಸವೇಶ್ವರ ದೇವಸ್ಥಾನಕ್ಕೂ ಅಪಾರ ಕೊಡುಗೆ ನೀಡಿದ್ದಾರೆ. ಬೇಬಿ ಗ್ರಾಮದ ಕೆರೆ, ರಸ್ತೆಗಳನ್ನು ಅಭಿವೃದ್ಧಿ ಪಡಿಸಿದ್ದಾರೆ ಎಂದರು.

ಬೇಬಿ ಗ್ರಾಮಕ್ಕೆ ಮರಿದೇವರು ಶ್ರೀಗಳು ಕಾಲಿಟ್ಟ ಮೇಲೆ ಇದೊಂದು ಸುಕ್ಷೇತ್ರವಾಗಿದೆ. ಮಠ, ದೇವಾಲಯ, ಶಿಕ್ಷಣ ಸಂಸ್ಥೆ ಎಲ್ಲವನ್ನು ಹೊಂದಿ ಸಮಾಜಮುಖಿಯಾಗಿ ಕೆಲಸ ಮಾಡುತ್ತಿದೆ. ಮರಿದೇವರು ಶ್ರೀಗಳು ಉತ್ತರ ಕರ್ನಾಟಕದಿಂದ ಬಂದು ಇಲ್ಲಿ ಮಠ ನಿರ್ಮಾಣ ಮಾಡಿದ್ದಾರೆ. ಮುಂದೆ ಇಂತಹ ಮಠಗಳನ್ನು ಭಕ್ತರು ಬೆಳೆಸಿಕೊಂಡು ಮುನ್ನಡೆಯಬೇಕು ಎಂದರು.

ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ಮಾತನಾಡಿ, ಮನೆಗಳಲ್ಲಿ ಗುರು–ಹಿರಿಯರು, ಗ್ರಾಮಗಳಲ್ಲಿ ದೇವಾಲಯಗಳು ಇದ್ದರೆ ಗ್ರಾಮದ ಜನರು ಒಳ್ಳೆಯ ಮಾರ್ಗದಲ್ಲಿ ನೆಮ್ಮದಿಯಿಂದ ಜೀವನ ನಡೆಸಲು ಸಾಧ್ಯ ಎಂದರು.

ಕಾರ್ಯಕ್ರಮದಲ್ಲಿ ಬೇಬಿಬೆಟ್ಟದ ಶ್ರೀರಾಮೇಶ್ವರ ಮಠದ ಪೀಠಾಧ್ಯಕ್ಷ ಶಿವಬಸವ ಸ್ವಾಮೀಜಿ, ಗ್ರಾಪಂ ಅಧ್ಯಕ್ಷ ಬಿ.ಸಿ.ಚಂದ್ರಶೇಖರಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್.ಕೃಷ್ಣೇಗೌಡ, ತಾಪಂ ಮಾಜಿ ಸದಸ್ಯ ಅಲ್ಪಳ್ಳಿ ಗೋವಿಂದಯ್ಯ, ಗ್ರಾಪಂ ಉಪಾಧ್ಯಕ್ಷೆ ಪುಟ್ಟಲಿಂಗಮ್ಮ, ಚಿನಕುರಳಿ ಗ್ರಾಪಂ ಅಧ್ಯಕ್ಷ ಪಾಪಣ್ಣ, ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಮೊಗ್ಗಣ್ಣಗೌಡ, ಮಾಜಿ ಅಧ್ಯಕ್ಷ ಬಿ.ಎಸ್.ಶಿವಣ್ಣ, ಸದಸ್ಯರಾದ ಸಿದ್ದರಾಜು, ಮಂಗಳಮ್ಮ, ಶಾಂತಮ್ಮ ಶಿಂಡಭೋಗನಹಳ್ಳಿ ನಾಗಣ್ಣ, ಅ.ಭಾ.ವೀ.ಲಿಂ.ಮ. ಜಿಲ್ಲಾಧ್ಯಕ್ಷ ಸುಬ್ರಹ್ಮಣ್ಯ, ಎಸ್.ಆನಂದ್, ಎಂ.ಶಿವಕುಮಾರ್, ಸರ್ವೇಯರ್ ನಾಗರಾಜು, ಇಂಜಿನಿಯರ್ ಪ್ರಕಾಶ್, ದೊಡ್ಡಸಿದ್ದಯ್ಯ, ಶಿವಕುಮಾರ್, ಬಿ.ಡಿ. ಪ್ರಕಾಶ್, ಬಿ.ಎಸ್.ಕುಮಾರಸ್ವಾಮಿ, ಹರೀಶ್, ಸುರೇಶ್, ಯಜಮಾನರು ಮುಖಂಡರಿದ್ದರು.

ಹುಣಸೂರು ಶಾಸಕ ಹೆಚ್.ಪಿ.ಮಂಜುನಾಥ್ ಒಕ್ಕಲಿಗರ ನೆಂಟಸ್ಥನ

ಫೆ.24ಕ್ಕೆ ಶಾಸಕರ ಪುತ್ರನ ಜೊತೆ ಒಕ್ಕಲಿಗ ಯುವತಿ ನಿಶ್ಚಿತಾರ್ಥ



ಹುಣಸೂರು, ಫೆ.12–ಹುಣಸೂರು ಶಾಸಕ ಹೆಚ್.ಪಿ.ಮಂಜುನಾಥ್ ಅವರು ಒಕ್ಕಲಿಗರ ನೆಂಟಸ್ಥನ ಬೆಳೆಸುತ್ತಿದ್ದಾರೆ. ಒಕ್ಕಲಿಗ ಯುವತಿಯ ಜೊತೆ ಅವರ ಪುತ್ರನ ನಿಶ್ಚಿತಾರ್ಥ ಫೆ.24ಕ್ಕೆ ನಿಗದಿಯಾಗಿದೆ. ಆರ್ಯ ವೈಶ್ಯ ಸಮಾಜದವರಾದ ಮಂಜುನಾಥ್ ಅವರ ಕುಟುಂಬ ಜಾತ್ಯಾತೀತವಾಗಿ ಸಂಬಂಧಗಳನ್ನು ಬೆಳೆಸುತ್ತಿರುವುದು ವಿಶೇಷವಾಗಿದೆ.

ತಮ್ಮ ಪುತ್ರನ ಜೊತೆ ಒಕ್ಕಲಿಗ ಯುವತಿ ನಿಶ್ಚಿತಾರ್ಥ ಕಾರ್ಯಕ್ರಮ ನಡೆಯಲಿರುವ ಬಗ್ಗೆ ಸ್ವತಃ ಶಾಸಕ ಮಂಜುನಾಥ್ ಅವರೇ ಘೋಷಿಸಿದ್ದಾರೆ. ಹುಣಸೂರಿನ ಬೈಪಾಸ್ ಬಳಿಯ ಅಯ್ಯಪ್ಪಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ಏರ್ಪಡಿಸಿದ್ದ ಒಕ್ಕಲಿಗ ಸಮಾಜದ ಒಗ್ಗಟ್ಟು ಪ್ರದರ್ಶನ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ನನ್ನ ರಾಜಕೀಯ ವಿರೋಧಿಗಳು ಕಳೆದ 15 ವರ್ಷಗಳಿಂದ ನನಗೆ ಒಕ್ಕಲಿಗರ ವಿರೋಧಿ ಎಂಬ ಹಣೆಪಟ್ಟಿ ಕಟ್ಟುತ್ತಿದ್ದರು. ಆದರೆ ನಾನು ಯಾವುದೇ ಕ್ಷಣದಲ್ಲೂ ಒಕ್ಕಲಿಗ ಸಮಾಜದ ವಿರೋಧಿಯಾಗಿಲ್ಲ. ಎಲ್ಲಾ ಸಮಾಜಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡುತ್ತಿದ್ದೇನೆ. ನನ್ನ ಪುತ್ರ ಒಕ್ಕಲಿಗ ಯುವತಿಯನ್ನು ಇಷ್ಟಪಟ್ಟಿದ್ದು, ಫೆ.24 ರಂದು ಆ ಯುವತಿಯೊಂದಿಗೆ ಪುತ್ರನ ನಿಶ್ಚಿತಾರ್ಥ ನಡೆಯಲಿದೆ ಎಂದ ಅವರು, ಇನ್ನು ಮುಂದಾದರೂ ರಾಜಕೀಯ ವಿರೋಧಿಗಳು ನನ್ನನ್ನು ಒಕ್ಕಲಿಗ ವಿರೋಧಿ ಎಂದು ಅಪಪ್ರಚಾರ ಮಾಡುವುದನ್ನು ಬಿಡುತ್ತಾರೆಯೇ ನೋಡೋಣ ಎಂದರು.

ಜಿಟಿಡಿ ಕುಟುಂಬದಿಂದ ಸಹಕಾರಿ ಕ್ಷೇತ್ರ ದುರ್ಬಳಕೆ: ಜಿ.ಟಿ.ದೇವೇಗೌಡರ ಕುಟುಂಬ ಸಹಕಾರಿ ಕ್ಷೇತ್ರವನ್ನು ದುರ್ಬಳಕೆ ಮಾಡಿಕೊಳ್ಳುವುದರ ಜೊತೆಗೆ ಅಮಾಯಕ ಜನರಿಗೆ ಮೋಸ ಮಾಡುತ್ತಿದೆ ಎಂದು ಆರೋಪಿಸಿದ ಶಾಸಕರು, ಚುನಾವಣೆ ಸಮೀಪಿಸಿದಾಗ ಮಾತ್ರ ಊರು ಪ್ರವೇಶಿಸುವ ಜಿಟಿಡಿ ಕುಟುಂಬ, ಕೋವಿಡ್ ಹಾಗೂ ಮಳೆ ಪ್ರವಾಹ ಸಂದರ್ಭದಲ್ಲಿ ಎಲ್ಲಿಗೆ ಹೋಗಿತ್ತು ಎಂದು ಪ್ರಶ್ನಿಸಿದರಲ್ಲದೆ, ಇವರ ಕಪಟ ದಾಟ ಹುಣಸೂರು ಜನತೆ ಮುಂದೆ ನಡೆಯುವುದಿಲ್ಲ ಎಂದರು.

ಜಿಟಿಡಿ ಪುತ್ರ ಹರೀಶ್‌ಗೌಡ ಹುಣಸೂರು ಕ್ಷೇತ್ರಕ್ಕೆ ಕಾಲಿಟ್ಟ ನಂತರ ತಾಲೂಕು ಠಾಣೆಗಳಲ್ಲಿ ಎಷ್ಟು ಪ್ರಮಾಣದ ಪ್ರಕರಣ ಏರಿಕೆಯಾಗಿದೆ ಎಂದು ನೋಡಿ, ಚುನಾವಣೆ ಸಂದರ್ಭದಲ್ಲಿ ಮಾತ್ರ ನನ್ನನ್ನು ಒಕ್ಕಲಿಗ ವಿರೋಧಿ ಎಂದು ಹಣೆ ಪಟ್ಟಿ ಕಟ್ಟಿ ತಮ್ಮ ಬೆಳೆ ಬೇಯಿಸಿಕೊಳ್ಳುತ್ತಿರುವ ನಾಯಕರ ಕಥೆ ಈ ಚುನಾವಣೆಯಲ್ಲಿ ಬಹಿರಂಗವಾಗುತ್ತದೆ ಎಂದರು.

ಫೆ.15 ರಂದು ತಾಲೂಕಿಗೆ ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದ ಪ್ರಚಾರ ಯಾತ್ರೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಹೆಚ್ಚು ಕಾರ್ಯಕರ್ತರು ಸಭೆಗೆ ಆಗಮಿಸಿ ಯಶಸ್ವಿ ಮಾಡಬೇಕೆಂದು ಶಾಸಕ ಮಂಜುನಾಥ್ ಮನವಿ ಮಾಡಿದರು.


ನಂತರ ಮಾತನಾಡಿದ ಮಾವಿನಹಳ್ಳಿ ಸಿದ್ದೇಗೌಡ, ಸಂಪೂರ್ಣ ಸಹಕಾರ ಕ್ಷೇತ್ರವನ್ನು ತಮ್ಮ ಮನೆಯಲ್ಲೆ ಇಟ್ಟು ಕೊಂಡಿರುವ ಜಿಟಿಡಿ ಕುಟುಂಬ, ಯಾವ ಒಕ್ಕಲಿಗ ನಾಯಕನನ್ನೂ ಬೆಳೆಯಲು ಬಿಟ್ಟಿಲ್ಲ. ಇಡಿ ಸಹಕಾರಿ ಕ್ಷೇತ್ರವನ್ನೆ ದುರುಪಯೋಗ ಪಡಿಸಿಕೊಳ್ಳುತ್ತಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾಬಿ.ಜೆ.ವಿಜಯ್ ಕುಮಾರ್ ಮಾತನಾಡಿ, ಈ ಬಾರಿ ನಮ್ಮ ಸರ್ಕಾರ ಬರಲಿದ್ದು, ಮಂಜುನಾಥ್ ಶಾಸಕರಾದರೆ ಖಂಡಿತ ಕ್ಯಾಬಿನೆಟ್ ಸಚಿವರಾಗುತ್ತಾರೆ, ಅವರನ್ನು ಗೆಲ್ಲಿಸಿ ಎಂದರು.

ಕಾಂಗ್ರೆಸ್ ಮುಖಂಡ ನಾಡಪ್ಪನಹಳ್ಳಿ ರಾಜು ಶಿವರಾಜೇಗೌಡ ಒಕ್ಕಲಿಗರೆಲ್ಲ ಮಂಜುನಾಥ್ ವಿರೋಧಿಗಳು ಎಂಬುದು ತಪ್ಪು ಕಲ್ಪನೆ. ಮಂಜುನಾಥ್‌ರ ಅಭಿವೃದ್ಧಿ ಹಾಗೂ ಅವರ ಜನಪರ ಕೆಲಸ ಮೆಚ್ಚಿ ಹಲವಾರು ಪ್ರಬಲ ಒಕ್ಕಲಿಗ ಮುಖಂಡರು ಅವರಿಗೆ ಕೈ ಜೋಡಿಸಿದ್ದೇವೆ, ಮಂಜುನಾಥ್ ಸ್ಥಳೀಯ ನಾಯಕ ಜನರ ಸಂಕಷ್ಟಕ್ಕೆ ಮಿಡಿಯುವ ಗುಣವುಳ್ಳವರು ಅವರಿಗೆ ಬೆಂಬಲಿಸೋಣ. ಹೊರಗಿನ ವ್ಯಾಪಾರಿಗಳಿಗಲ್ಲ ಅಂದರು.

ಕಾರ್ಯಕ್ರಮದಲ್ಲಿ ಸುಮಾರು 150ಕ್ಕೂ ಹೆಚ್ಚು ಮಂದಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು. ಒಗ್ಗಟ್ಟು ಪ್ರದರ್ಶನ ಸಭೆಯಲ್ಲಿ ಕಾಂಗ್ರೆಸ್ ಮುಖಂಡರಾದ ದೇವರಾಜ್, ಸುರೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಟಿ.ವಿ.ನಾರಾಯಣ್, ರಮೇಶ್, ದೇವರಾಜ್, ಕಾರ್ಯಾಧ್ಯಕ್ಷ ವಕೀಲ ಪುಟ್ಟರಾಜು, ಬಸವರಾಜಪ್ಪ, ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷೆ ಶ್ವೇತಾ, ಮಾಜಿ ಸದಸ್ಯೆ ಸುನಿತಾ, ಬಿಳಿಕೆರೆಬಾಬು, ಗಣೇಶ್, ಕಸ್ತೂರಿಗೌಡ, ಸಿಂಡೇನಹಳ್ಳಿ ಜವರೇಗೌಡ, ಹಿರಿಕ್ಯಾತನಹಳ್ಳಿ ಜವರೇಗೌಡ ಸೇರಿದಂತೆ ಹೆಚ್ಚು ಕಾರ್ಯಕರ್ತರು ನೆರೆದಿದ್ದರು.

ನಮ್ಮ ಕುಟುಂಬ ಸಹಕಾರಿ ಕ್ಷೇತ್ರಕ್ಕೆ ಕೊಡುಗೆ ನೀಡಿದೆ



ಹುಣಸೂರು, ಫೆ.12– ತಮ್ಮ ಕುಟುಂಬ ಸಹಕಾರಿ ಕ್ಷೇತ್ರಕ್ಕೆ ಕೊಡುಗೆ ನೀಡಿದೆಯೇ ಹೊರತು ದುರುಪಯೋಗಪಡಿಸಿಕೊಂಡಿಲ್ಲ ಎಂದು ಚಾಮುಂಡೇಶ್ವರಿ ಶಾಸಕ ಜಿ.ಟಿ.ದೇವೇಗೌಡರ ಪುತ್ರ, ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಪ್ರತಿಕ್ರಿಯಿಸಿದ್ದಾರೆ.

'ಮೈಸೂರು ಮಿತ್ರ'ನ ಜೊತೆ ಮಾತನಾಡಿದ ಅವರು, ಸಹಕಾರಿ ಕ್ಷೇತ್ರಕ್ಕೆ ನಮ್ಮ ಕೊಡುಗೆ ಏನು ಎಂಬುದು ಹುಣಸೂರು ತಾಲೂಕಿನ ಸಹಕಾರಿ ಕ್ಷೇತ್ರದಲ್ಲಿರುವ ಎಲ್ಲರಿಗೂ ತಿಳಿದ ವಿಚಾರವಾಗಿದೆ ಎಂದರು. ನಾವು ಯಾರ ವಿರುದ್ಧವೂ ವಿನಾ ಕಾರಣ ಕೇಸ್ ಹಾಕಿಸಿಲ್ಲ ಎಂದ ಅವರು, ಶಾಸಕ ಮಂಜುನಾಥ್ ಅವರ ಸಹೋದರ ಅಮರ್‌ನಾಥ್ ಅವರೇ 78 ಜನರ ವಿರುದ್ಧ ಕೇಸ್ ಹಾಕಿಸಿದ್ದಾರೆ. ಅದು ಇನ್ನೂ ನ್ಯಾಯಾಲಯದಲ್ಲಿ ನಡೆಯುತ್ತಿದೆ ಎಂದರು.

ಶಾಸಕ ಜಿ.ಟಿ.ದೇವೇಗೌಡ ಪ್ರತಿಕ್ರಿಯಿಸಿ, ಸಕಲ ವಿದ್ಯೆಗಳಲ್ಲಿ ಪಾರಂಗತನಾಗಿರುವ ಹುಣಸೂರು ಶಾಸಕ ಹೆಚ್.ಪಿ.ಮಂಜುನಾಥ್ ಚಿಕ್ಕ ವಯಸ್ಸಿನಿಂದಲೇ ತಾನು ಕಲಿತ ಎಲ್ಲಾ ವಿದ್ಯೆಯನ್ನು ಇನ್ನೊಬ್ಬರ ಮೇಲೆ ಪ್ರಯೋಗಿಸುವ ಚಾಳಿ ಹೊಂದಿದವರಾಗಿದ್ದು, ಅಂತಹ ವಿದ್ಯೆಗಳೆಲ್ಲಾ ಅತನಿಗೆ ಸೇರಿದ್ದೆ ವಿನಃ ನನಗಾಗಲಿ, ನನ್ನ ಕುಂಟುಂಬದವರಿಗಾಗಲೀ ಇಲ್ಲ. ಅಭಿವೃದ್ಧಿ ವಿಚಾರದಲ್ಲಿ ಯಾರ ಕೊಡುಗೆ ಎಷ್ಟಿದೆ ಎಂಬುದು ಹುಣಸೂರು ಕ್ಷೇತ್ರದ ಜನರಿಗೆ ಗೊತ್ತಿದೆ. ಈ ಚುನಾವಣೆಯಲ್ಲಿ ಶಾಸಕ ಮಂಜುನಾಥ್ ಅವರಿಗೆ ಕ್ಷೇತ್ರದ ಜನ ಯಾರಿಗೆ ಬುದ್ಧಿ ಕಲಿಸುತ್ತಾರೆ ಎಂದರು.

ಹಾಸನದಲ್ಲಿ ದೇವೇಗೌಡರ ಕುಟುಂಬ ಒಗ್ಗಟ್ಟು ಪ್ರದರ್ಶನ

ಅರಸೀಕೆರೆ ಅಭ್ಯರ್ಥಿ ಘೋಷಣೆ, ಹಾಸನ ಅಭ್ಯರ್ಥಿ ಇನ್ನೂ ನಿಗೂಢ




ಹಾಸನ, ಫೆ.12– ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಹಾಸನ ಟಿಕೆಟ್ ವಿಚಾರವಾಗಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಕುಟುಂಬದಲ್ಲೇ ಮುಸುಕಿನ ಗುದ್ದಾಟ ಉಂಟಾಗಿರುವ ಅದೇ ವೇಳೆ ಭಾನುವಾರ ಕುಟುಂಬದ ಎಲ್ಲರೂ ಒಗ್ಗಟ್ಟು ಪ್ರದರ್ಶಿಸಿದ್ದಾರೆ. ಅರಸೀಕೆರೆ ಕ್ಷೇತ್ರಕ್ಕೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅಭ್ಯರ್ಥಿಯನ್ನು ಘೋಷಿಸಿದರೆ, ಹಾಸನ ಕ್ಷೇತ್ರದ ಅಭ್ಯರ್ಥಿ ಯಾರೆಂಬುದು ಇನ್ನೂ ನಿಗೂಢವಾಗಿಯೇ ಉಳಿದಿದೆ.

ಹೆಚ್.ಡಿ. ಕುಮಾರಸ್ವಾಮಿ ಇಂದು (ಫೆ.12) ಹಾಸನ ಜಿಲ್ಲಾ ಪ್ರವಾಸ ಕೈಗೊಂಡು, ಅರಸೀಕೆರೆಯಲ್ಲಿ ಹಾಲಿ ಜೆಡಿಎಸ್ ಶಾಸಕ ಶಿವಲಿಂಗೇಗೌಡ ವಿರುದ್ಧ ಪರ್ಯಾಯ ಅಭ್ಯರ್ಥಿಯಾಗಿ ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಬಾಣಾವರ ಅಶೋಕ್ ಅವರ ಹೆಸರನ್ನು ಘೋಷಿಸಿದರು. ಹಾಸನ ಕ್ಷೇತ್ರದ ಟಿಕೆಟ್ ಬಗ್ಗೆ ಇಂದು ತೀರ್ಮಾನ ತೆಗೆದುಕೊಂಡು ಟಿಕೆಟ್ ಸಮರಕ್ಕೆ ಪೂರ್ಣ ವಿರಾಮ ಇಡುತ್ತಾರೆ ಎಂದು ಜಿಲ್ಲೆಯ ಮುಖಂಡರು, ಕಾರ್ಯಕರ್ತರು ಭಾವಿಸಿದ್ದರು. ಆದರೆ ಕುಮಾರಸ್ವಾಮಿ ಈ ವಿಚಾರವಾಗಿ ಯಾವುದೇ ತೀರ್ಮಾನ ಕೈಗೊಳ್ಳದೇ ಹಾಸನ ಅಭ್ಯರ್ಥಿ ಯಾರೆಂಬುದನ್ನು ನಿಗೂಢವಾಗಿಟ್ಟಿದ್ದಾರೆ.

ಒಗ್ಗಟ್ಟು ಪ್ರದರ್ಶನ: ಹಾಸನ ಕ್ಷೇತ್ರದ ಟಿಕೆಟ್‌ಗಾಗಿ ಭವಾನಿ ರೇವಣ್ಣ ಅವರು ಕುಮಾರಸ್ವಾಮಿ ಮಾತಿಗೆ ಕ್ಯಾರೇ ಎನ್ನದೇ ಕ್ಷೇತ್ರದಲ್ಲಿ ಭರ್ಜರಿ ಓಡಾಡಿದ್ದರು. ಅವರ ಪುತ್ರ ಸೂರಜ್ ಸಹ ತಮ್ಮ ಚಿಕ್ಕಪ್ಪ ಕುಮಾರಸ್ವಾಮಿ ವಿರುದ್ಧವೇ ತೊಡೆತಟ್ಟಿದ್ದರು. ಇದು ರಾಜ್ಯ ರಾಜಕಾರಣದಲ್ಲಿ ಭಾರೀ ಸಂಚಲನ ಮೂಡಿಸಿತ್ತು. ವಿರೋಧಿಗಳು ಸಹ ಮುಸಿಮುಸಿ ನಗುವಂತಾಗಿತ್ತು. ಇದು ದೇವೇಗೌಡರ ವರ್ಚಸ್ಸಿಗೆ ಧಕ್ಕೆ ಉಂಟಾಗುವ ರೀತಿಯಲ್ಲಿ ಇತ್ತು. ಇದರಿಂದ ಎಚ್ಚೆತ್ತ ದೇವೇಗೌಡರು ತಮ್ಮ ಪುತ್ರ ರೇವಣ್ಣ ಅವರನ್ನು ಮನೆಗೆ ಕರೆಯಿಸಿಕೊಂಡು ಪಾಠ ಮಾಡಿದ್ದರು. ಇಂದು ಹೆಚ್.ಡಿ.ರೇವಣ್ಣ, ಪತ್ನಿ ಭವಾನಿ ರೇವಣ್ಣ, ಪುತ್ರರಾದ ಪ್ರಜ್ವಲ್ ರೇವಣ್ಣ ಹಾಗೂ ಸೂರಜ್ ಅವರುಗಳು ಕುಮಾರಸ್ವಾಮಿ ಜೊತೆ ದೇವಸ್ಥಾನಕ್ಕೆ ಹೋಗಿ ಪೂಜೆ ಸಲ್ಲಿಸಿದರು. ಅಲ್ಲದೇ ಕೆಲ ಕಾರ್ಯಕ್ರಮಗಳಲ್ಲಿ ಎಲ್ಲರೂ ಒಟ್ಟಾಗಿ ಭಾವಹಿಸಿ ಒಗ್ಗಟ್ಟು ಪ್ರದರ್ಶನ ಮಾಡಿತು. ಇದರೊಂದಿಗೆ ನಮ್ಮ ಕುಟುಂಬದಲ್ಲಿ ಯಾವುದೇ ಭಿನ್ನಮತ ಆಗಲಿ ಗುದ್ದಾಟವಾಗಲಿ ಎಲ್ಲ ಎಂದು ವಿರೋಧಿಗಳಿಗೆ ಸಂದೇಶ ರವಾನಿಸಿದರು.

ಭಾನುವಾರ 34ನೇ ಹುಟ್ಟುಹಬ್ಬ ಆಚರಿಸಿಕೊಂಡ ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಕಾಂಗ್ರೆಸ್ ಮುಖಂಡ ಸತೀಶ್‌ಗೌಡ ಚಿನ್ನದ ಉಂಗುರ ತೊಡಿಸಿ, ಆತ್ಮೀಯವಾಗಿ ಸನ್ಮಾನಿಸಿ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಶಾಸಕರ ಪತ್ನಿ ಸೌಮ್ಯ, ಜಿಪಂ ಸದಸ್ಯ ಚಿಕ್ಕವೀರ ನಾಯಕ, ನಂಜನಗೂಡು ಕಾಂಗ್ರೆಸ್ ಉಸ್ತುವಾರಿ ಸೋಮೇಶ್, ಮುಖಂಡರಾದ ಪರಶಿವಮೂರ್ತಿ, ಗಣೇಶ್ ಆಚಾರ್, ಜಯರಾಮ್ ಇನ್ನಿತರರಿದ್ದರು.



ಅನಿಲ್ ಚಿಕ್ಕಮಾದು ಹುಟ್ಟುಹಬ್ಬ: 'ಕೈ' ಮುಖಂಡರಿಂದ ಅಭಿನಂದನೆ



ಹೆಚ್.ಡಿ.ಕೋಟೆ, ಫೆ.12– ಶಾಸಕ ಅನಿಲ್ ಚಿಕ್ಕಮಾದು ಹುಟ್ಟುಹಬ್ಬ ಅಂಗವಾಗಿ ಮೈಸೂರಿನ ಶಾಸಕರ ನಿವಾಸಕ್ಕೆ ತೆರಳಿದ ತಾಲೂಕಿನ ಹಂಪಾಪುರ ಹೋಬಳಿ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಭಾರೀ ಗಾತ್ರದ ಗುಲಾಬಿ ಹೂವಿನ ಹಾರ ಹಾಕಿ, ನೆನಪಿನ ಕಾಣಿಕೆ ನೀಡಿ, ಆತ್ಮೀಯವಾಗಿ ಸನ್ಮಾನಿಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಶಾಸಕ ಅನಿಲ್ ಚಿಕ್ಕಮಾದು, ನನ್ನನ್ನು ಅಭಿನಂದಿಸಿ ಹುಟ್ಟುಹಬ್ಬದ ಶುಭಾಶಯ ಕೋರಿದ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರಿಗೆ ನನ್ನ ಹೃದಯ ಪೂರ್ವಕ ಕೃತಜ್ಞತೆಗಳು. ಜನರ ನಿರೀಕ್ಷೆಯಂತೆ ಮುಂದೆಯೂ ತಾಲೂಕಿನ ಅಭಿವೃದ್ಧಿಗೆ ಹಲವು ಕನಸುಗಳನ್ನು ಹೊಂದಿದ್ದೇನೆ. ಹೆಚ್.ಡಿ.ಕೋಟೆ ಕ್ಷೇತ್ರ ನನ್ನ ಕರ್ಮ ಭೂಮಿಯಾಗಿದ್ದು, ತಾಯಿ ಚಿಕ್ಕದೇವಮ್ಮನ ಕೃಪೆ ಮತ್ತು ಜನರ ಆಶೀರ್ವಾದದಿಂದ ಶಾಸಕನಾಗಿ ಆಯ್ಕೆಯಾಗಿದ್ದು, ಇದಕ್ಕಾಗಿ ನಾನು ತಾಲೂಕಿನ ಜನರಿಗೆ ಚಿರಋಣಿಯಾಗಿರುತ್ತೇನೆ ಎಂದರು. ಮಾಜಿ ಎಪಿಎಂಸಿ ಸದಸ್ಯ ಬೈಪಾಸ್ ಮಂಜುನಾಥ್ ಮಾತನಾಡಿದರು. ತಾಪಂ ಮಾಜಿ ಅಧ್ಯಕ್ಷ ಕೆಂಡಗಣ್ಣೇಗೌಡ, ನಟರಾಜ್, ರಾಜನಾಯಕ, ಜಯಪ್ರಕಾಶ್, ಬಿ.ಪಿ.ಸಿದ್ದನಾಯಕ, ಕುರುಬರ ಸಂಘದ ಜಿಲ್ಲಾಧ್ಯಕ್ಷ ಶಿವಪ್ಪ, ಮುಖಂಡರಾದ ಎಂ.ಗಿರೀಶ್, ಸಣ್ಣಸ್ವಾಮಿ, ಮಂಜು, ಪುಟ್ಟೇಗೌಡ, ಮಂಜುನಾಥ್, ಕೆಂಪೇಗೌಡ, ಚೆಲುವರಾಜ್, ಶೇಖರ್, ರಮೇಶ್, ದೇವರಾಜ್, ಮಲ್ಲೇಶ್, ಸಿದ್ದರಾಜು, ಎಂ.ಚಿಕ್ಕಣ್ಣ, ಶಿವರಾಜು, ಮಹದೇವು, ನಂಜುಂಡಸ್ವಾಮಿ, ಕೀರ್ತಿ ಕುಮಾರ್ ಇತರರಿದ್ದರು.

ಯಾರಿಗೂ ಬೇಡವಾದ ಕೊಯನಾಡು ಸರ್ಕಾರಿ ಶಾಲೆ

ಬರೆ ಕುಸಿದು ಶಾಲಾ ಕಟ್ಟಡ ಜಖಂಗೊಂಡು ತಿಂಗಳುಗಳೇ ಉರುಳಿದರೂ ಕಾಣದ ದುರಸ್ತಿ

- ಕುಸಿದ ಮಣ್ಣು, ಜಖಂಗೊಂಡ ತ್ಯಾಜ್ಯ ಕೂಡ ತೆಗೆಸದ ಸ್ಥಳೀಯ ಆಡಳಿತ
- ಆಡಳಿತ, ವಿಪಕ್ಷ ನಾಯಕರು ಪರಿಶೀಲನೆ ನಡೆಸಿದರೂ ಪ್ರಯೋಜನವಿಲ್ಲ
- ವಿದ್ಯಾರ್ಥಿಗಳು, ಪೋಷಕರ ಪ್ರತಿಭಟನೆಗೂ ಬಗ್ಗದ ಅಧಿಕಾರಿಗಳು





ಮಡಿಕೇರಿ, ಫೆ.12– ಒಂದೆಡೆ ವಿದ್ಯಾ ದೇಗುಲದಲ್ಲಿ ತನ್ಮಯತೆಯಿಂದ ಪಾಠ, ಪ್ರವಚನ ಕೇಳುತ್ತಿರೋ ವಿದ್ಯಾರ್ಥಿಗಳು! ಮತ್ತೊಂದೆಡೆ ಶಾಲೆಯ ಕಟ್ಟಡದ ಪಕ್ಕದಲ್ಲೇ 2022ರ ಜುಲೈ ತಿಂಗಳ ಮಳೆಗಾಲದಲ್ಲಿ ಸಂಭವಿಸಿದ ಭೀಕರ ಭೂಕುಸಿತವನ್ನು ಸಾಕ್ಷೀಕರಿಸುವ ಪಳೆಯುಳಿಕೆಗಳು.!, ಇನ್ನೊಂದೆಡೆ ಈ ಸರಕಾರಿ ಶಾಲೆಯನ್ನು ಉಳಿಸಿಕೊಡಿ, ಅನ್ನೋ ಬೇಡಿಕೆಯೊಂದಿಗೆ ಶಾಲೆಯ ಹೊರಭಾಗ ನೆರೆದಿರುವ ವಿದ್ಯಾರ್ಥಿಗಳ ಪೋಷಕರು ಮತ್ತು ಗ್ರಾಮಸ್ಥರು.! ಈ ದೃಶ್ಯಗಳು ಕಂಡು ಬಂದಿದ್ದು, ಸಂಪಾಜೆ ಬಳಿಯ ಕೊಯನಾಡು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ.

2022ರ ಜುಲೈ ತಿಂಗಳಿನಲ್ಲಿ ಸುರಿದ ಧಾರಾಕಾರ ಮಳೆಯ ಸಂದರ್ಭ ಸಂಪಾಜೆ ಮತ್ತು ಕೊಯನಾಡು ಭಾಗದಲ್ಲಿ ಸರಣಿ ಲಘು ಭೂಕಂಪನಗಳು ಸಂಭವಿಸಿತ್ತು. ಮಳೆಗಾಲದ ಈ ಬೆಳವಣಿಗೆಗಳ ನಡುವೆ ಕೊಯನಾಡು ಸರಕಾರಿ ಶಾಲಾ ಕಟ್ಟಡದ ಹಿಂಬದಿಯಲ್ಲಿದ್ದ ಬೃಹತ್ ಬರೆಯೊಂದು ಶಾಲೆಯ ಕಟ್ಟಡದ ಮೇಲೆ ಕುಸಿದು ಬಿದ್ದು, ಶಾಲೆಯ 2 ಕಟ್ಟಡಗಳು ಸಂಪೂರ್ಣ ಹಾನಿಗೊಂಡಿತ್ತು.

ಈ ಹಿನ್ನೆಲೆಯಲ್ಲಿ ರಾಜ್ಯದ ಮುಖ್ಯಮಂತ್ರಿಗಳು, ಸಚಿವರು, ಸೇರಿದಂತೆ ಆಡಳಿತ ಮತ್ತು ವಿಪಕ್ಷ ಸದಸ್ಯರು ಪ್ರಾಕೃತಿಕ ವಿಕೋಪ ಘಟಿಸಿದ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಆದರೆ ಭೂಕುಸಿತ ಸಂಭವಿಸಿ ಐದಾರು ತಿಂಗಳುಗಳೇ ಕಳೆದರೂ ಭೂಕುಸಿತದ ಮಣ್ಣನ್ನು ತೆರವುಗೊಳಿಸದೇ ಹಾಗೇ ಬಿಡಲಾಗಿದೆ.

1960ರಲ್ಲಿ ಆರಂಭಗೊಂಡ ಈ ಶಾಲೆಯಲ್ಲಿ ನಮ್ಮ ಪೋಷಕರು, ನಾವು ಓದಿದ್ದೇವೆ. ಇದೀಗ ನಮ್ಮ ಮಕ್ಕಳು ಸಹ ಇದೇ ಶಾಲೆಯಲ್ಲಿ ಓದುತ್ತಿದ್ದಾರೆ. ಕೆಲವರ ಮೊಮ್ಮಕ್ಕಳು ಸಹ ಇದೇ ಶಾಲೆಯಲ್ಲಿ ಕಲಿಯುತ್ತಿದ್ದಾರೆ. ಆದರೆ ಇದೀಗ ಭೂಕುಸಿತದ ಮಣ್ಣನ್ನು ತೆರವುಗೊಳಿಸದೇ, ಶಾಲೆಯ ಕಟ್ಟಡ ದುರಸ್ತಿಗೊಳಿಸಲು ಮುಂದಾಗಿಲ್ಲ. ಹೀಗಾದರೆ 6 ದಶಕಗಳನ್ನು ಪೂರೈಸಿರೋ ಗ್ರಾಮದ ಶಾಲೆಯ ಗತಿಯೇನು? ಎಂಬ ಪ್ರಶ್ನೆ ಮಕ್ಕಳ ಪೋಷಕರು ಮತ್ತು ಗ್ರಾಮಸ್ಥರನ್ನು ಕಾಡತೊಡಗಿದೆ. ಭೂಕುಸಿತದ ಮಣ್ಣನ್ನು ಸ್ಥಳದಿಂದ ತೆರವುಗೊಳಿಸಿ, ಸ್ಥಳದಲ್ಲಿ ತಡೆಗೋಡೆಯನ್ನು ನಿರ್ಮಿಸಿಕೊಡುವ ಮೂಲಕ ಶಾಲೆಯನ್ನು ಉಳಿಸಿಕೊಡಬೇಕೆಂಬುದು ಪೋಷಕರ ಮತ್ತು ಗ್ರಾಮಸ್ಥರ ಆಗ್ರಹವಾಗಿದೆ.

ನಾವು ಓದಿದ ಶಾಲೆಯಲ್ಲೇ ಇದೀಗ ತಮ್ಮ ಮಕ್ಕಳು ಓದುತ್ತಿದ್ದಾರೆ. ಗ್ರಾಮೀಣ ಭಾಗದ ಸರಕಾರಿ ಶಾಲೆಯನ್ನು ಉಳಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಗಮನಹರಿಸಿ ಭೂಕುಸಿತದ ಮಣ್ಣನ್ನು ತೆರವುಗೊಳಿಸಿ, ತಡೆಗೋಡೆಯನ್ನು ನಿರ್ಮಿಸಿಕೊಡಬೇಕೆಂದು ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ನವೀನ್ ಕುಮಾರ್ ಒತ್ತಾಯಿಸಿದ್ದಾರೆ.

ಸಂಬಂಧಿಸಿದ ಅಧಿಕಾರಿಗಳ ನಿರ್ಲಕ್ಷ್ಯವೇ ಶಾಲೆಯ ಇಂದಿನ ದುಸ್ಥಿತಿಗೆ ಕಾರಣವಾಗಿದೆ. ಶಾಲೆಗೆ ಮಕ್ಕಳ ದಾಖಲಿಸುವ ಸಂದರ್ಭ ಶಾಲೆಯ ಇಂದಿನ ಸ್ಥಿತಿಯನ್ನು ಪೋಷಕರು ನೋಡಿದರೆ ಮಕ್ಕಳನ್ನು ಈ ಶಾಲೆಗೆ ಯಾರು ಸೇರಿಸುತ್ತಾರೆ. ಶಾಲಾ ಕೊಠಡಿಯನ್ನು ದುರಸ್ತಿಪಡಿಸಬೇಕು, ತಡೆಗೋಡೆಯನ್ನು ನಿರ್ಮಿಸಬೇಕು. ತಪ್ಪಿದ್ದಲ್ಲಿ ಚುನಾವಣೆ ಸಂದರ್ಭ ಗ್ರಾಮಸ್ಥರು ತಕ್ಕ ಉತ್ತರವನ್ನು ನೀಡಲಿದ್ದಾರೆ ಎಂದು ಗ್ರಾಮಸ್ಥ ಕುಸುಮಾಕರ್ ಎಚ್ಚರಿಸಿದರು.


ಶಾಲೆಯನ್ನು ಉಳಿಸಿಕೊಳ್ಳಲೇಬೇಕೆಂಬ ಉದ್ದೇಶದಿಂದ ಹೋರಾಟ ಸಮಿತಿಯೊಂದನ್ನು ರಚಿಸಲಾಗಿದೆ ಎಂದು ತಿಳಿಸಿದ ಕೃಷಿಕ ಅಪ್ಪಣ್ಣ ಶಾಲೆಯ ದುರಸ್ತಿ, ಮಣ್ಣು ತೆರವು, ತಡೆಗೋಡೆ ನಿರ್ಮಿಸುವ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಶಿಕ್ಷಣ ಸಚಿವರ ಗಮನಕ್ಕೆ ತರಬೇಕು. ಈ ನಿಟ್ಟಿನಲ್ಲಿ ಸ್ಥಳೀಯ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ಬೇಜವಾಬ್ದಾರಿಯೂ ಕಾರಣವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಭೀಕರ ಭೂಕುಸಿತದಿಂದಾಗಿ ಶಾಲೆಯ 2 ಕಟ್ಟಡಗಳು ಸಂಪೂರ್ಣ ಹಾನಿಗೊಂಡಿವೆ. ಶಾಲೆ ಹೀಗೆ ಇದ್ದರೆ ಪೋಷಕರು ಮಕ್ಕಳನ್ನು ಶಾಲೆಗೆ ದಾಖಲಾತಿ ಮಾಡಲು ಹಿಂಜರಿಯುತ್ತಾರೆ ಎಂದು ಗ್ರಾಮ ಪಂಚಾಯಿತಿ ಸದಸ್ಯೆ ರಮಾದೇವಿ ಬಾಲ ಚಂದ್ರ ಕಳಗಿ ಅಸಮಾಧಾನ ವ್ಯಕ್ತಪಡಿಸಿ ದರು. ನಮ್ಮ ಊರು, ನಮ್ಮ ಶಾಲೆಯನ್ನು ಉಳಿಸಿಕೊಳ್ಳುವ ಅನಿವಾರ್ಯತೆ ಇದೀಗ ಗ್ರಾಮಸ್ಥರಿಗೆ ಎದುರಾಗಿದೆ ಎಂದು ಹೇಳಿದರು.

ಆಡಳಿತ, ವಿಪಕ್ಷಗಳ ಮುಖಂಡರು ಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ 6 ತಿಂಗಳು ಕಳೆದಿದೆ. ಇನ್ನೂ ಕೂಡ ಭೂಕುಸಿತದ ಮಣ್ಣನ್ನು ತೆರವುಗೊಳಿಸಿಲ್ಲವೆಂದು ಶಾಲೆಯ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಹನೀಫ್ ಸಂಪಾಜೆ ಆಕ್ರೋಶ ವ್ಯಕ್ತಪಡಿಸಿದರು. ಮುಂದಿನ 10 ದಿನಗಳ ಒಳಗಾಗಿ ಮಣ್ಣನ್ನು ತೆರವುಗೊಳಿಸಬೇಕು ಎಂದು ಆಗ್ರಹಿಸಿದರು.

ಒಟ್ಟಿನಲ್ಲಿ, ಭೂ ಕುಸಿತದ ಮಣ್ಣನ್ನು ತೆರವುಗೊಳಿಸಿ, ಶಾಲಾ ಕಟ್ಟಡ ದುರಸ್ಥಿಯೊಂದಿಗೆ ತಡೆಗೋಡೆ ನಿರ್ಮಿಸುವ ಮೂಲಕ ಗ್ರಾಮೀಣ ಭಾಗದ ಸರಕಾರಿ ಶಾಲೆಯನ್ನು ಉಳಿಸುವ ನಿಟ್ಟಿನಲ್ಲಿ ಸಂಬಂಧಿಸಿದವರು ಗಮನಹರಿಸಬೇಕು. ತಪ್ಪಿದ್ದಲ್ಲಿ 'ಸರಕಾರಿ ಶಾಲೆ ಉಳಿಸಿ' ಎಂಬ ಕೂಗು ಅರಣ್ಯರೋಧನವಾಗಲಿದೆ. ಮಾತ್ರವಲ್ಲದೇ, ಈ ಭಾಗದ ಕೂಲಿ ಕಾರ್ಮಿಕರು, ಬಡವರ ಮಕ್ಕಳು ಶಿಕ್ಷಣದಿಂದ ವಂಚಿತರಾಗುವುದರಲ್ಲಿ ಯಾವುದೇ ಸಂದೇಹವಿಲ್ಲ.

ಲೂರ್ದುಮಾತೆ, ಸಂತ ಅನ್ನಮ್ಮನವರ ವಾರ್ಷಿಕೋತ್ಸವ ವಿಜೃಂಭಣೆಯಿಂದ ಆಚರಣೆ



ವಿರಾಜಪೇಟೆ, ಫೆ.12– ವಿರಾಜಪೇಟೆ ನಗರದಲ್ಲಿರುವ ಸಂತ ಅನ್ನಮ್ಮ ದೇವಾಲಯದಲ್ಲಿ ಲೂರ್ದುಮಾತೆ ಹಾಗೂ ಸಂತ ಅನ್ನಮ್ಮನವರ ವಾರ್ಷಿಕ ಮಹೋತ್ಸವವನ್ನು ಶ್ರದ್ಧಾ–ಭಕ್ತಿ ಹಾಗೂ ವಿಜೃಂಭಣೆಯಿಂದ ಆಚರಿಸಲಾಯಿತು.

ಧ್ವಜಾರೋಹಣ ನೆರವೇರಿಸಿದ ಬಳಿಕ ವಾರ್ಷಿಕ ಮಹೋತ್ಸವಕ್ಕೆ ಚಾಲನೆ ನೀಡಲಾಯಿತು, ಜಪಸರ ಮತ್ತು ದಿವ್ಯ ಬಲಿಪೂಜೆ ನಡೆದು ಮಹೋತ್ಸವ ದಂದು ಹಾಸನದ ಸಂತ ಅಂತೋಣಿಯವರ ಧರ್ಮ ಕೇಂದ್ರದ ಧರ್ಮಗುರು ವಂದನೀಯ ಪ್ಯಾಟ್ರಿಕ್ ಜೊವಾನ್ನೆಸ್ ಅವರಿಂದ ಅಡಂಭರ ಗಾಯನ ಬಲಿಪೂಜೆ ನಡೆಯಿತು. ವಿರಾಜಪೇಟೆ ಸಂತ ಅನ್ನಮ್ಮ ದೇವಾಲಯದ ಪ್ರಧಾನ ಧರ್ಮಗುರು ಡಾ.ದಯಾನಂದ ಅವರ ನೇತೃತ್ವದಲ್ಲಿ ನಡೆದ ವಿಶೇಷ ಪ್ರಾರ್ಥನೆಯಲ್ಲಿ ಐಸಕ್ ರತ್ನಾಕರ, ಯೇಸು ಪ್ರಸಾದ್ ಹಾಗೂ ಇತರ ಧರ್ಮಗುರುಗಳು ಭಾಗವಹಿಸಿದ್ದರು.

ಸಂತ ಅನ್ನಮ್ಮ ಹಾಗೂ ಲೂರ್ದು ಮಾತೆಯ ವಿದ್ಯುತ್ ದೀಪಾಲಂಕೃತ ಮಂಟಪಗಳ ಮೆರವಣಿಗೆ ಸಂತ ಅನ್ನಮ್ಮ ದೇವಾಲಯದಿಂದ ಹೊರಟು ದಕ್ಕಾನಿ ಮೊಹಲ್ಲಾ, ತೆಲುಗರ ಬೀದಿ, ಜೈನರ ಬೀದಿ, ದೊಡ್ಡಟ್ಟಿ ಚೌಕಿ ಮೂಲಕ, ಗಡಿಯಾರ ಕಂಬದ ಮಾರ್ಗವಾಗಿ ಖಾಸಗಿ ಬಸ್ ನಿಲ್ದಾಣ, ಸುಣ್ಣದ ಬೀದಿ, ಗೋಣಿಕೊಪ್ಪ ರಸ್ತೆ ಮಾರ್ಗವಾಗಿ ಚರ್ಚ್ ತಲುಪಿದ ಬಳಿಕ ಪರಮ ಪ್ರಸಾದದ ಆಶೀರ್ವಚನ ನಡೆಯಿತು. ಮೆರವಣಿಗೆ ಹಾಗೂ ವಾರ್ಷಿಕ ಮಹೋತ್ಸವದಲ್ಲಿ ಜಿಲ್ಲೆಯ ಅನೇಕ ಚರ್ಚ್‌ಗಳ ಧರ್ಮಗುರುಗಳು ಹಾಗೂ ಭಕ್ತಾದಿಗಳು ನಗರ ಮತ್ತು ಗ್ರಾಮೀಣ ಪ್ರದೇಶ ದಿಂದಲು ಕ್ರೈಸ್ತ ಬಾಂದವರು ಭಾಗವಹಿಸಿದ್ದರು.

ಮುಚ್ಚಿದ ಸರ್ಕಾರಿ ಆಸ್ಪತ್ರೆ ಬಾಗಿಲು

ಆಸ್ಪತ್ರೆ ಆವರಣದಲ್ಲೇ ಮಗುವಿಗೆ ಜನ್ಮ ನೀಡಿದ ಮಹಿಳೆ

ಸಿದ್ದಾಪುರ, ಫೆ12– ಗರ್ಭಿಣಿಯರಿಗೆ ಹಲವಾರು ಯೋಜನೆಗಳನ್ನು ಸರ್ಕಾರ ನೀಡಿದೆಯಾದರೂ ಗ್ರಾಮೀಣ ಭಾಗದ ಜನರಿಗೆ ಸಮಯಕ್ಕೆ ಸರಿಯಾಗಿ ಯಾವುದೇ ಸೌಲಭ್ಯ ಸಿಗುವುದಿಲ್ಲ ಎಂಬ ಮಾತುಗಳು ಸದಾ ಕೇಳಿಬರುತ್ತಿದ್ದು, ಅಂತಹದೇ ಘಟನೆ ಇಲ್ಲಿ ಸಂಭವಿಸಿದೆ. ಕಾರ್ಮಿಕ ಮಹಿಳೆಯೊಬ್ಬರು ಆಸ್ಪತ್ರೆ ಆವರಣದಲ್ಲೇ ಗಂಡು ಮಗುವಿಗೆ ಜನ್ಮ ನೀಡಿದ ಘಟನೆ ವಿರಾಜಪೇಟೆ ತಾಲೂಕಿನ ಸಿದ್ದಾಪುರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ನಡೆದಿದೆ.

ಗುಹ್ಯ ಗ್ರಾಮದ ಕಾರ್ಮಿಕ ಮಹಿಳೆ ಸಂಗೀತಾಗೆ ಬೆಳಗಿನ ಜಾವ ಹೆರಿಗೆ ನೋವು ಕಾಣಿಸಿಕೊಂಡಿದೆ. ತೋಟದ ಮಾಲೀಕರಿಗೆ ತಿಳಿಸಿ ತಕ್ಷಣ ಅವರ ಕಾರಿನಲ್ಲಿ ಸಮುದಾಯ ಅರೋಗ್ಯ ಕೇಂದ್ರಕ್ಕೆ ಬೆಳಿಗ್ಗೆ 6 ಗಂಟೆ ವೇಳೆಗೆ ಕರೆತಂದಾಗ ಆಸ್ಪತ್ರೆಯ ಬಾಗಿಲು ಮುಚ್ಚಿತ್ತು. ಅನೇಕ ಬಾರಿ ಬಾಗಿಲು ಬಡಿದು ಕರೆದರೂ ಯಾರೂ ಬಾಗಿಲು ತೆರೆಯಲಿಲ್ಲ ಎನ್ನಲಾಗಿದೆ. ಅಷ್ಟರಲ್ಲಿ ಹೆರಿಗೆ ನೋವು ಕಾಣಿಸಿಕೊಂಡಿದ್ದ ಮಹಿಳೆಗೆ ಕೆಲವೇ ಕ್ಷಣಗಳಲ್ಲಿ ಮಗುವಿಗೆ ಜನ್ಮ ನೀಡಿದ್ದಾರೆ. ನಂತರ ಕೇಂದ್ರದ ಹಿಂಬಾಗಿಲಿನಿಂದ ಕುಟುಂಬದ ಸದಸ್ಯರು ಒಳಗೆ ಹೋದಾಗ ಕಾವಲುಗಾರ ನೋಡಿ ಬಾಗಿಲು ತೆಗೆದು ಆಸ್ಪತ್ರೆಯಲ್ಲಿದ್ದ ನರ್ಸ್‌ಗಳಿಗೆ ಮಾಹಿತಿ ನೀಡಿದ್ದಾರೆ. ತಕ್ಷಣ ಹೆರಿಗೆಯಾದ ಮಹಿಳೆ ಹಾಗೂ ಮಗುವನ್ನು ವಾರ್ಡ್‌ನಲ್ಲಿ ದಾಖಲಿಸಿಕೊಂಡು ಚಿಕಿತ್ಸೆ ನೀಡಿದ್ದಾರೆ.


ಲಾರಿ ಇಂಜಿನ್‌ನಲ್ಲಿ ಅಡಗಿದ್ದ ನಾಗರಹಾವು ರಕ್ಷಣೆ

ಸಿದ್ದಾಪುರ, ಫೆ.12– ಜೆಸಿಬಿ ಯಂತ್ರದ ಮೂಲಕ ಲಾರಿಗೆ ಮಣ್ಣು ತುಂಬಿಸುತ್ತಿದ್ದ ವೇಳೆ ಮಣ್ಣಿನೊಂದಿಗೆ ಲಾರಿಯಲ್ಲಿ ಕಾಣಿಸಿಕೊಂಡ ನಾಗರಹಾವು ಲಾರಿಯ ಇಂಜಿನ್‌ನಲ್ಲಿ ಅಡಗಿ ಕುಳಿತು ಆತಂಕ ಸೃಷ್ಟಿಸಿದ ಘಟನೆ ತ್ಯಾಗತ್ತೂರು ಬಳಿ ನಡೆದಿದೆ.

ತ್ಯಾಗತೂರು ಗ್ರಾಮದಲ್ಲಿ ಜೆಸಿಬಿ ಯಂತ್ರದ ಮೂಲಕ ಟಿಪ್ಪರ್ ಲಾರಿಗೆ ಮಣ್ಣು ತುಂಬಿಸಲಾಗುತ್ತಿತ್ತು. ಈ ವೇಳೆ ಮಣ್ಣಿನೊಂದಿಗೆ ಸಿಲುಕಿ ಹಾವು ಲಾರಿಗೆ ಬಂದಿದೆ. ಲಾರಿಯ ಚಾಲಕ ಅನೀಸ್ ನಾಗರ ಹಾವನ್ನು ಕಂಡು ಭಯಭೀತರಾಗಿ ಅದನ್ನು ಲಾರಿಯಿಂದ ಕೆಳಗಿಳಿಸಲು ಪರದಾಡಿದ್ದಾರೆ.

ನಂತರ ಇಂಜಿನ್‌ನಲ್ಲಿ ಅಡಗಿ ಕುಳಿತು ನಾಗರ ಹಾವು ಹೊರಗೆ ಬರದೆ ಸತಾಯಿಸಲಾರಂಭಿಸಿತು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಉರಗ ರಕ್ಷಕ ಗುಹ್ಯ ಗ್ರಾಮದ ಸುರೇಶ್ ಪೂಜಾರಿ ಇಂಜಿನ್ ಭಾಗದಲ್ಲಿ ಸಿಲುಕಿದ ಹಾವನ್ನು ಸತತ ಒಂದು ಗಂಟೆ ಕಾಲ ಕಾರ್ಯಾಚರಣೆ ನಡೆಸಿ ಸೆರೆ ಹಿಡಿಯುವಲ್ಲಿ ಯಶಸ್ವಿಯಾದರು. ನಂತರ ಅದನ್ನು ಮಾಲ್ದಾರೆ ಅರಣ್ಯಕ್ಕೆ ಬಿಡಲಾಯಿತು.

ನೆಲ್ಯಹುದಿಕೇರಿಯಲ್ಲಿ ಗಾಂಜಾ ಮಾರಾಟಕ್ಕೆ ಯತ್ನ: ಮೂವರ ಬಂಧನ

ಸಿದ್ದಾಪುರ, ಫೆ.12– ನೆಲ್ಯ ಹುದಿಕೇರಿ ಗ್ರಾಮದಲ್ಲಿ ಗಾಂಜಾ ಮಾರಾಟಕ್ಕೆ ಯತ್ನಿಸಿದ ಮೂವರನ್ನು ವಿರಾಜಪೇಟೆ ತಾಲೂಕಿನ ಸಿದ್ದಾಪುರ ಪೊಲೀಸರು ಬಂಧಿಸಿದ್ದಾರೆ.

ನೆಲ್ಯಹುದಿಕೇರಿ ನಿವಾಸಿ ಆಸಿಬ್, ಮೋಹನ್ ಹಾಗೂ ಎಮ್ಮೆಮಾಡು ಗ್ರಾಮದ ಮಹಮ್ಮದ್ ಆಸೀಫ್ ಬಂಧಿತರು. ಈ ಮೂವರು ಗಾಂಜಾ ಮಾರಾಟಕ್ಕೆ ಯತ್ನಿಸುತ್ತಿರುವ ಬಗ್ಗೆ ತಮಗೆ ದೊರೆತ ಖಚಿತ ಮಾಹಿತಿ ಮೇರೆಗೆ ಸಿದ್ದಾಪುರ ಪೊಲೀಸರು ಹಾಗೂ ಜಿಲ್ಲಾ ಅಪರಾಧ ಪತ್ತೆದಳ ಪೊಲೀಸರು ದಾಳಿ ನಡೆಸಿ, ಆರೋಪಿಗಳಿಂದ ಸುಮಾರು ಒಂದು ಕೆ.ಜಿ ಗಾಂಜಾ, ಕೃತ್ಯಕ್ಕೆ ಬಳಸಿದ ಕಾರನ್ನು ವಶಪಡಿಸಿಕೊಂಡು ಮೂವರನ್ನು ಬಂಧಿಸಿದರು.

ಸಿದ್ದಾಪುರ ಸುತ್ತಮುತ್ತ ಯುವಕರು ಮಾದಕ ವ್ಯಸನಕ್ಕೆ ಬಲಿಯಾಗುತ್ತಿದ್ದು, ಪೊಲೀಸರು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ ಹಿನ್ನೆಲೆಯಲ್ಲಿ ಇತ್ತೀಚಿಗೆ ನೇಮಕಗೊಂಡಿರುವ ಸಿದ್ದಾಪುರ ಪೊಲೀಸ್ ಠಾಣಾಧಿಕಾರಿ ದಿಲೀಪ್ ಕುಮಾರ್ ಕಾರ್ಯಾಚರಣೆಗೆ ಇಳಿದಿದ್ದು ಗಾಂಜಾ ಪ್ರಕರಣವನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ.

ಕಾರ್ಯಾಚರಣೆಯಲ್ಲಿ ಸಿದ್ದಾಪುರ ಪೊಲೀಸರು ಹಾಗೂ ಅಪರಾಧ ಪತ್ತೆದಳ ಸಿಬ್ಬಂದಿಗಳು ಪಾಲ್ಗೊಂಡಿದ್ದರು

ರಾಜ್ಯದ 150 ಕ್ಷೇತ್ರಗಳಲ್ಲಿ ಬಿಬಿಪಿ ಸ್ಪರ್ಧೆ: ಪುಟ್ಟಣ್ಣ

ಈಗಾಗಲೇ 40 ಕ್ಷೇತ್ರಗಳಿಗೆ ಅಭ್ಯರ್ಥಿ ಘೋಷಣೆ



ಚಾಮರಾಜನಗರ, ಫೆ.12– ರಾಜ್ಯದ 150 ಕ್ಷೇತ್ರಗಳಲ್ಲಿ ಭಾರತೀಯ ಬೆಳಕು ಪಾರ್ಟಿ ಸ್ಪರ್ಧೆ ಮಾಡಲಿದೆ ಎಂದು ಪಕ್ಷದ ಸಂಸ್ಥಾಪಕ ಅಧ್ಯಕ್ಷ ಪುಟ್ಟಣ್ಣ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರ ಮಾತನಾಡಿ, ಈಗಾಗಲೇ ರಾಜ್ಯ 40 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳ ಘೋಷಣೆ ಮಾಡಿ ಪ್ರಚಾರ ಮಾಡಲಾಗುತ್ತಿದೆ. ಅಭ್ಯರ್ಥಿಗಳ ಸಹ ಕ್ಷೇತ್ರದಲ್ಲಿ ಠಿಕಾಣಿ ಹೂಡಿ ಪಕ್ಷದ ಪರ ಅಲೆ ಎಬ್ಬಿಸುತ್ತಿದ್ದಾರೆ. ಚಾಮರಾಜನಗರ ಜಿಲ್ಲೆಯ ನಾಲ್ಕು ಕ್ಷೇತ್ರಗಳ ಪೈಕಿ ಚಾಮರಾಜನಗರ ಕ್ಷೇತ್ರದ ಪಕ್ಷದ ಅಭ್ಯರ್ಥಿಯಾಗಿ ಗುರುಸಿದ್ದಪ್ಪ, ಕೊಳ್ಳೇ ಗಾಲ ವಿಧಾನ ಕ್ಷೇತ್ರದ ಅಭ್ಯರ್ಥಿಯಾಗಿ ವಿನೋದ ಅವರನ್ನು ಕಣಕ್ಕಿಳಿಸಲಾಗಿದೆ. ಇನ್ನೆರಡು ಕ್ಷೇತ್ರಗಳ ಅಭ್ಯರ್ಥಿಗಳ ಅಭ್ಯರ್ಥಿಗಳನ್ನು ಸದ್ಯದಲ್ಲಿ ಘೋಷಿಸಿಸಲಾಗುವುದು ಎಂದರು.

ಬಿಬಿಪಿ ಕಾರ್ಯಾಧ್ಯಕ್ಷ ಥಾವರ್ ಸಿಂಗ್ ರಾಥೋಡ್ ಮಾತನಾಡಿ, ರಾಷ್ಟ್ರೀಯ ಹಾಗೂ ಪ್ರಾದೇಶಿಕ ಪಕ್ಷಗಳ ವಿರುದ್ಧವಾಗಿ ಭಾರತೀಯ ಬೆಳಕು ಪಾರ್ಟಿಯನ್ನು ಸಂಘಟಿಸುವುದು ನಮ್ಮ ಮುಖ್ಯ ಗುರಿಯಾಗಿದೆ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವು ಸದೃಢಗೊಂಡು ಮತದಾರ ಮನ ಮುಟ್ಟುವಲ್ಲಿ ಯಶಸ್ವಿಯಾಗಲಿದೆ. ಪಕ್ಷದ ಸಂಸ್ಥಾಪಕ ಅಧ್ಯಕ್ಷರಾದ ಪುಟ್ಟಣ್ಣ ಅವರ ನೇತೃತ್ವದಲ್ಲಿ ರಾಜ್ಯಾದ್ಯಂತ ಸಂಚರಿಸಿ ಪಕ್ಷವನ್ನು ಬಲಿಷ್ಠಗೊಳಿಸಲಾಗುವುದು ಎಂದರು

ಪತ್ರಿಕಾಗೋಷ್ಠಿಯಲ್ಲಿ ಪಕ್ಷದ ರಾಜ್ಯಾಧ್ಯಕ್ಷ ಮನೋಹರ್, ಪ್ರಧಾನ ಕಾರ್ಯದರ್ಶಿ ರಾಜಶೇಖರ್, ಕಾರ್ಯದರ್ಶಿ ಕೃಷ್ಣ ಚವ್ಹಾಣ್, ಚಾಮರಾಜನಗರ ಕ್ಷೇತ್ರದ ಅಭ್ಯರ್ಥಿ ಗುರುಸಿದ್ದಪ್ಪ, ಕೊಳ್ಳೇಗಾಲ ಕ್ಷೇತ್ರದ ಅಭ್ಯರ್ಥಿ ವಿನೋದ್, ಡಾ.ಗುರುಪಾದಪ್ಪ ಸಜ್ಜನ್, ಪ್ರಕಾಶ್ ಪಿಂಟೋ ಹಾಜರಿದ್ದರು.

ರಾಮಾಪುರದಲ್ಲಿ ವೈಭವದ ಸಾಹಿತ್ಯ ಸಮ್ಮೇಳನ

ಚಾ.ನಗರ ಜಿಲ್ಲೆ ಆರ್ಥಿಕವಾಗಿ ಹಿಂದುಳಿದಿದ್ದರೂ ಶೈಕ್ಷಣಿಕವಾಗಿ ಮುಂದುವರೆಯುತ್ತಿದೆ; ಶಾಸಕ ನರೇಂದ್ರ



ಹನೂರು, ಫೆ.12– ಜಿಲ್ಲೆ ಆರ್ಥಿಕವಾಗಿ ಹಿಂದುಳಿದಿದ್ದರೂ ಶೈಕ್ಷಣಿಕವಾಗಿ ಮುಂದುವರೆಯುತ್ತಿದೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯು ಪರೀಕ್ಷೆ ಫಲಿತಾಂಶದಲ್ಲಿ ಗಮನಾರ್ಹ ಸಾಧನೆ ಮಾಡಿರುವುದೇ ಇದಕ್ಕೆ ಸಾಕ್ಷಿ ಎಂದು ಶಾಸಕ ಆರ್.ನರೇಂದ್ರ ತಿಳಿಸಿದರು.

ತಾಲೂಕಿನ ರಾಮಾಪುರದಲ್ಲಿ ನಡೆದ ತಾಲೂಕು ಮಟ್ಟದ ವಿಜೃಂಭಣೆಯ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಚಾಮರಾಜನಗರ ಜಿಲ್ಲೆ ಹಿಂದುಳಿದ ಜಿಲ್ಲೆ ಎನ್ನುತ್ತಿದ್ದಾರೆ. ಆರ್ಥಿಕವಾಗಿ ಹಿಂದುಳಿ ದಿದ್ದರೂ ಶೈಕ್ಷಣಿಕವಾಗಿ ಗಣನೀಯ ಸಾಧನೆ ಮಾಡುವ ಮೂಲಕ ಹಿಂದುಳಿದ ಜಿಲ್ಲೆ ಎಂಬ ಹಣೆಪಟ್ಟಿಯಿಂದ ಹೊರಬಂದು ಮುಂದುವರೆಯುತ್ತಿರುವ ಜಿಲ್ಲೆಯಾಗಿ ಹೊರಹೊಮ್ಮಿದೆ. ಗುಡ್ಡಗಾಡು ಪ್ರದೇಶಗಳಿಂದಲೇ ಆವೃತವಾಗಿರುವ ಹನೂರು ತಾಲೂಕು ವರ್ಷದಿಂದ ವರ್ಷಕ್ಕೆ ಶೈಕ್ಷಣಿಕವಾಗಿ ಪ್ರಗತಿ ಸಾಧಿಸುವ ಮೂಲಕ ರಾಜ್ಯದ ಗಮನ ಸೆಳೆದಿದೆ ಎಂದರು.

ಮಹದೇಶ್ವರ ಮತ್ತು ಸಿದ್ದಪ್ಪಾಜಿ ನೆಲೆಸಿರುವ ಈ ಸ್ಥಳ ಜಾನಪದ ತವರೂರು. ಜಾನಪದ ಸಾಹಿತ್ಯವನ್ನು ಶ್ರೀಮಂತಗೊಳಿಸಿರುವ ಇಬ್ಬರು ಮಹನೀಯರ ಪರಂಪರೆ ಈ ನಾಡಿಗೆ ಉತ್ತಮ ಕೊಡುಗೆಯನ್ನು ನೀಡಿವೆ. ಈ ನೆಲಮೂಲದ ಸಂಸ್ಕೃತಿಯನ್ನು ಅರಿಯಲು ಹೆಚ್ಚಿನ ಸಂಖ್ಯೆಯಲ್ಲಿ ಸಂಶೋಧನ ಕೃತಿಗಳು ಹೊರ ಬರಬೇಕಿದೆ. ಅದು ಮುಂದಿನ ಪೀಳಿಗೆಗೆ ಅನುಕೂಲವಾಗುವುದರ ಜತೆಗೆ ಮಾರ್ಗದರ್ಶನವಾಗಲಿದೆ ಎಂದರು.

ಸಮ್ಮೇಳನದ ಸರ್ವಾಧ್ಯಕ್ಷ ಸು. ಬಸವ ರಾಜು ದೊಡ್ಡಟ್ಟಿ ಮಾತನಾಡಿ, ಇಲ್ಲಿನ ಮಾದೇಶ್ವರ, ಸಿದ್ದಪ್ಪಾಜಿ ತಮ್ಮ ಆಚಾರ ವಿಚಾರಗಳ ಮೂಲಕ ಜಾನಪದ ಕ್ಷೇತ್ರವನ್ನು ಅತ್ಯಂತ ಶ್ರೀಮಂತಗೊಳಿಸಿದ್ದಾರೆ. ಕನ್ನಡ ಸಾಹಿತ್ಯವನ್ನು ಹಲವು ಕವಿಗಳು ಶ್ರೀಮಂತ ಗೊಳಿಸಿದ್ದರೆ ಈ ಭಾಗದ ಸಾಹಿತ್ಯವನ್ನು ಸತ್ವಗೊಳಿಸಿದ ಕೀರ್ತಿ ಈ ಭಾಗದ ಆರಾಧ್ಯದೈವರಿಗೆ ಸಲ್ಲುತ್ತದೆ ಎಂದು.

ಗಡಿನಾಡಿನ ಬವಣೆಗಳನ್ನು ಸರ್ಕಾರಗಳು ಆಲಿಸಿ, ಇಲ್ಲಿನ ಮೂಲ ಸೌಕರ್ಯಗಳನ್ನು ಕಲ್ಪಿಸುವ ಮನಸ್ಸು ಮಾಡಬೇಕು. ಜತೆಗೆ ನಾಡಯ, ನುಡಿ, ಗಡಿಗಳ ಅಬಿವೃದ್ಧಿಗಾಗಿ ಸರ್ಕಾರವನ್ನು ಒತ್ತಾಯಿಸುವ ಕೆಲಸವನ್ನು ಕನ್ನಡ ಸಾಹಿತ್ಯ ಪರಿಷತ್ ಮಾಡಬೇಕಿದೆ. ಇಂದಿಗೂ ಗಡಿಭಾಗದ ಗ್ರಾಮಗಳ ಕನಿಷ್ಠ ಮೂಲಸೌಕರ್ಯಗಳಿಂದ ವಂಚಿತಗೊಂಡಿವೆ ರಸ್ತೆ ವಿದ್ಯುತ್, ಆರೋಗ್ಯ, ವಾಹನ ಹಾಗೂ ನೈರ್ಮಲ್ಯ ಎಂಬುದು ಕನಸಿನ ಮಾತಾಗಿಯೇ ಉಳಿದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಡಾ.ಡಿ. ನಾಗಣ್ಣ, ಹಿಂದುಳಿದ ಜಿಲ್ಲೆಯಾಗಿದ್ದರೂ ಸಾಹಿತ್ಯಿಕವಾಗಿ ಸಾಕಷ್ಟು ಅಭಿವೃದ್ಧಿ ಸಾಧಿಸಿದೆ. 13–14 ಶತಮಾನದಲ್ಲಿ ಉದ್ಭವವಾದ ಮಂಟೇಸ್ವಾಮಿ, ಮಹದೇಶ್ವರ ಪರಂಪರೆ ಈ ನೆಲಮೂಲದ ಬಹು ದೊಡ್ಡ ಪರಂಪರೆಯಾಗಿವೆ. ದಮನಿತರ ದನಿಯಾಗಿ ಸಂತರು ಮಾಡಿದ ಸಾಧನೆ ಅನನ್ಯವಾದುದಾಗಿದೆ ಎಂದರು.

ರಾಮಾಪುರದ ಮಹದೇಶ್ವರ ದೇವಾಲಯಕ್ಕೆ ಪೂಜೆ ಸಲ್ಲಿಸಿದ ಬಳಿಕ ಗ್ರಾಪಂ ಅಧ್ಯಕ್ಷೆ ದಾಕ್ಷಾಯಿಣಿ ಮೆರವಣಿಗೆಗೆ ವಿದ್ಯುಕ್ತ ಚಾಲನೆ ನೀಡಿದರು. ಬಳಿಕ ತೆರೆದ ವಾಹನದಲ್ಲಿ ಸಮ್ಮೇಳನಾಧ್ಯಕ್ಷರನ್ನು ಮೆರವಣಿಗೆ ಮಾಡಲಾಯಿತು. ಮೆರವಣಿಗೆಯುದ್ದಕ್ಕೂ ಕಳಶವನ್ನೊತ್ತ ವಿದ್ಯಾರ್ಥಿಗಳು, ವೀರಗಾಸೆ ನೃತ್ಯ, ಪೂಜಾ ಕುಣಿತ ಹಾಗೂ ವಿದ್ಯಾರ್ಥಿಗಳ ಮಾರಿ ಕುಣಿತ ನೋಡುಗರನ್ನು ಮೂಕವಿಸ್ಮಿತರ ನ್ನಾಗಿ ಮಾಡಿದವು.

ಇದಕ್ಕೂ ಮುನ್ನ ಧ್ವಜಾರೋಹಣ ನೆರವೇರಿತು. ಕಂದಾಯ ನಿರೀಕ್ಷಕ ಶಿವಕುಮಾರ್ ರಾಷ್ಟ್ರಧ್ವಜಾರೋಹಣ ಮಾಡಿದರು. ರಾಮಪುರದ ಕನ್ನಡಪರ ಹೋರಾಟಗಾರ ರಾಜಣ್ಣ ನಾಡಧ್ವಜಾರೋಣ ನೆರವೇರಿಸಿದರು, ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಘಟಕದ ಅಧ್ಯಕ್ಷ ಮಲ್ಲೇಶ್ ಮಾಲಿಂಕಟ್ಟೆ ಪರಿಷತ್ತಿನ ಧ್ವಜಾರೋಹಣ ನೆರವೇರಿಸಿದರು.

ಪಪಂ ಉಪಾಧ್ಯಕ್ಷ ಗಿರೀಶ್, ಗ್ರಾಪಂ ಅಧ್ಯಕ್ಷೆ ದಾಕ್ಷಾಯಿಣಿ, ಜಿ ಪಂ ಮಾಜಿ ಸದಸ್ಯ ಬಸವರಾಜು, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ಎಂ. ಶೈಲಕುಮಾರ್, ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಎಂ. ಮಹಾದೇಶ್, ಕರುನಾಡ ವಿಜಯ ಸೇನೆಯ ವಿನೋದ್ ಕುಮಾರ್, ಗೌರವ ಕಾರ್ಯದರ್ಶಿ ಅಭಿಲಾಶ್ ಇದ್ದರು.


ಸ್ವಾತಂತ್ರ್ಯ ಹೋರಾಟಗಾರ ಕೆ.ಎಂ.ತೋಟಪ್ಪ ನಿಧನ



ಚಾಮರಾಜನಗರ, ಫೆ.12– ನಗರದ ಕರಿನಂಜನಪುರದ ನಿವಾಸಿಯೂ ಆದ ಸ್ವಾತಂತ್ರ್ಯ ಹೋರಾಟಗಾರ ಕೆ.ಎಂ.ತೋಟಪ್ಪ(92) ಭಾನುವಾರ ಬೆಳಗ್ಗೆ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ನಿಧನರಾದರು.


ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಮಗಳು ಪುತ್ರಿ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸೋಮವಾರ ಅವರ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಯಲಿದೆ. 1931ರ ಜುಲೈ 1ರಂದು ಜನಿಸಿದ್ದ ಅವರು 15ನೇ ವಯಸ್ಸಿನಲ್ಲಿ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದರು. 1947ರಲ್ಲಿ ಸ್ವಾತಂತ್ರ್ಯ ಘೋಷಣೆಗೂ ಮುನ್ನ ನಡೆದಿದ್ದ ಚಳವಳಿಯಲ್ಲಿ ಭಾಗವಹಿಸಿದ್ದ ತೋಟಪ್ಪ ಜೈಲು ಸೇರಿದ್ದರು. ಕಳೆದ ಆಗಸ್ಟ್‌ನಲ್ಲಿ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಸಂದರ್ಭದಲ್ಲಿ ಜಿಲ್ಲಾಡಳಿತದಿಂದ ತೋಟಪ್ಪ ಅವರನ್ನು ಸನ್ಮಾನಿಸಲಾಗಿತ್ತು.

ಗುಂಬಳ್ಳಿ ಚಿನ್ನೆಗೌಡ್ರು



ಯಳಂದೂರು.ಫೆ.12– ಪತ್ರಕರ್ತ ಗುಂಬಳ್ಳಿ ನಾಗೇಂದ್ರ ಅವರ ತಂದೆ ಗುಂಬಳ್ಳಿ ಚಿನ್ನೆಗೌಡ್ರು (90) ಅನಾರೋಗ್ಯದಿಂದ ಭಾನುವಾರ ರಾತ್ರಿ ನಿಧನರಾಗಿದ್ದಾರೆ. ಮೃತರು ಪತ್ನಿ ಜಯಮ್ಮ, ಐವರು ಪುತ್ರರು, ಐವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಗುಂಬಳ್ಳಿ ಗ್ರಾಮದ ಜಮೀನಿನಲ್ಲಿ ಸೋಮವಾರ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ತಾಲೂಕು ಕಾರ್ಯನಿರತ ಪತ್ರಕರ್ತ ಸಂಘ ಸಂತಾಪ ವ್ಯಕ್ತಪಡಿಸಿದೆ

ರತ್ನಮ್ಮ



ಆಲೂರು(ಚಾಮರಾಜನಗರ), ಫೆ.12– ಯಳಂದೂರು ತಾಲೂಕು ಅಂಬಳೆ ಗ್ರಾಮದ ನಿವಾಸಿ ಹಾಗೂ ಅಂಬಳೆ ಗ್ರಾಮ ಪಂಚಾಯಿತಿ ಮಾಜಿ ಸದಸೆ ರತ್ನಮ್ಮ (ಆಲೂರು ಲೇಟ್‌ಗುರು ಲಿಂಗಪ್ಪರವರ ಪತ್ನಿ) ಕಳೆದ ರಾತ್ರಿ ಹೃದಯಾಘಾತದಿಂದ ನಿಧನರಾದರು. ಅವರಿಗೆ 65 ವರ್ಷ ವಯಸ್ಸಾಗಿತ್ತು.

ಮೃತರು ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ಅವರ ತೋಟದಲ್ಲಿ ನಡೆಯಿತು.

ಯಳಂದೂರು ತಾಲೂಕು ಪತ್ರಕರ್ತರ ಭವನಕ್ಕೆ ನಿವೇಶನ

ಶಾಸಕ ಎನ್. ಮಹೇಶ್ ಭರವಸೆ



ಯಳಂದೂರು, ಫೆ.12– ಪಟ್ಟಣದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ಭವನ ನಿರ್ಮಾಣಕ್ಕೆ ಅನೇಕ ವರ್ಷಗಳಿಂದಲೂ ಸಂಘದ ಪದಾಧಿಕಾರಿಗಳು ನಿವೇಶನಕ್ಕೆ ಬೇಡಿಕೆ ಇಟ್ಟಿದ್ದಾರೆ. ಇದನ್ನು ಒದಗಿಸುವ ನಿಟ್ಟಿನಲ್ಲಿ ಪಟ್ಟಣ ಪಂಚಾಯಿತಿಗೆ ಸೇರಿದ ಖಾಲಿ ನಿವೇಶನವನ್ನು ಗುರುತಿಸಿ ಕೊಡಿಸಿಕೊಡಲು ಯತ್ನಿಸಲಾಗುವುದು ಎಂದು ಶಾಸಕ ಎನ್. ಮಹೇಶ್ ಭರವಸೆ ನೀಡಿದ್ದಾರೆ.

ಪಟ್ಟಣದ ಅಗ್ರಹಾರ ಬೀದಿಯಲ್ಲಿರುವ ಶ್ರೀ ಶಂಕರ ಸಭಾಭವನದಲ್ಲಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ದಿನದರ್ಶಿಕೆ ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ಪತ್ರಕರ್ತರು ಸಮೂಹವನ್ನು ಸುಸ್ಥಿತಿಗೆ ತೆಗೆದುಕೊಂಡು ಹೋಗಬೇಕು. ಇದಕ್ಕೆ ಒಳ್ಳೆಯ ವಿಷಯಗಳ ಬಗ್ಗೆ ಚರ್ಚೆ ನಡೆಯಬೇಕು. ಈಚೆಗೆ ಸಾಮಾಜಿಕ ಜಾಲತಾಣಗಳು ತಾವೇ ಸಮಸ್ಯೆಗಳನ್ನು ಸೃಷ್ಟಿಸಿ ಜಡ್ಜ್‌ಮೆಂಟ್‌ಗಳನ್ನು ತಾವೇ ಕೊಡುವ ಮಟ್ಟಿಗೆ ಬಂದು ನಿಂತಿವೆ. ಸದನದಲ್ಲಿ ನಡೆಯುವ ಚರ್ಚೆಗಳ, ಜಗಳಗಳು ಹೈಲೆಟ್ ಆಗುತ್ತವೆ ಹೊರತು ಇಲ್ಲಿ ನಡೆಯುವ ಗಂಭೀರ ವಿಷಯಗಳು, ಅಭಿವೃದ್ಧಿ ವಿಷಯಗಳು ಗಣನೆಗೆ ಬರುವುದೇ ಇಲ್ಲ ಎಂದರು.

ಮಾಜಿ ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಎಸ್. ಬಾಲರಾಜು ಮಾತನಾಡಿದರು. ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗೌಡಹಳ್ಳಿ ಮಹೇಶ್ ಮಾತನಾಡಿ, ಪತ್ರಿಕಾರಂಗದಲ್ಲಿ ತುರುಸಿನ ಪೈಪೋಟಿ ಇದೆ. ಆದರೆ ಕೆಲವು ಸಾಮಾಜಿಕ ಜಾಲತಾಣಗಳನ್ನೇ ಕೆಲವರು ಮಾಧ್ಯಮಗಳಾಗಿ ಬಳಸಿಕೊಂಡಿವೆ. ಇಂತಹವರಿಗೆ ಸಾಮಾಜಿಕ ಬದ್ಧತೆಯಾಗಲಿ, ಈ ರಂಗದ ಗಂಧಗಾಳಿಯೂ ಗೊತ್ತಿರುವುದಿಲ್ಲ ಇಂತಹದ್ದನ್ನು ಕಡಿವಾಣ ಹಾಕುವ ಜರೂರತ್ತು ಪ್ರಸ್ತುತಕ್ಕಿದೆ ಎಂದರು.

ಕಾರ್ಯನಿರತ ಪ್ರತ್ರಕರ್ತರ ಸಂಘದ ಉಪಾಧ್ಯಕ್ಷ ವೈಕೆ.ಮೋಳೆ ವಿ.ನಾಗರಾಜು ಪತ್ರಕರ್ತರ ಸಂಘದ ಕಟ್ಟಡ ನಿರ್ಮಿಸುವಂತೆ, ಬಸ್ ಪಾಸ್ ಕೊಡಿಸಲು, ನಿವೇಶನಗಳನ್ನು ನೀಡಲು ಧ್ವನಿ ಎತ್ತಬೇಕೆಂದು ಶಾಸಕರಿಗೆ ಮನವಿ ಮಾಡಿದರು.

ಮಾಜಿ ಶಾಸಕ ಎಸ್. ಜಯಣ್ಣ, ಚಾಮುಲ್ ಅಧ್ಯಕ್ಷ ನಾಗೇಂದ್ರ, ಬಿಜೆಪಿ ಮುಖಂಡ ಕಿನಕಹಳ್ಳಿ ರಾಚಯ್ಯ, ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಅಂಬಳೆ ವೀರಭದ್ರ ನಾಯಕ ಮಾತನಾಡಿದರು. ಪಪಂ ಅಧ್ಯಕ್ಷೆ ಪ್ರಭಾವತಿ ರಾಜಶೇಖರ್, ಸದಸ್ಯ ವೈ.ಜಿ. ರಂಗನಾಥ, ಜಿಪಂ ಮಾಜಿ ಉಪಾಧ್ಯಕ್ಷ ಜೆ. ಯೋಗೇಶ್, ರೈತ ಸಂಘದ ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್, ದಸಂಸ ಜಿಲ್ಲಾ ಸಂಚಾಲಕ ಯರಿಯೂರು ರಾಜಣ್ಣ, ಕರುಣಾ ಟ್ರಸ್ಟ್ ಸಂಯೋಜಕ ನಾಗೇಂದ್ರ, ಮುಖಂಡರಾದ ಮಲ್ಲು, ನಿಂಗರಾಜು ಸೇರಿದಂತೆ ಪತ್ರಕರ್ತರ ಸಂಘದ ಸದಸ್ಯರು ಹಾಜರಿದ್ದರು.

ಮೆಗಾ ಲೋಕ ಅದಾಲತ್‌ನಲ್ಲಿ 11975 ಪ್ರಕರಣಗಳ ಇತ್ಯರ್ಥ

ಚಾಮರಾಜನಗರ, ಫೆ.12– ಜಿಲ್ಲೆಯ ಎಲ್ಲ ನ್ಯಾಯಾಲಯಗಳಲ್ಲಿ ಆಯೋಜಿಸಿದ್ದ ಮೆಗಾ ಲೋಕ ಅದಾಲತ್‌ನಲ್ಲಿ 9.77 ಕೋಟಿ ಮೊತ್ತದ 11975 ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ.



ಜಿಲ್ಲಾ ಸೆಷನ್ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಬಿ.ಎಸ್. ಭಾರತಿ ಅವರ ಅಧ್ಯಕ್ಷತೆಯಲ್ಲಿ ಜಿಲ್ಲೆಯ ವಿವಿಧ ನ್ಯಾಯಾಲಯಗಳಲ್ಲಿ ಶನಿವಾರ ಮೆಗಾ ಲೋಕ್ ಅದಾಲತ್ ಜರುಗಿತ್ತು. ನಂತರ ನಡೆದ ಸುದ್ದಿಗೋಷ್ಠಿಯಲ್ಲಿ ನ್ಯಾಯಾಧೀಶರಾದ ಬಿ.ಎಸ್. ಭಾರತಿ ಮಾತನಾಡಿ, ನ್ಯಾಯಾಲದ 1621 ಹಾಗೂ ವ್ಯಾಜ್ಯ ಪೂರ್ವ 10354 ಪ್ರಕರಣಗಳನ್ನು ರಾಜಿ ಸಂಧಾನ ಮಾಡಿಸಿ ಸುಮಾರು 9,77,91,840 ಮೊತ್ತ ಪರಿಹಾರ ಕೊಡಿಸಲಾಯಿತು. ವ್ಯಾಜ್ಯಪೂರ್ವ ಪ್ರಕರಣಗಳಿಂದ ಇವುಗಳಲ್ಲಿ 3,21,05,223 ರೂ ಮೊತ್ತವನ್ನು ಇತ್ಯರ್ಥ ಮಾಡಲಾಗಿದೆ ಎಂದರು. ಚಾಮರಾಜನಗರ ನ್ಯಾಯಾಲಯದಲ್ಲಿ 6401, ಯಳಂದೂರು 465, ಕೊಳ್ಳೇಗಾಲ 3207 ಹಾಗೂ ಗುಂಡ್ಲುಪೇಟೆ ನ್ಯಾಯಾಲಯದಲ್ಲಿ 1902 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ ಎಂದು ವಿವರಿಸಿದರು.

ಕಳೆದ ನವೆಂಬರ್ 12ರಂದು ಜಿಲ್ಲೆಯಲ್ಲಿ ನಡೆದಿದ್ದ ಅದಾಲತ್‌ನಲ್ಲಿ 10354 ಪ್ರಕರಣ ಇತ್ಯರ್ಥಗೊಂಡಿದ್ದು, ಈ ಬಾರಿ ಹೆಚ್ಚುವರಿ ಸಾವಿರಕ್ಕೂ ಹೆಚ್ಚು ಪ್ರಕರಣ ಇತ್ಯರ್ಥಗೊಂಡಿದೆ. ಇದಕ್ಕೆ ಶೇ. 50ರಷ್ಟು ರಿಯಾಯಾತಿ ನೀಡಿದೆ ಕಾರಣವಾಯಿತು. ಅಲ್ಲದೇ ಜಿಲ್ಲೆಯ ಎಲ್ಲಾ ತಾಲೂಕು ವಕೀಲರ ಸಹಕಾರದಿಂದ ಹೆಚ್ಚಿನ ಪ್ರಕರಣ ಇತ್ಯರ್ಥಗೊಳಿಸಲಾಗಿದೆ ಎಂದು ತಿಳಿಸಿದರು. ಮೆಗಾ ಲೋಕ್ ಅದಾಲತ್‌ನಲ್ಲಿ ಬಾಕಿ ಇರುವ ಬ್ಯಾಂಕ್ ವಸೂಲಾತಿ ಪ್ರಕರಣಗಳು, ಮೋಟಾರ್ ವಾಹನ ಅಪಘಾತ ಪ್ರಕರಣಗಳು, ಕೌಟುಂಬಿಕ ಪ್ರಕರಣಗಳು, ಕಾರ್ಮಿಕ ಸಂಬಂಧಿತ ವಿವಾದಗಳು, ಚೆಕ್ ಬೌನ್ಸ್ ಪ್ರಕರಣಗಳು, ಹಣ ವಸೂಲಾತಿ ಪ್ರಕರಣಗಳು, ಎಂಎಂಡಿಆರ್ ಕಾಯ್ದೆ ಪ್ರಕರಣಗಳು, ಜನನ ನೋಂದಣಿ ಪ್ರಕರಣಗಳು, ಪಾಲು ವಿಭಾಗ, ದಾವೆ ಹಾಗೂ ಸಿವಿಲ್ ಪ್ರಕರಣಗಳು, ಕಂದಾಯ ಪ್ರಕರಣಗಳು ಇನ್ನಿತರ ಪ್ರಕರಣಗಳನ್ನು ಇತ್ಯರ್ಥಪಡಿಸಲಾಯಿತು ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶ್ರೀಧರ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಇಂದುಶೇಖರ್ ಇದ್ದರು.

ಒಂದನೇ ಪುಟದಿಂದ

ಪೂರ್ವಸಿದ್ಧತಾ ಪರೀಕ್ಷೆಗೂ ಶುಲ್ಕ

ವೇಳಾಪಟ್ಟಿಯ ಜೊತೆ ಸುತ್ತೋಲೆಯಲ್ಲಿ ಪರೀಕ್ಷೆ ನಡೆಸಲು ವಿದ್ಯಾರ್ಥಿಗಳಿಂದ ಶುಲ್ಕವನ್ನು ಸಂಗ್ರಹಿಸಿ ಮುಖ್ಯೋಪಾಧ್ಯಾಯರ ಮೂಲಕ ಐಸಿಐಸಿಐ ಬ್ಯಾಂಕ್ ಖಾತೆಗೆ ಪಡೆಯುವಂತೆ ಸೂಚಿಸಿದೆ. ಪ್ರತಿ ವಿದ್ಯಾರ್ಥಿಯಿಂದ ಪ್ರಶ್ನೆ ಪತ್ರಿಕೆಗಾಗಿ 60 ರೂಪಾಯಿ ಶುಲ್ಕವನ್ನು ಈಗಾಗಲೇ ಸಂಗ್ರಹಿಸಲಾಗುತ್ತಿದೆ. ಉತ್ತರ ಪತ್ರಿಕೆಗೂ ವಿದ್ಯಾರ್ಥಿಗಳು ಹಣ ಖರ್ಚು ಮಾಡಬೇಕಿದೆ. ವಿದ್ಯಾರ್ಥಿಗಳಿಂದ ಶುಲ್ಕ ಸಂಗ್ರಹಿಸುವ ಸರ್ಕಾರ ಕೇವಲ ಪ್ರಶ್ನೆ ಪತ್ರಿಕೆ ಮಾತ್ರ ನೀಡುತ್ತದೆ. ಇದೇ ಮೊದಲ ಬಾರಿಗೆ ಈ ನಿಯಮ ಜಾರಿಗೆ ತಂದಿದ್ದು, ಸರ್ಕಾರಿ, ಅನುದಾನಿತ, ಖಾಸಗಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ವಸೂಲಿ ನಡೆಸಿದೆ.

ಪೂರ್ವ ಸಿದ್ಧತಾ ಪರೀಕ್ಷೆಗೆ ಈ ಹಿಂದೆ ಶುಲ್ಕವನ್ನು ಸರ್ಕಾರ ಪಡೆದಿಲ್ಲ. ಈಗ ಶುಲ್ಕ ಪಡೆಯುತ್ತಿರುವುದು ಸರಿಯಲ್ಲ ಎಂದು ಪೋಷಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಶಿಕ್ಷಣ ಇಲಾಖೆ ಸರ್ಕಾರಿ ಶಾಲೆಯಲ್ಲಿ ಓದುವ ಬಡ ಮಕ್ಕಳಿಂದಲೂ ಪರೀಕ್ಷಾ ಶುಲ್ಕ ಪಡೆಯುತ್ತಿರುವುದನ್ನು ನೋಡಿದರೆ, ಆರ್ಥಿಕ ಸಂಕಷ್ಟ ಎದುರಿಸುತ್ತಿದೆಯಾ ಎಂಬ ಅನುಮಾನ ಮೂಡಿದೆ. ಎಸ್‌ಎಸ್‌ಎಲ್‌ಸಿ ಪೂರ್ವ ಸಿದ್ಧತಾ ಪರೀಕ್ಷೆಯನ್ನು ಕಠಿಣ ರೀತಿಯಲ್ಲಿ ನಡೆಸಲು ಮುಂದಾಗಿರುವ ಸರ್ಕಾರ, ತನ್ನ ಸಿದ್ಧತೆಗಾಗಿ ಬಡ ವಿದ್ಯಾರ್ಥಿಗಳಿಂದ ಶುಲ್ಕ ವಸೂಲಿ ಮಾಡುತ್ತಿರುವುದು ವಿಪರ್ಯಾಸ. ಮಕ್ಕಳಿಗೆ ಸರಿ ಅನ್ನೋದು ಪೋಷಕರ ಪ್ರಶ್ನೆ. ವಾರ್ಷಿಕ ಶುಲ್ಕದಲ್ಲಿ ಪರೀಕ್ಷಾ ಶುಲ್ಕ ಕಟ್ಟಿದವರು ಸಹ ಪುನಃ ಶುಲ್ಕ ಕಟ್ಟಬೇಕಾಗಿದೆ. ಸರ್ಕಾರಿ ಶಾಲೆಗಳಲ್ಲೂ ಸಹ ಶಿಕ್ಷಣವನ್ನು ವ್ಯಾಪಾರೀಕರಣ ಮಾಡಲು ಶಿಕ್ಷಣ ಇಲಾಖೆ ಹೊರಟಂತಿದೆ ಎಂದು ಪೋಷಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಮೊದಲು ಎಸ್‌ಎಸ್‌ಎಲ್‌ಸಿ ಪೂರ್ವ ಸಿದ್ಧತಾ ಪರೀಕ್ಷೆಗೆ ಶುಲ್ಕ ಪಡೆಯದ ಶಿಕ್ಷಣ ಇಲಾಖೆ ಈ ಬಾರಿ ಶುಲ್ಕ ಪಡೆಯುತ್ತಿರುವುದು ಭಾರೀ ಆಕ್ರೋಶಕ್ಕೆ ಕಾರಣವಾಗಿದೆ. ಉತ್ತರ ಪತ್ರಿಕೆಯ ಖರ್ಚನ್ನೂ ವಿದ್ಯಾರ್ಥಿಗಳೇ ಭರಿಸಬೇಕಾಗಿರುವುದರಿಂದ ಶಿಕ್ಷಣ ಇಲಾಖೆ ನಡೆ ಬಗ್ಗೆ ವಿದ್ಯಾರ್ಥಿಗಳ ಪೋಷಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.ಕೂಡಲೇ ಶುಲ್ಕ ಪಡೆಯುವುದನ್ನು ನಿಲ್ಲಿಸಬೇಕು. ಪಡೆದಿರುವ ಶುಲ್ಕವನ್ನು ಮರಳಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ವಿದ್ಯುತ್ ದರ ಹೆಚ್ಚಳ ಸಾಧ್ಯತೆ

ಮಾರ್ಚ್ 1ರವರೆಗೆ ಸಾರ್ವಜನಿಕ ಅದಾಲತ್ ನಡೆಸಲಿದ್ದು, ಮತ್ತೆ ವಿದ್ಯುತ್ ದರ ಏರಿಕೆಯಾಗುವ ಸಾಧ್ಯತೆ ಇದೆ. ಈ ನಿರ್ಣಯಕ್ಕೆ ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘ ತೀವ್ರ ವಿರೋಧ ವ್ಯಕ್ತಪಡಿಸಿದ್ದು, ಇದೊಂದು ಅವೈಜ್ಞಾನಿಕ ನಿರ್ಣಯ. ಗ್ರಾಹಕರ ಮೇಲೆ ಹೊರೆ ಹಾಕೋದು ಸಮಂಜಸವಲ್ಲ ಅಂತ ಕಿಡಿಕಾರಿದ್ದಾರೆ.

ಎಸ್ಕಾಂಗಳು ಪ್ರತಿ ಯುನಿಟ್‌ಗೆ ಒಂದೂವರೆ ರೂಪಾಯಿಯಿಂದ 2 ರೂ. ತನಕ ವಿದ್ಯುತ್ ದರ ಏರಿಕೆ ಕೋರಿ ಈಗಾಗಲೇ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಿವೆ. ನಾಳೆಯಿಂದ ಮಾರ್ಚ್ 1ರವರೆಗೆ ಸಾರ್ವಜನಿಕ ಅದಾಲತ್ ನಡೆಸಲಿದ್ದು, ಆಕ್ಷೇಪಣೆ, ಸಲಹೆ ಸೂಚನೆಗಳನ್ನು ಪರಿಗಣಿಸಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಮಂಡಳಿ ತನ್ನ ನಿರ್ಧಾರ ಪ್ರಕಟಿಸಲಿದೆ. ಈಗಾಗಲೇ ಡಿಜಿಟಲ್ ಮೀಟರ್‌ಗಳ ಅಳವಡಿಕೆಯಿಂದಲೂ ವಿದ್ಯುತ್ ಬಿಲ್ ದುಪ್ಪಟ್ಟು ಬರ್ತಿದ್ದು, ಇದಕ್ಕೂ ಸಾರ್ವಜನಿಕರಿಂದಲೂ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಕಳೆದ ವರ್ಷ ರಾಜ್ಯದಲ್ಲಿ ಎರಡು ಬಾರಿ ವಿದ್ಯುತ್ ದರ ಏರಿಕೆ ಮಾಡಲಾಗಿತ್ತು. ಕಳೆದ ಏಪ್ರಿಲ್‌ನಲ್ಲಿ ಪ್ರತಿ ಯುನಿಟ್‌ಗೆ 35 ಪೈಸೆ, ಸೆಪ್ಟೆಂಬರ್‌ನಲ್ಲಿ ಇಂಧನ ಹೊಂದಾಣಿಕೆ ಹಿನ್ನಲೆ ಪ್ರತಿ ಯುನಿಟ್‌ಗೆ 24 ಪೈಸೆಯಿಂದ 43 ಪೈಸೆವರೆಗೆ ಏರಿಕೆ ಮಾಡಲಾಗಿತ್ತು ಡಿಜಿಟಲ್ ಮೀಟರ್‌ಗಳ ಅಳವಡಿಕೆಯಿಂದಲೂ ವಿದ್ಯುತ್ ದರ ಹೆಚ್ಚೆಚ್ಚು ಬರ್ತಿತ್ತು ಇದ್ರಿಂದ ಗ್ರಾಹಕರು ಕೂಡ ಆಕ್ರೋಶಗೊಂಡಿದ್ದು, ಯಾವುದೇ ಕಾರಣಕ್ಕೂ ದರ ಹೆಚ್ಚಳಕ್ಕೆ ಸರ್ಕಾರ ಮುಂದಾಗಬಾರದು ಅಂತ ಅಸಮಾಧಾನ ವ್ಯಕ್ತಪಡಿಸ್ತಿದ್ದಾರೆ.

ಹುಲಿ ದಾಳಿ: ಬಾಲಕ ಬಲಿ

ಬಾಲಕನ ಮೃತದೇಹ ಪತ್ತೆಯಾಗಿದೆ. ಶವವನ್ನು ವಶಪಡಿಸಿಕೊಂಡ ಅಧಿಕಾರಿಗಳು ಕುಟ್ಟ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಿದ್ದಾರೆ.

ಹುಲಿಗೆ ಕಂಡಲ್ಲಿ ಗುಂಡು: ಬಾಲಕನ ಬಲಿ ಪಡೆದ ಹುಲಿಗೆ ಕಂಡಲ್ಲಿ ಗುಂಡು ಹಾರಿಸಿ ಹತ್ಯೆ ಮಾಡಲು ಸರ್ಕಾರವನ್ನು ಮನವಿ ಮಾಡುವುದಾಗಿ ವಿರಾಜಪೇಟೆ ಶಾಸಕ ಕೆ.ಜಿ.ಬೋಪಯ್ಯ ತಿಳಿಸಿದ್ದಾರೆ. ಬಾಲಕ ಮೃತಪಟ್ಟ ವಿಷಯ ತಿಳಿಯುತ್ತಿದ್ದಂತೆಯೇ ತಾವು ಹಿರಿಯ ಅರಣ್ಯಾಧಿಕಾರಿಗಳ ಜೊತೆ ಮಾತುಕತೆ ನಡೆಸಿದ್ದು, ಬಾಲಕನ ಕುಟುಂಬಸ್ಥರಿಗೆ ಕೂಡಲೇ 2.5 ಲಕ್ಷ ರೂ. ಪರಿಹಾರ ನೀಡುವಂತೆಯೂ ಒಟ್ಟು 15 ಲಕ್ಷ ರೂ. ಪರಿಹಾರದ ಪೈಕಿ ಉಳಿದ ಹಣವನ್ನು ಶೀಘ್ರದಲ್ಲೇ ಕೊಡಿಸುವುದಾಗಿಯೂ ತಿಳಿಸಿದ್ದಾರೆ. ಹುಲಿ ಸೆರೆ ಕಾರ್ಯಾಚರಣೆ ತಕ್ಷಣದಿಂದಲೇ ಆರಂಭಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿರುವುದಾಗಿ ತಿಳಿಸಿದ ಅವರು, ತಾವು ನಾಳೆ (ಸೋಮವಾರ) ಮುಖ್ಯಮಂತ್ರಿ ಬೊಮ್ಮಾಯಿ ಅವರನ್ನು ಭೇಟಿ ಮಾಡಿ, ಬಾಲಕನ ಕೊಂದ ಹುಲಿಗೆ ಕಂಡಲ್ಲಿ ಗುಂಡು ಹಾರಿಸಿ ಹತ್ಯೆ ಮಾಡಲು ಆದೇಶ ನೀಡುವಂತೆ ಮನವಿ ಮಾಡುವುದಾಗಿ ತಿಳಿಸಿದ್ದಾರೆ.

ಚುನಾವಣೆಗೆ ಆಯೋಗ ಸಿದ್ಧತೆ

ಕಳೆದ ಚುನಾವಣೆ ವೇಳೆ ಸಂಭವಿಸಿದ್ದ ಘಟನೆಗಳನ್ನು ಸಭೆಯಲ್ಲಿ ಮೆಲುಕು ಹಾಕಲಾಯಿತು. ಮುಂಬರುವ ಚುನಾವಣೆ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಭದ್ರತೆ ಬಿಗಿಗೊಳಿಸಲು ಏನೆಲ್ಲಾ ಕ್ರಮ ಕೈಗೊಳ್ಳಬಹುದೆಂದು ಅಧಿಕಾರಿಗಳು ಮಾಹಿತಿ ಪಡೆದುಕೊಂಡರು ಎಂದರು. ಪ್ರತಿ ಠಾಣೆ ವ್ಯಾಪ್ತಿಯಲ್ಲಿ ಸೂಕ್ಷ್ಮ ಹಾಗೂ ಅತಿ ಸೂಕ್ಷ್ಮ ಮತಗಟ್ಟೆಗಳ ಪಟ್ಟಿಯನ್ನು ಸಿದ್ಧಪಡಿಸುವಂತೆಯೂ ಆಯೋಗದ ಅಧಿಕಾರಿಗಳು ಸೂಚಿಸಿದರು. ಸುಮಾರು 4 ತಾಸು ನಡೆದ ಸಭೆಯಲ್ಲಿ ಚುನಾವಣೆಗೆ ಸಂಬಂಧಪಟ್ಟ ಹಲವು ಸಂಗತಿಗಳು ಚರ್ಚೆಗೆ ಬಂದವು ಎಂದು ಪೊಲೀಸ್ ಅಧಿಕಾರಿ ಹೇಳಿದರು.

ರೇಬಿಸ್ ಮುಕ್ತ ಮಾಡಲು ಚಿಂತನೆ

ಹಾಕುವ ಗುರಿ ಹೊಂದಲಾಗಿದೆ. ರೇಬಿಸ್ ಮುಕ್ತ ಮೈಸೂರು ಮಾಡಲು ನಿರ್ಧರಿಸಿರುವ ಹಿನ್ನೆಲೆಯಲ್ಲಿ ಪ್ರಾಥಮಿಕ ಹಂತದಲ್ಲಿ ಲಕ್ಷ ಡೋಸ್ ಲಸಿಕೆಗಳ ಅಗತ್ಯವಿರುವುದಾಗಿ ಪಟ್ಟಿ ಮಾಡಲಾಗಿದೆ. ಫೆಬ್ರವರಿ ಅಂತ್ಯದೊಳಗೆ ಪೂರ್ಣ ಪ್ರಮಾಣದಲ್ಲಿ ಸಿದ್ಧತೆ ಮಾಡಿಕೊಂಡು, ಮಾರ್ಚ್‌ನಲ್ಲಿ ಲಸಿಕೆ ಹಾಕುವ ಅಭಿಯಾನ ಆರಂಭಿಸಲು ನಿರ್ಧರಿಸಲಾಗಿದೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಪಶುಸಂಗೋಪನಾ ಇಲಾಖೆ ಉಪನಿರ್ದೇಶಕ ಡಾ.ಬಿ.ಎನ್.ಷಡಕ್ಷರಮೂರ್ತಿ ಮಾತನಾಡಿ, ಬೀದಿ ನಾಯಿಗಳು, ಸಾಕು ನಾಯಿಗಳು ಹಾಗೂ ನಾಯಿ ಕಚ್ಚಿದ ಪ್ರಾಣಿಗಳಿಗೂ ಲಸಿಕೆ ಹಾಕಲಾಗುವುದು. ಕಳೆದ ವರ್ಷ ಇಲಾಖೆ ವತಿಯಿಂದ ಲಸಿಕೆ ಅಭಿಯಾನ ನಡೆಸಲಾಗಿತ್ತು. ವಿವಿಧೆಡೆ ಅಭಿಯಾನ ನಡೆಸಿ 12,500 ಡೋಸ್‌ಗಳನ್ನು ನೀಡಲಾಗಿತ್ತು. ಪ್ರಸ್ತುತ 3 ಸಾವಿರ ಡೋಸ್ ಲಸಿಕೆ ದಾಸ್ತಾನು ಇಟ್ಟುಕೊಳ್ಳಲಾಗಿದೆ. ಉಚಿತ ವ್ಯಾಕ್ಸಿನೇಷನ್ ಡ್ರೈವ್ ನಡೆಸಲು ಉದ್ದೇಶಿಸಲಾಗಿದೆ. ಈಗಾಗಲೇ ಅಭಿಯಾನದ ಸಿದ್ಧತೆ ಆರಂಭಿಸಿದ್ದೇವೆ. ಅಭಿಯಾನದ ಯಶಸ್ವಿಗಾಗಿ ಲಯನ್ಸ್ ಕ್ಲಬ್, ರೋಟರಿ ಕ್ಲಬ್ ಮತ್ತು ಇತರ ಸ್ವಯಂಸೇವಾ ಸಂಸ್ಥೆಗಳು ಮತ್ತು ಶಿಕ್ಷಣ ಸಂಸ್ಥೆಗಳ ಸಹಕಾರ ಪಡೆಯಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ಎಲ್ಲಾ ಸರ್ಕಾರಿ ಪಶುವೈದ್ಯಕೀಯ ಆಸ್ಪತ್ರೆಗಳಲ್ಲಿ ಉಚಿತ ರೇಬಿಸ್ ಲಸಿಕೆ ಡೋಸ್ ನೀಡಲಾಗುತ್ತಿದೆ. ಪ್ರತಿ ತಿಂಗಳು ಎರಡನೇ ಮತ್ತು ನಾಲ್ಕನೇ ಶನಿವಾರಗಳಲ್ಲಿ ಲಸಿಕೆ ಶಿಬಿರ ನಡೆಸಲು ಚಿಂತನೆ ನಡೆಸಲಾಗಿದೆ. ಮೈಸೂರು ಮಹಾನಗರ ಪಾಲಿಕೆ(ಎಂಸಿಸಿ), ಶ್ವಾನ ಆರೈಕೆ ಕೇಂದ್ರ, ಪ್ರಾಣಿ ರಕ್ಷಕರ ನೆರವಿನೊಂದಿಗೆ ರೇಬಿಸ್ ಮುಕ್ತ ಮೈಸೂರು ಮಾಡಲು ಕಾರ್ಯಕ್ರಮ ರೂಪಿಸಲಾಗಿದೆ ಎಂದು ತಿಳಿಸಿದರು. ನಾಯಿ ಕಚ್ಚಿದ ಕೂಡಲೆ ಚಿಕಿತ್ಸೆ ಪಡೆದುಕೊಳ್ಳುವುದು ಅಗತ್ಯ. ಆಕಸ್ಮಿಕವಾಗಿ ನಾಯಿ ದಾಳಿಗೆ ಒಳಗಾದಾಗ ಚಿಕಿತ್ಸೆ ಪಡೆದುಕೊಳ್ಳಲು ಹಲವರಿಗೆ ತಿಳಿದಿಲ್ಲ. ಇತರ ಪ್ರಾಣಿಗಳು ಹಾಗೂ ಮನುಷ್ಯರಿಗೆ ರೇಬಿಸ್ ಪೀಡಿತ ನಾಯಿಗಳು ಕಚ್ಚಿದರೆ, ರೇಬಿಸ್ ವೈರಸ್ ದೇಹವನ್ನು ಪ್ರವೇಶಿಸುತ್ತದೆ. ಬಳಿಕ ಜನರನ್ನು ರೇಬಿಸ್ ಕಾಡಲಾರಂಭಿಸುತ್ತದೆ. ಸೋಂಕಿಗೆ ತುತ್ತಾದ ಪ್ರಾಣಿಯಿಂದ ಚೆಲ್ಲುವ ಜೊಲ್ಲಿನಿಂದ ರೇಬಿಸ್ ವೈರಸ್ ಇತರ ಪ್ರಾಣಿಗಳಿಗೆ ಹರಡುವ ಸಾಧ್ಯತೆ ಇದೆ. ರೇಬಿಸ್ ಅನ್ನು ತೊಡೆದುಹಾಕಲು ಬೀದಿ ನಾಯಿಗಳಿಗೆ ಲಸಿಕೆ ಹಾಕಲಾಗುತ್ತದೆ ಎಂದರು.

ಬಾಲಕರು ಕಾವೇರಿ ಪಾಲು

ಆತಂಕಗೊಂಡ ಮನೆಯವರು ಅನುಮಾನಗೊಂಡು ಕಾವೇರಿ ನದಿ ತಟದತ್ತ ತೆರಳಿದಾಗ ಒಬ್ಬನ ಶವ ನೀರಿನಲ್ಲಿ ತೇಲುತ್ತಿದ್ದನ್ನು ಕಂಡು ಗೋಳಾಡಲಾರಂಭಿಸಿದರು. ಆದರೆ ಮತ್ತೊಬ್ಬ ಬಾಲಕನ ಶವ ಪತ್ತೆಯಾಗದೆ ಈಜುಗಾರರು ನೀರಿಗಿಳಿದು ಹುಡುಕಾಟ ನಡೆಸಲಾರಂಭಿಸಿದರು. ವಿಷಯ ತಿಳಿದ ಪೊಲೀಸರು ಮತ್ತು ಅಗ್ನಿಶಾಮಕ ದಳದವರು ಸ್ಥಳಕ್ಕೆ ಆಗಮಿಸುವಷ್ಟರಲ್ಲಿ ಈಜುಗಾರರು ನೀರಿನ ತಳದಲ್ಲಿ ಕಚ್ಚಿಕೊಂಡಿದ್ದ ಮತ್ತೊಂದು ಬಾಲಕನ ಶವವನ್ನು ಹೊರತೆಗೆದರು. ಪೋಷಕರ ಗೋಳಾಟ ಮುಗಿಲು ಮುಟ್ಟಿತ್ತು. ಪೃಥ್ವಿ ಸಮೀಪದ ಸರ್ಕಾರಿ ಶಾಲೆಯಲ್ಲಿ ಎರಡನೇ ತರಗತಿ ವ್ಯಾಸಂಗ ಮಾಡುತ್ತಿದ್ದರೆ, ಪ್ರಜ್ವಲ್ ಅಂಗನವಾಡಿಗೆ ಹೋಗುತ್ತಿದ್ದ. ಕುಶಾಲನಗರ ಗ್ರಾಮಾಂತರ ಪೊಲೀಸರು ಬಾಲಕರಿಬ್ಬರ ಮೃತದೇಹಗಳನ್ನು ಕುಶಾಲನಗರ ಸರ್ಕಾರಿ ಆಸ್ಪತ್ರೆಗೆ ಸ್ಥಳಾಂತರಿಸಿ, ಮರಣೋತ್ತರ ಪರೀಕ್ಷೆ ನಂತರ ವಾರಸುದಾರರಿಗೆ ಒಪ್ಪಿಸಿದರು. ಕುಶಾಲನಗರ ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಶಾಸಕರ ಭೇಟಿ: ವಿಷಯ ತಿಳಿದ ಶಾಸಕ ಅಪ್ಪಚ್ಚುರಂಜನ್ ಕೂಡ್ಲೂರು ಗ್ರಾಮಕ್ಕೆ ತೆರಳಿ ಕುಟುಂಬಸ್ಥರನ್ನು ಭೇಟಿ ಮಾಡಿ ಸಾಂತ್ವನ ಹೇಳಿದರು.

ನಾಗರಹೊಳೆಯಲ್ಲಿ 290 ಪಕ್ಷಿ ಪ್ರಭೇದ ಪತ್ತೆ



118 ಮಂದಿ 8 ವಲಯಗಳಲ್ಲಿ ನಡೆಸಿದ್ದ ಸಮೀಕ್ಷೆ







ಮೈಸೂರು, ಫೆ.12(ಎಂಟಿವೈ)– ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ನಡೆದ ಪಕ್ಷಿ ಸಮೀಕ್ಷೆಯಲ್ಲಿ ಕೆಂದಲೆ ರಣಹದ್ದು, ಬಿಳಿ ಬೆನ್ನಿನ ರಣಹದ್ದು, ಕರಿ ಗಿಡುಗ ಸೇರಿದಂತೆ 290 ಬಗೆಯ ಪಕ್ಷಿ ಪ್ರಭೇದಗಳು ಪತ್ತೆಯಾಗಿದ್ದು, ದಾಖಲೀಕರಿಸಲಾಗಿದೆ.

ಪ್ರಸಕ್ತ ಸಾಲಿನ ಪಕ್ಷಿ ಸಮೀಕ್ಷೆಯಲ್ಲಿ 8 ರಾಜ್ಯಗಳಿಂದ ಆಗಮಿಸಿದ್ದ ಪಕ್ಷಿ ತಜ್ಞರು, ಪಕ್ಷಿ ವೀಕ್ಷಕರು, ವಿದ್ಯಾರ್ಥಿಗಳು ಹಾಗೂ ಸ್ವಯಂ ಸೇವಕರೂ ಇದ್ದು 118 ಮಂದಿಯ ತಂಡ 8 ವಲಯಗಳಲ್ಲಿ ಪಕ್ಷಿ ಸಮೀಕ್ಷೆ ನಡೆಸಿ ಅಪರೂಪದ ಪ್ರಭೇದ ಸೇರಿದಂತೆ 290 ಬಗೆಯ ಪಕ್ಷಿಗಳನ್ನು ಗುರುತಿಸಿ, ಛಾಯಾಚಿತ್ರ ತೆಗೆದು ದಾಖಲೀಕರಿಸಿದ್ದಾರೆ. ಫೆ.9ರಿಂದ 12ರವರೆಗೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಪಕ್ಷಿ ಸಮೀಕ್ಷೆ ಹಮ್ಮಿಕೊಳ್ಳಲಾಗಿತ್ತು ನೋಂದಣಿ, ತರಬೇತಿ ನೀಡಿದ ಬಳಿಕ ಫೆ.10 ಮತ್ತು 11ರಂದು ಮುಂಜಾನೆಯಿಂದಲೇ ನಿಗದಿತ ವಲಯದಲ್ಲಿ ಪಕ್ಷಿ ವೀಕ್ಷಿಸಿ ಮಾಹಿತಿ ಕಲೆ ಹಾಕಿದ್ದಾರೆ.

ಫೆ.10ರಂದು ಎಲ್ಲಾ ಗಸ್ತುಗಳಲ್ಲಿ ಪಕ್ಷಿ ವೀಕ್ಷಣೆಗೆ ತೆರಳಿದ್ದ ತಂಡದ ಸದಸ್ಯರು ಮಾಹಿತಿ ಸಂಗ್ರಹಿಸಿ 'ಇ–ಬರ್ಡ್' ಆ್ಯಪ್‌ನಲ್ಲಿ ಹಾಗೂ ಕೈಪಿಡಿಯಲ್ಲಿ ನಮೂದಿಸಿ ಅವರಿಗೆ ವ್ಯವಸ್ಥೆ ಮಾಡಲಾಗಿದ್ದ ಕಳ್ಳ ಬೇಟೆ ತಡೆ ಶಿಬಿರದಲ್ಲಿ ವಾಸ್ತವ್ಯ ಹೂಡಿದ್ದರು.

ಫೆ.11ರಂದು ಬೆಳಗ್ಗೆಯಿಂದಲೇ ವಿವಿಧ ಗಸ್ತಿನಲ್ಲಿ 2 ಕಿ.ಮೀ. ಟ್ರಾಂಜಾಕ್ಟ್ ಲೈನ್‌ನಲ್ಲಿ 400 ಮೀ. ಅಂತರಕ್ಕೆ ಒಂದೊಂದು ಪರಿಶೀಲನಾ ಪಟ್ಟಿಯನ್ನು ಇ–ಬರ್ಡ್ ಆ್ಯಪ್ ಮತ್ತು ಕೈಪಿಡಿಯಲ್ಲಿ ವಿವರ ದಾಖಲಿಸಿದ್ದಾರೆ. ಈ ಎರಡೂ ದಿನಗಳಲ್ಲಿ ಪಕ್ಷಿ ಸಮೀಕ್ಷೆಗೆ ತೆರಳಿದ್ದ ಸದಸ್ಯರು 900 ಕಿ.ಮೀ.ಗಿಂತಲೂ ಹೆಚ್ಚು ದೂರದ ಗಸ್ತನ್ನು ಕ್ರಮಿಸಿ ಪಕ್ಷಿ ಸಮೀಕ್ಷೆ ನಡೆಸಿದ್ದಾರೆ.

ಈ ಸಮೀಕ್ಷೆಯಲ್ಲಿ ವೀರನಹೊಸಹಳ್ಳಿ, ಹುಣಸೂರು, ಆನೆಚೌಕೂರು, ಕಲ್ಲಹಳ್ಳ, ನಾಗರಹೊಳೆ, ಮೇಟಿಕುಪ್ಪೆ, ಡಿ.ಬಿ.ಕುಪ್ಪೆ, ಅಂತರಸಂತೆ ವಲಯದಲ್ಲಿ ಸ್ವಯಂ ಸೇವಕರು ಹಾಗೂ ಪಕ್ಷಿ ತಜ್ಞರು ಸಮೀಕ್ಷೆ ನಡೆಸಿದ್ದು, ಅದರಲ್ಲಿ ಪಟ್ಟೆ ತಲೆ ಹೆಬ್ಬಾತು, ಮಲಬಾರ್ ವುಡ್ ಶ್ರೈಕ್, ಕೆಂದಲೆ ರಣ ಹದ್ದು, ಬಿಳಿ ಬೆನ್ನಿನ ರಣ ಹದ್ದು, ಬ್ಲಾಕ್ ಬಾಜಾ, ಕರಿಗಿಡುಗ, ಅಲ್ಟ್ರಾಮರೇನ್ ಫ್ಲೈ ಕ್ಯಾಚರ್, ನಾಬ್ ಬಿಲ್ಡ್ ಡಕ್, ಬಾರ್ ಹೆಡೆಡ್ ಗೂಸ್ ಸೇರಿದಂತೆ ಇನ್ನಿತರ ಪಕ್ಷಿಗಳು ಕಂಡು ಬಂದಿವೆ.

ಹುಣಸೂರು ತಾಲೂಕಿನ ವೀರನಹೊಸಹಳ್ಳಿ ಗೇಟ್ ಬಳಿ ಭಾನುವಾರ ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಜಂಗಲ್ ಲಾಡ್ಜ್ ಮತ್ತು ರೆಸಾರ್ಟ್ಸ್ ವ್ಯವಸ್ಥಾಪಕ ನಿರ್ದೇಶಕ, ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮನೋಜ್ ಕುಮಾರ್ ಅವರು ಪಾಲ್ಗೊಂಡು ಪಕ್ಷಿ ಸಮೀಕ್ಷೆಯಲ್ಲಿ ಭಾಗವಹಿಸಿದಂತಹ 118 ಸ್ವಯಂ ಸೇವಕರಿಗೆ ಹಾಗೂ ತಜ್ಞರ ಸೇವೆಗೆ ಪ್ರಶಂಸೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ನಿರ್ದೇಶಕ ಹರ್ಷ ಕುಮಾರ್, ಹುಣಸೂರು ಉಪ ವಿಭಾಗದ ಎಸಿಎಫ್ ಸೇರಿದಂತೆ ಇನ್ನಿತರು ಪಾಲ್ಗೊಂಡಿದ್ದರು.



ಸಾರ್ವಜನಿಕರಿಗೆ ಅರಿವು ಮೂಡಿದರೆ ಅರಣ್ಯ ಸಂರಕ್ಷಣೆ ಸಾಧ್ಯ

ಪಕ್ಷಿ ಸಮೀಕ್ಷೆಯ ಸಮಾರೋಪ ಸಮಾರಂಭದಲ್ಲಿ ಹಿರಿಯ ಐಎಫ್‌ಎಸ್ ಅಧಿಕಾರಿ ಮನೋಜ್ ಕುಮಾರ್ ಮಾತನಾಡಿ, ಸಾರ್ವಜನಿಕರಲ್ಲಿ ವನ್ಯಜೀವಿ, ಅರಣ್ಯ, ಪರಿಸರ ಸಂರಕ್ಷಣೆಯ ಬಗ್ಗೆ ಅರಿವು ಮೂಡಿದರೆ ತಾನಾಗಿಯೇ ವನ್ಯ ಸಂಪತ್ತಿನ ಸಂರಕ್ಷಣೆ ಸಾಧ್ಯವಾಗುತ್ತದೆ. ಈ ಹಿಂದೆ ದಾಂಡೇಲಿಯಲ್ಲಿ ಹಾರ್ನ್‌ಬಿಲ್ ಪಕ್ಷಿಗಳ ಸಂಖ್ಯೆ ಕ್ಷೀಣಿಸಿತ್ತು. ಅವುಗಳ ಸಂತತಿ ವೃದ್ಧಿಸಲು ಅರಣ್ಯ ಇಲಾಖೆ ವತಿಯಿಂದ ವಿವಿಧ ಜಾಗೃತಿ ಕಾರ್ಯಕ್ರಮ ನಡೆಸಲಾಗುತ್ತಿತ್ತು. ಈ ವೇಳೆ ಬೀದಿ ನಾಟಕದ ಮೂಲಕ ಹಾರ್ನ್ ಬಿಲ್ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾಗ, ನಾಟಕ ಪ್ರದರ್ಶನದ ನಡುವೆಯೇ ವ್ಯಕ್ತಿಯೊಬ್ಬ ಎದ್ದು ನಿಂತು ಗಂಡು ಹಾರ್ನ್ ಬಿಲ್ ಪಕ್ಷಿ ಸಾಯಿಸಿದರೆ ಇಡೀ ಹಾರ್ನ್ ಬಿಲ್‌ಗಳ ಸಂತತಿ ನಾಶವಾಗುತ್ತದೆ ಎಂಬ ಮಾಹಿತಿ ನಮಗೆ ತಿಳಿದಿರಲಿಲ್ಲ. ಇಂದಿನಿಂದ ಹಾರ್ನ್ ಬಿಲ್‌ಗಳ ಸಂತತಿ ಸಂರಕ್ಷಿಸಲು ಪಣ ತೊಡುತ್ತೇವೆ ಎಂದು ಎಲ್ಲರೆದುರು ಶಪಥ ಮಾಡುವ ಮೂಲಕ ಅಲ್ಲಿನ ಜನ ಇಲಾಖೆಗೆ ಸಹಕಾರ ನೀಡಿದರು.

ಇದರಿಂದ ಇಂದು ಹಾರ್ನ್‌ಬಿಲ್‌ಗಳ ಸಂಖ್ಯೆ ಹೆಚ್ಚಾಗಿದೆ. ದಾಂಡೇಲಿಯಿಂದ ಹಾವೇರಿವರೆಗೂ ಇಂದು ಹಾರ್ನ್ ಬಿಲ್‌ಗಳನ್ನು ನಾವು ನೋಡಬಹುದಾಗಿದೆ. ಅಲ್ಲದೇ ಹಾರ್ನ್ ಬಿಲ್ ಹಬ್ಬ ಆಚರಣೆ ಮಾಡಲಾಗುತ್ತಿದೆ. ಅದರ ಪ್ರತಿಮೆಯನ್ನೂ ಪ್ರತಿಷ್ಠಾಪಿಸಲಾಗಿದೆ. ಅದರ ಹೆಸರಿನಲ್ಲಿ ಸಭಾಂಗಣವನ್ನೂ ನಿರ್ಮಿಸಲಾಗಿದೆ. ಎಲ್ಲವೂ ಜನರಲ್ಲಿ ಮೂಡಿದ ಜಾಗೃತಿಯಿಂದಲೇ ಸಾಧ್ಯವಾಯಿತು ಎಂದು ಅಭಿಪ್ರಾಯಪಟ್ಟರು.

ಪಕ್ಷಿ ಸಮೀಕ್ಷೆಯಂತಹ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಭಾಗಿಯಾಗಬೇಕು. ಸಾರ್ವಜನಿಕರು ಪಾಲ್ಗೊಳ್ಳುವುದರಿಂದ ಇಲಾಖೆಯ ಕಾರ್ಯಕ್ಷಮತೆ ಬಗ್ಗೆ ಪ್ರಕೃತಿ ಸಂರಕ್ಷಣೆ ಬಗ್ಗೆ ಅರಿವು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಪಕ್ಷಿ ಸಮೀಕ್ಷೆಯಲ್ಲಿ ಸಂಗ್ರಹವಾಗುವ ಸರ್ವೆ ಡಾಟಾ ಯಾವ ರೀತಿ ಸಂರಕ್ಷಿಸಬಹುದು ಎಂಬುದು ತಿಳಿಯುತ್ತದೆ. ಕಳೆದ ಬಾರಿ ನಡೆಸಿದ ಸಮೀಕ್ಷೆಯಲ್ಲಿ ನಾಗರಹೊಳೆಯಲ್ಲಿ 270 ಪಕ್ಷಿಗಳು ದಾಖಲಾಗಿದ್ದವು. ಈ ಬಾರಿ 290 ಪಕ್ಷಿಗಳನ್ನು ಗುರುತಿಸಲಾಗಿದೆ. ಹೊಸದಾಗಿ ಪತ್ತೆಯಾದ 20 ಪಕ್ಷಿಗಳು ಯಾವುದು, ಅವುಗಳ ಮಾಹಿತಿ ಎಷ್ಟರ ಮಟ್ಟಿಗೆ ಕಲೆ ಹಾಕಲಾಗಿದೆ ಎಂಬ ಮಾಹಿತಿಯೂ ದಾಖಲೀಕರಣವಾಗಲು ಸಮೀಕ್ಷೆ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಚಾಮರಾಜ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಗೆಲ್ಲಿಸಬೇಕು

ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು



ಮೈಸೂರು, ಫೆ.12(ಎಂಕೆ)– ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಯಾರೇ ಆದರೂ ಅವರನ್ನು ಗೆಲ್ಲಿಸುವುದೇ ಎಲ್ಲರ ಗುರಿಯಾಗಬೇಕು ಎಂದು ನಗರ ಪಾಲಿಕೆ ಸದಸ್ಯ ಎಸ್.ಬಿ.ಎಂ.ಮಂಜು ಹೇಳಿದರು.

ಮೈಸೂರಿನ ಗೋಕುಲಂನ 1ನೇ ಹಂತದಲ್ಲಿರುವ ಸಾಂಸ್ಕೃತಿಕ ಭವನದಲ್ಲಿ ಆಯೋಜಿಸಿದ್ದ ಚುನಾವಣಾ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಚಾಮರಾಜ ವಿಧಾನ ಸಭಾ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿಯನ್ನು ಗೆಲ್ಲಿಸುವ ಮೂಲಕ ರಾಜ್ಯಮಟ್ಟದಲ್ಲಿ ಜೆಡಿಎಸ್‌ಗೆ ಬಲ ನೀಡಬೇಕು ಎಂದು ಮನವಿ ಮಾಡಿದರು.

ಕಳೆದ ಬಾರಿಯೇ ಮೇಯರ್ ಆಗುವ ಸಾಧ್ಯತೆ ಇತ್ತು. ಆದರೆ ಕಾರಣಾಂತರಗಳಿಂದ ಅವಕಾಶ ದೊರಕದಿದ್ದರೂ ಪಕ್ಷದ ನಾಯಕರು ಸೂಚಿಸಿದಂತೆ ನಿಷ್ಠೆಯಿಂದ ವಾರ್ಡ್ ಜನರ ಸೇವೆ ಮಾಡಿದ್ದೇನೆ. ಬೆಳಿಗ್ಗೆಯಿಂದ ಸಂಜೆಯವರೆಗೂ ವಾರ್ಡ್‌ನ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದೇನೆ. ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳಾಬೇಕಾಗಿದ್ದು, ಜೆಡಿಎಸ್‌ನ ಅಭ್ಯರ್ಥಿ ಗೆಲುವು ಅನಿವಾರ್ಯವಾಗಿದೆ ಎಂದರು. ಇದೇ ವೇಳೆ ಸಭೆಯಲ್ಲಿ ನೆರೆದಿದ್ದ ಸಾವಿರಾರು ಮಂದಿ ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ಚಾಮರಾಜ ಕ್ಷೇತ್ರದಿಂದ ಎಸ್‌ಬಿಎಂ ಮಂಜು ಅವರಿಗೆ ಟಿಕೆಟ್ ಸಿಗಬೇಕು ಎಂದು ಒತ್ತಾಯಿಸಿದರಲ್ಲದೆ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಗುಣಮಟ್ಟದ ಚಿಕಿತ್ಸೆ ದೊರೆಯುವಂತಾಗಬೇಕು ಎಂದು ಬೇಡಿಕೆ ಇಟ್ಟರು.

ಜೆಡಿಎಸ್‌ನ ರಾಜ್ಯ ಕಾರ್ಯದರ್ಶಿ ಹೇಮಾವತಿ, ಚಾಮರಾಜ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಪಿ.ಮಂಜು, ಪಾಲಿಕೆ ಸದಸ್ಯರಾದ ಪ್ರೇಮಾ ಶಂಕರೇಗೌಡ, ಕೆ.ವಿ.ಶ್ರೀಧರ್, ಮಾಜಿ ಸದಸ್ಯ ಶಿವಣ್ಣ, ಜೆಡಿಎಸ್‌ನ ನಗರ ಕಾರ್ಯದರ್ಶಿಗಳಾದ ಆರ್.ಮುದ್ದುರಾಜ್, ಪಿ.ಸತೀಶ್, ಹಿಂದುಳಿದ ವರ್ಗಗಳ ಜಿಲ್ಲಾಧ್ಯಕ್ಷ ಶ್ರೀನಿವಾಸ್, ನಗರಾಧ್ಯಕ್ಷ ಐಸ್‌ಕ್ರೀಂ ಕುಮಾರ್, ಮೇಟಗಳ್ಳಿ ರಮೇಶ್, ಲಕ್ಷ್ಮಿ, ಸಾವಿತ್ರಿ, ಜಯಮ್ಮ, ಸಿದ್ದೇಶ್ ಮತ್ತಿತರರಿದ್ದರು.



ಮೈಸೂರಿನ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ವಿಶ್ವ ಕ್ಯಾನ್ಸರ್ ದಿನಚರಣೆಯ ಅಂಗವಾಗಿ ಭಾನುವಾರ ನಡೆದ ಕಾರ್ಯಕ್ರಮವನ್ನು ಯೋಗ ಗುರು ಶ್ರೀಹರಿ ಉದ್ಘಾಟಿಸಿದರು. ಈ ವೇಳೆ ಕ್ಯಾನ್ಸರ್ ಗೆದ್ದ ಕ್ಯಾನ್ಸರ್ ವಾರಿಯರ್‌ಗಳನ್ನು ಸನ್ಮಾನಿಸಲಾಯಿತು. ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಕ್ಯಾನ್ಸರ್ ತಜ್ಞೆ ಡಾ.ವಿದ್ಯಾ, ಡಾ.ಸುಹಾಸ್, ಡಾ.ತರಂಗಿಣಿ ದುರುಗಪ್ಪ ಹಾಗೂ ಡಾ.ಮೇಖಳ ಶ್ವೇತಾದ್ರಿ ಉಪಸ್ಥಿತರಿದ್ದರು

ನಾಲ್ಕು ವರ್ಷದಲ್ಲಿ ಯುಜಿ, ಪಿಜಿ ಸೀಟುಗಳ ಸಮಬಲಕ್ಕೆ ಕ್ರಮ

ಕೇಂದ್ರ ಆರೋಗ್ಯ ಸಚಿವ ಮಾಂಡವಿಯಾ

ಗಾಂಧಿನಗರ(ಗುಜರಾತ್), ಫೆ.12– ಪದವಿ ಹಾಗೂ ಸ್ನಾತಕೋತ್ತರ ಪದವಿ ಮೆಡಿಕಲ್ ಸೀಟುಗಳನ್ನು ಮುಂದಿನ ನಾಲ್ಕು ವರ್ಷಗಳಲ್ಲಿ ಸಮಬಲಕ್ಕೆ ತರಲು



ಸರ್ಕಾರ ಕಾರ್ಯನಿರ್ವಹಿಸುತ್ತಿದೆ. ಇದರಿಂದ ಎಂಬಿಬಿಎಸ್ ಪದವೀಧರರು ಪಿಜಿ ಕೋರ್ಸ್‌ಗಳನ್ನು ಮುಂದುವರಿಸಲು ಸಾಧ್ಯ ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಶನಿವಾರ ಹೇಳಿದ್ದಾರೆ. ಇಲ್ಲಿ ನಡೆದ ಗ್ಲೋಬಲ್ ಅಸೋಸಿಯೇಷನ್ ಆಫ್ ಫಿಜಿಷಿಯನ್ಸ್ ಆಫ್ ಇಂಡಿಯನ್ ಆರಿಜಿನ್‌ನ (ಜಿಎಪಿಐಒ) 13ನೇ ವಾರ್ಷಿಕ ಸಮ್ಮೇಳನದಲ್ಲಿ ಮಾತನಾಡಿದ ಅವರು, ದೇಶದಲ್ಲಿ ಸಂಶೋಧನೆ ಮತ್ತು ಆಸ್ಪತ್ರೆಗಳನ್ನು ತೆರೆಯಲು ಅನಿವಾಸಿ ಭಾರತೀಯ ಆರೋಗ್ಯ ವೃತ್ತಿಪರರಿಗೆ ಆಹ್ವಾನ ನೀಡಿದರು. ಈ ವರ್ಷದ ಏಪ್ರಿಲ್–ಮೇ ನಲ್ಲಿ ನಡೆಯಲಿರುವ 'ಹೀಲ್ ಬೈ ಇಂಡಿಯಾ', 'ಹೀಲ್ ಇನ್ ಇಂಡಿಯಾ' ಎಕ್ಸ್‌ಪೋನಲ್ಲಿ 70ಕ್ಕೂ ಹೆಚ್ಚು ದೇಶಗಳು 'ಆಸ್ಪತ್ರೆಯಿಂದ ಆಸ್ಪತ್ರೆಗೆ', 'ದೇಶದಿಂದ ದೇಶಕ್ಕೆ' ಮತ್ತು 'ದೇಶದಿಂದ ಆಸ್ಪತ್ರೆಗೆ' ಎಂಬ ಒಪ್ಪಂದಕ್ಕೆ ಸಹಿ ಹಾಕಲಿವೆ ಎಂದರು. ಆಸ್ಪತ್ರೆಗಳನ್ನು ತೆರೆದಾಗ ನಮಗೆ ವೈದ್ಯರ ಅಗತ್ಯತೆ ಇರುತ್ತದೆ. 8 ವರ್ಷದ ಹಿಂದೆ ಭಾರತದಲ್ಲಿ 51,000 ಎಂಬಿಬಿಎಸ್ ಸೀಟುಗಳಿದ್ದವು. ಆದರೆ ಈಗ 1,00,226ಕ್ಕೆ ಏರಿಕೆಯಾಗಿದೆ. ಸ್ನಾತಕೋತ್ತರ ಸೀಟುಗಳು 34,000 ದಿಂದ 64,000ಕ್ಕೆ ಏರಿಕೆ ಆಗಿವೆ ಎಂದರು.

ಎಂಬಿಬಿಎಸ್ ಯುಜಿ ಮತ್ತು ಪಿಜಿ ಸೀಟುಗಳನ್ನು ಸಮಬಲಕ್ಕೆ ತರುವ ಗುರಿ ಹೊಂದಿದ್ದೇವೆ. ಎಲ್ಲ ವೈದ್ಯರು ಅತ್ಯುತ್ತಮ ಆರೋಗ್ಯ ಶಿಕ್ಷಣ ಪಡೆಯಬೇಕು. 'ಹೀಲ್ ಇನ್ ಇಂಡಿಯಾ' ಅಡಿಯಲ್ಲಿ, ಜಗತ್ತನ್ನು ಭಾರತಕ್ಕೆ ಆಹ್ವಾನಿಸುವುದು ಮತ್ತು ಕೈಗೆಟುಕುವ ಮತ್ತು ಗುಣಮಟ್ಟದ ಆರೋಗ್ಯ ರಕ್ಷಣೆ, ಕ್ಷೇಮ ಮತ್ತು ಸಾಂಪ್ರದಾಯಿಕ ಔಷಧವನ್ನು ನೀಡುವ ಯೋಜನೆ ಇದೆ. ಇದರ ಪ್ರಕ್ರಿಯೆ ಪ್ರಾರಂಭವಾಗಿದೆ ಮತ್ತು ಇದಕ್ಕೆ ಗುಜರಾತ್ ಅತ್ಯುತ್ತಮ ತಾಣವಾಗಿದೆ ಎಂದು ಮಾಂಡವಿಯಾ ಹೇಳಿದರು.

ಭಾರತವು ಕೋವಿಡ್ ಸಾಂಕ್ರಾಮಿಕದ ನೆರಳಿನಿಂದ ಯಶಸ್ವಿಯಾಗಿ ಹೊರಬಂದಿದೆ. ಆದರೆ ಕ್ಯಾನ್ಸರ್, ಹೃದ್ರೋಗ ಮತ್ತು ಮಧುಮೇಹದಂತಹ ಸಾಂಕ್ರಾಮಿಕವಲ್ಲದ ಕಾಯಿಲೆಗಳು ಹೆಚ್ಚುತ್ತಿದ್ದು, ಮುಂದೆ ಆರೋಗ್ಯ ಕ್ಷೇತ್ರದ ಸವಾಲುಗಳಾಗಿವೆ ಎಂದು ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಹೇಳಿದ್ದಾರೆ.

ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಕುವೆಂಪು ಹೆಸರು ನಾಮಕರಣ

ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ

ಶಿವಮೊಗ್ಗ, ಫೆ.12– ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ತಮ್ಮ ಹೆಸರು ಇಡುವುದು ಬೇಡ. ರಾಷ್ಟ್ರಕವಿ ಕುವೆಂಪು ಅವರ ಹೆಸರನ್ನು ಇಡಬೇಕು. ಈ ಕುರಿತು ಸದನದಲ್ಲಿ ವಿಷಯ ಮಂಡಿಸುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸ್ಪಷ್ಟಪಡಿಸಿದರು.

20ನೇ ಶತಮಾನ ಕಂಡ ಈ ದೇಶದ ಶ್ರೇಷ್ಠ ಕವಿ. ಜ್ಞಾನಪೀಠ ಪ್ರಶಸ್ತಿ ಪಡೆದವರು. ರಾಜ್ಯದ ಗೀತೆಯನ್ನು ರಚಿಸಿದ ರಾಷ್ಟ್ರಕವಿ ಕುವೆಂಪು ಅವರ ಹೆಸರನ್ನು ಇಡಲು ತೀರ್ಮಾನ ಮಾಡಿದ್ದೇವೆ. ಅಧಿವೇಶನದಲ್ಲಿ ಸರ್ವಾನುಮತದಿಂದ ತೀರ್ಮಾನ ಕೈಗೊಂಡು ಕೇಂದ್ರ ಸರ್ಕಾರಕ್ಕೆ ಶಿಫಾರಸು ಕಳುಹಿಸಲಿದ್ದೇವೆ ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರು ವಸುದೈವ ಕುಟುಂಬಕಂ ತತ್ವ ಸಾರುವತ್ತ ಕೆಲಸ ಮಾಡುತ್ತಿದ್ದಾರೆ. ಕುವೆಂಪು ಅವರು ವಿಶ್ವಮಾನವ ಸಂದೇಶವನ್ನು ಬರವಣಿಗೆ ಮೂಲಕ ಸಾರಿದ್ದರು. ಅದನ್ನು ಕಾರ್ಯರೂಪಕ್ಕೆ ತರಲು ಪ್ರಧಾನಿ ಮೋದಿ ಅವರು ಶ್ರಮಿಸುತ್ತಿದ್ದಾರೆ. ಕುವೆಂಪು ಅವರ ಹೆಸರನ್ನು ಇಡಬೇಕು ಎಂದು ಅಧಿವೇಶನದಲ್ಲಿ ತಾವೆ ಪ್ರಸ್ತಾಪಿಸುವುದಾಗಿ ಯಡಿಯೂರಪ್ಪ ತಿಳಿಸಿದರು.

ಫೆ.27ರಂದು ನರೇಂದ್ರ ಮೋದಿ ಅವರು ಶಿವಮೊಗ್ಗ ವಿಮಾನ ನಿಲ್ದಾಣ ಉದ್ಘಾಟನೆಗೆ ಆಗಮಿಸುವುದು ಖಚಿತವಾಗಿದೆ. ಪ್ರಧಾನಿ ಮೋದಿ ಅವರೆ ಕುವೆಂಪು ಅವರ ಹೆಸರು ಘೋಷಣೆ ಮಾಡಬೇಕು ಎಂಬುದು ತಮ್ಮ ಅಪೇಕ್ಷೆ ಎಂದರು.

ರಾಜ್ಯದಲ್ಲಿ ಮತ್ತೆ ಬಿಜೆಪಿ ಸರ್ಕಾರ: ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ 140ಕ್ಕೂ ಹೆಚ್ಚು ಸ್ಥಾನಗಳಿಸಿ ಮತ್ತೆ ಅಧಿಕಾರಕ್ಕೆ ತರುತ್ತೇವೆ. ಈ ಚುನಾವಣೆ ಮತ್ತು ಮುಂದಿನ ಚುನಾವಣೆಯಲ್ಲಿ ಸಕ್ರಿಯ ರಾಜಕಾರಣ ಮಾಡುತ್ತೇನೆ. ಯಾವುದೇ ಸ್ಥಾನಮಾನ ಇಲ್ಲದೆ ದುಡಿಯುತ್ತೇನೆ. ಪಕ್ಷವನ್ನು ಅಧಿಕಾರಕ್ಕೆ ತರುವುದು ನನ್ನ ಮುಂದಿರುವ ಸವಾಲು. ಈ ಸವಾಲನ್ನು ಸಮರ್ಥವಾಗಿ ಎದುರಿಸಿ ರಾಜ್ಯದಲ್ಲಿ ಬಿಜೆಪಿಯನ್ನು ಮತ್ತೊಮ್ಮೆ ಅಧಿಕಾರಕ್ಕೆ ತರುತ್ತೇನೆ ಎಂದು ಶಪಥ ಮಾಡಿದರು.

ಬಜೆಟ್ ಅಧಿವೇಶನ ಮುಗಿದ ನಂತರ ರಾಜ್ಯಾದ್ಯಂತ ಪ್ರವಾಸ ಮಾಡುತ್ತೇನೆ. ಹಳ್ಳಿಗಳಿಗೆ ಹೋಗಿ, ಹಳ್ಳಿ ಜನರಿಗೆ ಪ್ರಾಮುಖ್ಯತೆ ನೀಡಿ ಎಂದು ಅಮಿತ್ ಶಾ ಹೇಳಿದ್ದಾರೆ ಎಂದರು.

ಮೈಸೂರಲ್ಲಿ ಗೆಡ್ಡೆ ಗೆಣಸು ಮೇಳಕ್ಕೆ ಯಶಸ್ವಿ ತೆರೆ



ಮೈಸೂರು, ಫೆ.12(ಎಂಕೆ)– ನಗರದ ನಂಜರಾಜ ಬಹದ್ದೂರ್ ಛತ್ರದಲ್ಲಿ ನಡೆದ ಎರಡು ದಿನಗಳ 'ಗೆಡ್ಡೆ ಗೆಣಸು ಮೇಳ' ಯಶಸ್ವಿಯಾಗಿ ಮುಕ್ತಾಯಗೊಂಡಿತು.

ಮೇಳಕ್ಕೆ ಭೇಟಿ ನೀಡಿದ ಸಾವಿರಾರು ಮಂದಿ ಡಯೋಸ್ಕೋರಿಯಾ ಕುಟುಂಬದ ಬಳ್ಳಿ ಆಲೂಗೆಡ್ಡೆ, ಹುತ್ತರಿ ಗೆಣಸು, ಪರ್ಪಲ್ ಯಾಮ್, ಕೆಸು ಗಿಡ, ಶುಂಠಿ, ಹರಿಷಿಣ, ಆರಾರೂಟ್, ಮಾಕಳಿ ಬೇರು, ಕ್ಯಾರೆಟ್, ಬೀಟ್‌ರೂಟ್, ಸಿಹಿ ಗೆಣಸು, ಮರ ಗೆಣಸು, ಕತ್ತಾಳೆ ಗೆಡ್ಡೆ, ಗೊಟ್ಟಿ ಗೆಡ್ಡೆ, ಮಾವಿನ ಶುಂಠಿ, ಕೂವೆ ಗೆಡ್ಡೆ, ಉತ್ತರಿ ಗೆಡ್ಡೆ, ಬಿಳಿ ಸಿಹಿ ಗೆಣಸು, ಬಳ್ಳಿ ಬಟಾಟೆ, ಕಪ್ಪು ಅರಿಷಿಣ, ಕಪ್ಪು ಶುಂಠಿ, ಕಾಡು ಗೆಣಸು, ಮುಳ್ಳು ಗೆಣಸು, ಸುವರ್ಣ ಗೆಡ್ಡೆ ಸೇರಿದಂತೆ ಹತ್ತು–ಹಲವು ಬಗೆ ಬಗೆಯ ಗೆಡ್ಡೆ ಗೆಣಸುಗಳನ್ನು ಕೊಂಡ್ಯೊಯ್ದರಲ್ಲದೆ ಗೆಡ್ಡೆ ಗೆಣಸಿನಿಂದ ತಯಾರಿಸಿದ ತಿಂಡಿ–ತಿನಿಸುಗಳನ್ನು ಸವಿದು ಹರ್ಷ ವ್ಯಕ್ತಪಡಿಸಿದರು.

ಗೆಡ್ಡೆ ಗೆಣಸು ಅಡುಗೆ ಸ್ಪರ್ಧೆ: ಪರ್ಪಲ್ ಯಾಮ್ ಹೋಳಿಗೆ, ಸಿಹಿ ಉಂಡೆ, ಸೂಪ್, ಇಡ್ಲಿ, ಕಡಬು ಮತ್ತು ಜ್ಯೂಸ್, ಬೀಟ್ರೂಟ್ ಮೂಲಂಗಿ ಪರೋಟ, ಮಿಕ್ಸಡ್ ಯಾಮ್ ಸಲಾಡ್, ಬೀಟ್ರೂಟ್ ಮತ್ತು ಸಿಹಿ ಗೆಣಸಿನ ಪಾನ್, ಮಾವಿನ ಶುಂಠಿ ಚಟ್ನಿ, ಸಿಹಿ ಗೆಣಸಿನ ಚಕ್ಕುಲಿ ಮತ್ತು ಹೋಳಿಗೆ, ಹರಿಷಿಣ ಚಟ್ನಿ ಸೇರಿದಂತೆ ಹಲವಾರು ಬಗೆಯ ವೈವಿಧ್ಯಮಯ ರುಚಿಕರ ತಿಂಡಿ ತಿನಿಸುಗಳನ್ನು ಸ್ಪರ್ಧೆಗೆ ತರಲಾಗಿತ್ತು. ದಕ್ಷಿಣ ಅಮೆರಿಕಾ ಮೂಲದ ಯಾಕೋನ್ ಬೀನ್ಸ್‌ನಿಂದ ಮಾಡಿದ ಪಾಯಸ ತೀರ್ಪುಗಾರರ ಮೆಚ್ಚುಗೆಗೆ ಪಾತ್ರವಾಯಿತು.

ಸ್ಪರ್ಧೆಯಲ್ಲಿ ಎಂ.ಎಸ್.ಹರ್ಷಿತಾ(ಪ್ರಥಮ), ಸಾವಿತ್ರಿ ಶ್ರೀಹರಿ (ದ್ವಿತೀಯ) ಹಾಗೂ ಶ್ರೀದೇವಿ ಪಿ. ಹೆಗಡೆ (ತೃತೀಯ) ಬಹುಮಾನ ಪಡೆದರು. ಅಂಬಿಕಾ, ಜಯಲಕ್ಷ್ಮೀ, ಸಾವಿತ್ರಿ ಮತ್ತು ಮಾಯಾ ದೇವಿ ಸಮಾಧಾನಕರ ಬಹುಮಾನ ಪಡೆದರು.

ನಂತರ ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿದ ಜೈವಿಕ್ ಕೃಷಿಕ್ ಸೊಸೈಟಿಯ ಗೌರವಾಧ್ಯಕ್ಷ ಡಾ. ರಾಮಕೃಷ್ಣಪ್ಪ, ನಮ್ಮ ಆಹಾರದ ಬಟ್ಟಲಿನಿಂದ ಗೆಡ್ಡೆ ಗೆಣಸುಗಳು ಮಾಯವಾಗಿವೆ. ಇವುಗಳ ನಿರಂತರ ಬಳಕೆಯಿಂದ ಶರೀರಕ್ಕೆ ರೋಗ ನಿರೋಧಕ ಶಕ್ತಿ ಬರುತ್ತದೆ. ಆರೋಗ್ಯದ ಜೀವನಕ್ಕೆ ಗೆಡ್ಡೆ ಗೆಣಸುಗಳ ಬಳಕೆ ಪೂರಕ ಎಂದು ಹೇಳಿದರು.

ಕೃಷಿ ಕ್ಷೇತ್ರದ ವಿಸ್ಮಯಗಳು ಎಂದು ಪರಿಗಣಿಸಿದ ಗೆಡ್ಡೆ ಗೆಣಸುಗಳು ಪೋಷಕಾಂಶದ ಆಗರವಾಗಿವೆ. ಇಷ್ಟೊಂದು ಬಗೆಯ ಕಂದಮೂಲಗಳು ಇರುವುದು ಹೆಚ್ಚಿನವರಿಗೆ ಗೊತ್ತೇ ಇಲ್ಲ. ಇಂಥ ಮೇಳಗಳನ್ನು ಆಯೋಜಿಸುವ ಮೂಲಕ, ಗ್ರಾಹಕರಲ್ಲಿ ಶುದ್ಧ ಆಹಾರದ ಜಾಗೃತಿ ಮೂಡಿಸುತ್ತಿರುವುದು ಮಾದರಿಯಾಗಿದೆ ಎಂದು ಶ್ಲಾಘಿಸಿದರು. ಸಾವಯವ ಕೃಷಿಕ ಶ್ರೀವತ್ಸ, ಸಂದೀಪ್ ಮಂಜುನಾಥ್, ಅನಿತಾ, ಮಂಗಳಾ ಪ್ರಕಾಶ್, ಸೀಮಾ ಪ್ರಸಾದ್ ಮತ್ತು ಸಹಜ ಸಮುದಾಯದ ಕೋಮಲ್ ಕುಮಾರ್, ಸಿ.ಶಾಂತಕುಮಾರ್ ಮತ್ತಿತರರಿದ್ದರು.

ಎಂ.ಎಲ್.ಹುಂಡಿಯಲ್ಲಿ ಲಿಂಗೈಕ್ಯ ಶ್ರೀ ಶಿವಸ್ವಾಮಿಗಳ ಸ್ಮರಣೋತ್ಸವ

ವಿರಕ್ತ ಮಠಕ್ಕೆ ಗೌರಿಶಂಕರ, ಶಿವಸ್ವಾಮಿಗಳ ಕೊಡುಗೆ ಅಪಾರ

ಸುತ್ತೂರು ಮಠದ ಪೀಠಾಧ್ಯಕ್ಷ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ



ತಿ.ನರಸೀಪುರ, ಫೆ12– ಉಕ್ಕಲಗೆರೆ ಮಲ್ಲಿಕಾರ್ಜುನಸ್ವಾಮಿ ಬೆಟ್ಟ ಪವಿತ್ರ ಕ್ಷೇತ್ರವಾಗಿದ್ದು, ಜನತೆ ಶ್ರದ್ಧಾಭಕ್ತಿಯಿಂದ ಸ್ವಾಮಿಯವರನ್ನು ಆರಾಧಿಸುತ್ತಾರೆ ಎಂದು ಸುತ್ತೂರು ಮಠದ ಪೀಠಾಧ್ಯಕ್ಷ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಮದ್ಗಾರ ಲಿಂಗಯ್ಯನಹುಂಡಿ ಗ್ರಾಮದ ವಿರಕ್ತ ಮಠದಲ್ಲಿ ಭಾನುವಾರ ನಡೆದ ಲಿಂಗೈಕ್ಯ ಶ್ರೀ ಶಿವಸ್ವಾಮಿಗಳ 15ನೇ ಸ್ಮರಣೋತ್ಸವ ಹಾಗೂ ಧಾರ್ಮಿಕ ಸಭೆಯ ಸಾನಿಧ್ಯ ವಹಿಸಿ ಮಾತನಾಡಿದರು. ವಿರಕ್ತ ಮಠದ ಸುಂದರ ಪರಿಸರ ಬೇರೆಲ್ಲೂ ಸಿಗದು. ನದಿ, ಬೆಟ್ಟ, ಕೊಳದ ನಡುವೆ ನಿರ್ಮಾಣವಾಗಿ ಪ್ರಶಾಂತ ವಾತಾವರಣ ಸೃಷ್ಟಿಯಾಗಿದೆ. ಬಾಗಲಕೋಟೆಯ ಬಾದಾಮಿಯಲ್ಲಿ ಶಿವನಮಂದಿರ ನಿರ್ಮಿಸಲು ಇಂತಹ ಪರಿಸರಕ್ಕಾಗಿ ಹುಡುಕಾಟ ನಡೆಸಲಾಗಿತ್ತು. ನಂತರ ಬಸವವೊಂದರ ಸಹಾಯದಿಂದ ಅಂತಹದೇ ಪರಿಸರದೊರೆತು ಶಿವಮಂದಿರ ನಿರ್ಮಾಣವಾಯಿತು. ಇಲ್ಲಿನ ಗೌರಿಶಂಕರ ಸ್ವಾಮೀಜಿಗಳು ಮಠದ ಆಸ್ತಿಗೆ ಒಂದು ಚೌಕಟ್ಟು ನೀಡಿ ಅದರ ಸಂರಕ್ಷಣೆ ಮಾಡಿ ಮಠ ಕಟ್ಟಿದ್ದಾರೆ. ಮಠದ ಸಂರಕ್ಷಣೆಗೆ ಲಿಂಗೈಕ್ಯರಾದ ಶಿವಸ್ವಾಮಿಗಳು ಭದ್ರ ಬುನಾದಿ ಹಾಕಿದ್ದು, ಅವರ ಮಾರ್ಗದರ್ಶನದಲ್ಲಿ ಮಠ ಚೆನ್ನಾಗಿ ಮುನ್ನಡೆಸಲು ಗೌರಿಶಂಕರ ಸ್ವಾಮಿಗಳ ಶ್ರಮ ಬಹಳಷ್ಟಿದೆ ಎಂದರು.

ಮಠದ ಮೇಲಿರುವ ಬೆಟ್ಟದ ಮಲ್ಲಿಕಾರ್ಜುನಸ್ವಾಮಿ ಅನೇಕ ಭಕ್ತರಿಗೆ ಮನೆ ದೇವರಾಗಿದೆ. ಹರಕೆ ಹೊತ್ತ ಭಕ್ತರು ಪ್ರತಿ ವರ್ಷ ಕ್ಷೇತ್ರಕ್ಕೆ ಬಂದು ದೇವರ ದರ್ಶನ ಪಡೆದು ಹರಕೆ ತೀರಿಸುವ ಪದ್ಧತಿ ಚಾಲ್ತಿಯಲ್ಲಿದೆ ಎಂದರು.

ವಿರಕ್ತ ಮಠದ ಶ್ರೀಗೌರಿಶಂಕರ ಸ್ವಾಮೀಜಿ ಮಾತನಾಡಿ, ನೂತನ ಮಠದ ಸ್ಥಾಪನೆಗೆ ಎಂ.ಎಲ್.ಹುಂಡಿ ಗ್ರಾಮದ ಜನತೆ ಕೊಡುಗೆ ಅಪಾರವಾಗಿದೆ. ಗ್ರಾಮನಾಡಿಗೆ ವಿದ್ವತ್, ಉತ್ತಮ ರಾಜಕಾರಣಿಗಳು ಹಾಗೂ ಸ್ವಾಮೀಜಿಗಳನ್ನು ಕೊಟ್ಟಿದೆ. ಯಾವ ಗ್ರಾಮವೂ ಕೊಡದ ಸ್ವಾತಂತ್ರ್ಯವನ್ನು ನನಗೆ ಈ ಗ್ರಾಮ ನೀಡಿದೆ. ಸ್ವಾಮೀಜಿಗಳಿಗೆ ಕೆಲವೆಡೆ ಗ್ರಾಮಸ್ಥರ ನಿರ್ಬಂದವಿದೆ. ಊರಿನ ಮುಖಂಡರ ಮಾತನ್ನು ಸ್ವಾಮೀಜಿ ಕೇಳಬೇಕು. ತಮ್ಮ ಹಿಡಿತದಲ್ಲಿ ಸ್ವಾಮೀಜಿ ಇರಬೇಕೆಂಬ ಮನೋಭಾವ ಇರುತ್ತದೆ ಆದರೆ ನನಗೆ ನನ್ನ ಗ್ರಾಮ ಸಂಪೂರ್ಣ ಸ್ವಾತಂತ್ರ್ಯ ನೀಡಿದೆ. ನಾನೇನೆ ಮಾಡಿದರೂ ಅದರಲ್ಲಿ ಒಳ್ಳೆಯ ಉದ್ದೇಶವಿರುತ್ತದೆ ಎಂಬ ನಂಬಿಕೆ ಗ್ರಾಮಸ್ಥರಲ್ಲಿದೆ ಎಂದರು.

ಇಂದಿನ ಕಾರ್ಯಕ್ರಮಕ್ಕೆ ನನ್ನ ತಾಯಿಯೇ ನನಗೆ ಪ್ರೇರಣೆ. ಇಂದು ಗ್ರಾಮಕ್ಕೆ ಜಗದ್ಗುರುಗಳ ಪಾದ ಸ್ಪರ್ಷವಾಗಿದೆ. ಇದರಿಂದ ಗ್ರಾಮದ ಮತ್ತು ಮಠದ ಇತಿಹಾಸ ಮತ್ತಷ್ಟು ಪ್ರಜ್ವಲಿಸಲಿದೆ. ನನ್ನ ಮೇಲೆ ನಂಬಿಕೆ ಇಟ್ಟಿರುವ ಗ್ರಾಮಕ್ಕೆ ಹಾಗೂ ಜನರಿಗೆ ಯಾವುದೇ ಕಳಂಕ, ಅಪಚಾರ ತರದೇ ಜೀವ ಇರುವವರೆಗೂ ಕಾಯಕ ಮುಂದುವರೆಸುತ್ತೇನೆ ಎಂದು ಭರವಸೆ ನೀಡಿದರು.

ಶಾಸಕರಾದ ಎಂ.ಅಶ್ವಿನ್ ಕುಮಾರ್, ಡಾ.ಯತೀಂದ್ರ, ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿದರು. ಧಾರ್ಮಿಕ ಸಭೆಗೂ ಮುನ್ನಾ ಅಲ್ಲಮ ಪ್ರಭು ಸೇವಾಟ್ರಸ್ಟ್ ವತಿಯಿಂದ ನಿರ್ಮಿಸಿರುವ ಮಠದ ನೂತನ ಕಟ್ಟಡವನ್ನು ಸುತ್ತೂರು ಶ್ರೀಗಳು ಉದ್ಘಾಟಿಸಿದರು. ಭಕ್ತರಿಗೆ ಮಠದಿಂದ ಅನ್ನ ಸಂತರ್ಪಣೆ ವ್ಯವಸ್ಥೆ ಮಾಡಲಾಗಿತ್ತು.

ಕಾರ್ಯಕ್ರಮದಲ್ಲಿ ಕನಕಪುರ ದೇಗುಲ ಮಠದ ಮುಮ್ಮಡಿ ನಿರ್ವಾಣ ಸ್ವಾಮಿ, ವಾಟಾಳು ಮಠದ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಪಂಚಮಸಾಲಿ ಪೀಠದ ವಚನಾನಂದ ಸ್ವಾಮಿ, ಮಾಡ್ರಹಳ್ಳಿ ಪಟ್ಟದ ಮಠದ ಶಾಂತಮಲ್ಲಿಕಾರ್ಜುನಸ್ವಾಮಿ, ಸಿದ್ದರಹಳ್ಳಿ ಪರಮಾರ್ಥ ಮಠದ ಮಲ್ಲಿಕಾರ್ಜುನಸ್ವಾಮಿ, ಷಡಕ್ಷರಿ ದೇಶಿಕೇಂದ್ರ ಸ್ವಾಮೀಜಿ, ರೇಣುಕಾ ಶಿವಾಚಾರ್ಯ ಸ್ವಾಮೀಜಿ, ಡಾ.ಚನ್ನಮಲ್ಲ ಸ್ವಾಮೀಜಿ, ಮುಮ್ಮಡಿ ಶಿವರುದ್ರ ಸ್ವಾಮೀಜಿ, ಕೆಆರ್ಐಡಿಎಲ್ ಅಧ್ಯಕ್ಷ ಎಂ.ರುದ್ರೇಶ್, ಸಹಕಾರ ಮಹಾಮಂಡಲದ ಅಧ್ಯಕ್ಷ ಹೆಚ್.ವಿ.ರಾಜೀವ್, ದಯಾನಂದ ಪಟೇಲ್, ಪುರಸಭಾ ಸದಸ್ಯ ಕಿರಣ್, ಸಂತೋಷ್, ಆಡಿಟರ್ ಮಂಜುನಾಥ್, ಮೈಮುಲ್ ಮಾಜಿ ಅಧ್ಯಕ್ಷ ಓಂಪ್ರಕಾಶ್, ಪರಶಿವಮೂರ್ತಿ, ಕುಮಾರಸ್ವಾಮಿ, ಡಾ.ರೇವಣ್ಣ, ಹೋಟೆಲ್ ರಾಜಣ್ಣ ಸೇರಿದಂತೆ ಗ್ರಾಮಸ್ಥರು, ಯಜಮಾನರು, ಹರಗುರುಚರ ಮೂರ್ತಿಗಳು ಭಾಗವಹಿಸಿದ್ದರು.

> ಜಗಜ್ಯೋತಿ ಬಸವಣ್ಣ ಜಗತ್ತಿಗೆ ವಚನ ಸಾಹಿತ್ಯ ಸಾರಿದ್ದು, ಅದೇ ದಾರಿಯಲ್ಲಿ ಮಠಗಳು ಸಾಗುತ್ತಿವೆ. ಸುತ್ತೂರು ಶ್ರೀಗಳು ಬಹಳಷ್ಟು ದೇವಾಲಯಗಳು, ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಜನರಿಗೆ ನೆರವಾಗಿದ್ದಾರೆ. ರೈತರ ಬಗ್ಗೆ ಕೃಷಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿ ರೈತರಿಗೆ ನೆರವಾಗಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಮಹಾನ್ ಕ್ರಾಂತಿ ಮಾಡಿರುವ ಇವರು ಕೋವಿಡ್ ಸಂದರ್ಭ ಹಾಗೂ ಪ್ರಕೃತಿ ವಿಕೋಪ ಸಂದರ್ಭದಲ್ಲಿ ಸಂತ್ರಸ್ತರಿಗೆ ಮನೆ ನಿರ್ಮಾಣ ಮಾಡಿಕೊಡುವ ಮೂಲಕ ಜಾತಿ, ಧರ್ಮ ನೋಡದೆ ಸಹಾಯಹಸ್ತ ಚಾಚಿದ್ದಾರೆ.
> –ಜಿ.ಟಿ.ದೇವೇಗೌಡ, ಮಾಜಿ ಸಚಿವ.

ವಿಜೃಂಭಣೆಯ ಹೇಮಾದ್ರಂಬ ರಥೋತ್ಸವ

ಬನ್ನೂರು, ಫೆ.12– ಪಟ್ಟಣದಲ್ಲಿ ಭಾನುವಾರ ಹೇಮಾದ್ರಂಬ ದೇವಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.



ಮುಂಜಾನೆಯೇ ದೇವಿಗೆ ವಿಶೇಷ ಪೂಜಾ ಕೈಂಕರ್ಯ ನೆರವೇರಿಸಲಾಯಿತು. ಮುಂಜಾನೆ 6 ಗಂಟೆಗೆ ಹೇಮಾದ್ರಂಬ ದೇವಿ ತೀರ್ಥ ಹಾಕುವ ಮೂಲಕ ರಥ ಸಾಗುವ ರಾಜ ಬೀದಿ ಶುದ್ಧಗೊಳಿಸಲಾಯಿತು. ಬಳಿಕ ಬಣ್ಣ ಬಣ್ಣದ ಪತಾಕೆಯಿಂದ ಕಂಗೊಳಿಸುತ್ತಿದ್ದ ರಥಕ್ಕೆ ಕಳಸ ಪ್ರತಿಷ್ಠಾಪಿಸಿ, ಮಂಗಳವಾದ್ಯದೊಂದಿಗೆ ಬಗೆ ಬಗೆಯ ಹೂಗಳಿಂದ ಅಲಂಕೃತಗೊಂಡ ಹೇಮಾದ್ರಾಂಭ ಚಿನ್ನದ ಉತ್ಸವಮೂರ್ತಿಯನ್ನು ರಥದ ಸುತ್ತ ಪ್ರದಕ್ಷಿಣೆ ಹಾಕಿ ನಂತರ ರಥದಲ್ಲಿ ಪ್ರತಿಷ್ಠಾಪಿಸಲಾಯಿತು. ಈ ವೇಳೆ ನೆರೆದಿದ್ದ ಸಾವಿರಾರು ಭಕ್ತರು ಹರ್ಷ ವ್ಯಕ್ತಪಡಿಸಿದರಲ್ಲದೇ, ಮುಗಿಲು ಮುಟ್ಟಿದ ಉದ್ಗಾರ ಘೋಷಣೆಯೊಂದಿಗೆ 'ಹೇಮಾದ್ರಂಭ ಚೌಕ್' 'ಹೇಮಾದ್ರಂಬ ಚೌಕ್' ಎಂದು ಕೂಗುತ್ತ ರಥೋತ್ಸವಕ್ಕೆ ಚಾಲನೆ ನೀಡಿದರು.

ಒಂದೆಡೆ ದೇವಿ ಕರಗ ಹೊತ್ತ ಭಕ್ತರು ಹಬ್ಬರೆ ನಾದಕ್ಕೆ ಹೆಜ್ಜೆ ಹಾಕುತ್ತಿದ್ದರೆ, ಮತ್ತೊಂದೆಡೆ ಮಂಗಳವಾದ್ಯದ ಮೆರವಣಿಗೆ ರಥೋತ್ಸವಕ್ಕೆ ಮೆರಗು ನೀಡಿತು. ತೇರಿನ ಬೀದಿ ಮೂಲಕ ಹೊರಟ ರಥ 1 ಗಂಟೆ ವೇಳೆಗೆ ದೊಡ್ಡಂಗಡಿ ಬೀದಿ ಮೂಲಕ ಸಾಗಿ ದೇವಾಲಯ ಸೇರಿತು. ವಿವಿಧ ಸಂಘ ಸಂಸ್ಥೆಗಳು ಭಕ್ತರಿಗೆ ಮಜ್ಜಿಗೆ, ಪಾನಕ ವಿತರಿಸಿದರು. ಬಸ್‌ನಿಲ್ದಾಣದ ಬಳಿ ಹರಕೆ ಹೊತ್ತ ಭಕ್ತರು ಪ್ರಸಾದ ವಿತರಿಸಿದರು. ಪಟ್ಟಣದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಂಡಿದ್ದರು. **ಇಂದು ತೆಪ್ಪೋತ್ಸವ:** ಸೋಮವಾರ ಮಾಕನಹಳ್ಳಿಯ ಹೆಗ್ಗೆರೆಯಲ್ಲಿ ದೇವಿ ತೆಪ್ಪೋತ್ಸವ ನಡೆಯಲಿದೆ.

ಯುವಕರು ಕ್ರೀಡೆ ಬಗ್ಗೆ ಆಸಕ್ತಿ ಬೆಳೆಸಿಕೊಳ್ಳಿ



ನಂಜನಗೂಡು, ಫೆ.12– ಯುವಕರು ಪುಸ್ತಕ ಜ್ಞಾನದ ಜೊತೆಗೆ ಕ್ರೀಡೆ ಬಗ್ಗೆಯೂ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದು ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಸಲಹೆ ನೀಡಿದರು.

ನಗರದ ಅರಮನೆ ಮೈದಾನದಲ್ಲಿ ಮ್ಯಾಟ್ ಕಬಡ್ಡಿ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಹೊಸ ತಲೆಮಾರಿನವರಿಗೆ ಗ್ರಾಮೀಣ ದೇಸಿ ಕ್ರೀಡೆಗಳ ಪರಿಜ್ಞಾನವೇ ಇಲ್ಲ. ಇದಕ್ಕೆ ಕಾರಣ ಕೆಲವು ಪೋಷಕರು ಕ್ರೀಡೆಯನ್ನು ಕೇವಲ ಮನರಂಜನೆ ಎಂದು ಭಾವಿಸಿ ತಮ್ಮ ಮಕ್ಕಳು ಕ್ರೀಡೆಯಲ್ಲಿ ತೊಡಗುವುದನ್ನು ವಿರೋಧಿಸುತ್ತಾರೆ. ಕ್ರೀಡೆ ಮನುಷ್ಯನನ್ನು ಆರೋಗ್ಯವಂತ, ಕ್ರಿಯಾಶೀಲನನ್ನಾಗಿಸುವ ಜೊತೆಗೆ ವ್ಯಕ್ತಿಯಲ್ಲಿ ಆತ್ಮವಿಶ್ವಾಸ ಮೂಡಿಸಿ ಸಮಾಜದಲ್ಲಿ ಉತ್ತಮ ಬಾಂಧವ್ಯ ಮೂಡಿಸುತ್ತದೆ. ಆದ್ದರಿಂದ ಯುವಕರು ಕೇವಲ ಪುಸ್ತಕದ ಹುಳುಗಳಾಗದೆ, ಮೊಬೈಲ್ ಬಳಕೆ ಮಾಡದೆ ಯಾವುದಾದರೊಂದು ಕ್ರೀಡೆಯಲ್ಲಿ ತೊಡಗಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಕ್ರೀಡೆ ಆ ದೇಶದ ಪ್ರಗತಿ ಸೂಚಿಸುತ್ತದೆ. ದೇಸಿ ಕ್ರೀಡೆಗಳಿಗೂ ಸಹ ಸರ್ಕಾರಗಳು ಉತ್ತೇಜನ ನೀಡಬೇಕು. ಆಗ ಮಾತ್ರ ಕ್ರೀಡೆ ಅಭಿವೃದ್ಧಿ ಕಾಣಲು ಸಾಧ್ಯ. ನಂಜನಗೂಡು ಹಿಂದಿನಿಂದಲೂ ಕ್ರೀಡೆಗೆ ಹೆಸರುವಾಸಿಯಾಗಿದೆ. ಇಲ್ಲಿನ ಕ್ರೀಡಾಪಟುಗಳು ಅಥ್ಲೆಟಿಕ್ಸ್, ಬಾಸ್ಕೆಟ್‌ಬಾಲ್, ಫುಟ್‌ಬಾಲ್ ಪಂದ್ಯಾವಳಿಗಳಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಗುರ್ತಿಸಿಕೊಂಡಿದ್ದಾರೆ. ಇಂತಹ ಕ್ರೀಡೆಗಳ ಆಯೋಜಿಸುವುದರಿಂದ ಗ್ರಾಮೀಣ ಕ್ರೀಡಾಪಟುಗಳಿಗೆ ವೇದಿಕೆ ಒದಗಿಸಿಕೊಟ್ಟಂತಾಗುತ್ತದೆ. ಅಲ್ಲದೆ ಕ್ರೀಡಾಪಟುಗಳಿಗೂ ಉತ್ತೇಜನ ದೊರಕಲಿದೆ ಎಂದರು.

ರೋಹಿತ್‌ಗೌಡ ಮಾತನಾಡಿ, ನಗರದಲ್ಲಿ ಪ್ರಥಮ ಬಾರಿಗೆ ಮ್ಯಾಟ್ ಕಬಡ್ಡಿ ಪಂದ್ಯಾವಳಿ ಆಯೋಜಿಸಲಾಗಿದ್ದು, ಗುಂಡ್ಲುಪೇಟೆ, ಚಾಮರಾಜನಗರ, ಮೈಸೂರು ಸೇರಿದಂತೆ ವಿವಿಧ ತಾಲೂಕುಗಳಿಂದ 20 ತಂಡಗಳು ಪಂದ್ಯಾವಳಿಯಲ್ಲಿ ಭಾಗಿಯಾಗಿವೆ. ಪ್ರಥಮ 20 ಸಾವಿರ, ದ್ವಿತೀಯ 15 ಸಾವಿರ ನಗದು ಬಹುಮಾನ ಮತ್ತು ಟ್ರೋಫಿಗಳನ್ನು ಒಳಗೊಂಡಿದೆ ಎಂದರು.

ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ. ಶಂಕರ್, ನಗರಸಭಾ ಸದಸ್ಯರಾದ ಸಿದ್ದರಾಜು, ಗ್ರಾಪಂ ಸದಸ್ಯರಾದ ಗೋವರ್ಧನ್, ಮುಖಂಡರಾದ ಅನಂತ್, ಹರ್ಷ, ಭರತ್, ರಾಘವೇಂದ್ರ, ಶ್ರೀಕಾಂತ್, ಹರೀಶ್, ರವಿಕಿರಣ್ ಸೇರಿದಂತೆ ಇತರರಿದ್ದರು.

ಕೊಣನೂರಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ



ತಿ.ನರಸೀಪುರ, ಫೆ.12– ಹಿರಿಯ ರಾಜಕಾರಣಿ ಕೆ.ಎನ್.ಪುಟ್ಟಬುದ್ಧಿ ಫೌಂಡೇಷನ್, ಆರೋಗ್ಯ ಭಾರತಿ ಮತ್ತು ಸುಯೋಗ್ ಆಸ್ಪತ್ರೆ ವತಿಯಿಂದ ಭಾನುವಾರ ತಾಲೂಕಿನ ಕೊಣನೂರು ಸರ್ಕಾರಿ ಪ್ರಾಥಮಿಕ ಶಾಲಾ ವರಣದಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಶಿಬಿರ ಉದ್ಘಾಟಿಸಿ ಮಾತನಾಡಿದ ಮುಖಂಡ ಶರತ್ ಪುಟ್ಟಬುದ್ಧಿ, ಗ್ರಾಮದಲ್ಲಿ ಶುಚಿತ್ವ ಕಾಪಾಡಿಕೊಂಡರೆ ಯಾವುದೇ ಕಾಯಿಲೆ ಬರುವುದಿಲ್ಲ. ಇಂತಹ ಶಿಬಿರವನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಇಂದು ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ನಡೆದ ಆರೋಗ್ಯ ಶಿಬಿರದಲ್ಲಿ 400ಕ್ಕೂ ಹೆಚ್ಚು ಮಂದಿ ತಪಾಸಣೆಗೆ ಒಳಪಟ್ಟರು. ಸುಯೋಗ್ ಆಸ್ಪತ್ರೆ ವೈದ್ಯ ಡಾ.ಹೇಮಂತ್ ಕುಮಾರ್ ತಂಡದಿಂದ 350ಕ್ಕೂ ಹೆಚ್ಚು ಜನರಿಗೆ ರಕ್ತದೊತ್ತಡ ಮತ್ತು ಸಕ್ಕರೆ ಅಂಶ ಪರೀಕ್ಷೆ ಮಾಡಲಾಯಿತು. ಬಾಲಾಜಿ ಐ ಕೇರ್ ಮತ್ತು ಆಪ್ಟಿಕಲ್ಸ್ ವತಿಯಿಂದ 180ಕ್ಕೂ ಹೆಚ್ಚು ಜನರಿಗೆ ಕಣ್ಣಿನ ತಪಾಸಣೆ ಮಾಡಿ 30ಕ್ಕೂ ಹೆಚ್ಚು ಜನರಿಗೆ ಕಣ್ಣಿನ ಶಸ್ತ್ರಚಿಕಿತ್ಸೆಗೆ ಶಿಫಾರಸ್ಸು ಮಾಡಲಾಯಿತು. 15 ಮಂದಿಗೆ ಈಸಿಜಿ ಪರೀಕ್ಷೆ ಮಾಡಲಾಯಿತು. ಗ್ರಾಮ ಒನ್ ವರುಣಾ ಚನ್ನಬಸಪ್ಪ ಮತ್ತು ತಂಡದವರಿಂದ 85 ಜನರಿಗೆ ಸ್ಥಳದಲ್ಲೇ ಆಯುಷ್ಮಾನ್ ಭಾರತ್ ಕಾರ್ಡ್ ನೋಂದಣಿ ಮಾಡಿ ಕೊಡಲಾಯಿತು.

ಶಿಬಿರದಲ್ಲಿ ಕೊಣನೂರು ಗ್ರಾಪಂ ಸದಸ್ಯರಾದ ಮಹದೇವಸ್ವಾಮಿ, ರವಿಕುಮಾರ್, ಮಹೇಶ, ಮಹದೇವಸ್ವಾಮಿ, ಎಸ್‌ಡಿಎಂಸಿ ಅಧ್ಯಕ್ಷರಾದ ಬಸವಣ್ಣ, ಮಾದಪ್ಪ, ಗುರುಮಲ್ಲಮ್ಮ ಹದಿನಾರು ಮತ್ತು ಕೊಣನೂರು ಗ್ರಾಮಸ್ಥರು ಭಾಗವಹಿಸಿದ್ದರು.

ಕನಿಷ್ಠ ವೇತನ ನಿಗದಿಗೆ ಒತ್ತಾಯಿಸಿ

ನಾಳೆಯಿಂದ ಗ್ರಾಪಂ ನೌಕರರ ಅನಿರ್ದಿಷ್ಟಾವಧಿ ಮುಷ್ಕರ

ಹುಣಸೂರು, ಫೆ.12– ಗ್ರಾಪಂ ನೌಕರರಿಗೆ ಕನಿಷ್ಠ ವೇತನ ನಿಗದಿಗೆ ಒತ್ತಾಯಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಫೆ.14ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಗ್ರಾಪಂ ನೌಕರರ ಸಂಘ ಕರೆ ನೀಡಿದೆ ಎಂದು ರಾಜ್ಯ ಗ್ರಾಪಂ ನೌಕರರ ಸಂಘದ ತಾಲೂಕು ಕಾರ್ಯದರ್ಶಿ ಹಬ್ಬನಕುಪ್ಪೆ ಹೆಚ್.ಜೆ.ಜಗದೀಶ್ ತಿಳಿಸಿದರು.

ಮುಷ್ಕರ ಅಂಗವಾಗಿ ಬೆಂಗಳೂರಿನ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಅಂದು ಬೆಳಗ್ಗೆ 10.30ಕ್ಕೆ ಮೆರವಣಿಗೆ ಹೊರಡಲಿದೆ. ರಾಜ್ಯ ಸರ್ಕಾರ 2021ರ ನ.29ರಂದು ನಗರ ಸ್ಥಳೀಯ ಸಂಸ್ಥೆ ಹಾಗೂ ಪಂಚಾಯಿತಿ ರಾಜ್ ಸಂಸ್ಥೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ನೀಡಬೇಕಾದ ಕನಿಷ್ಠ ವೇತನ ಕುರಿತು ಅಧಿಸೂಚನೆ ಹೊರಡಿಸಿತು. ಇದರ ಪರಿಣಾಮ ಸಂಘ ಕನಿಷ್ಠ ವೇತನ ನಿಗದಿಪಡಿಸುವಂತೆ ಒತ್ತಾಯಿಸಿತು. ಆದರೆ ಆ ವೇತನ ನೀಡದೆ ನೌಕರರಿಗೆ ಸರ್ಕಾರ ಅನ್ಯಾಯ ಮಾಡುತ್ತಿದೆ. ಗ್ರಾಪಂನಲ್ಲಿ ಕೆಲಸ ಮಾಡುವ ಎಲ್ಲಾ ನೌಕರರನ್ನು ಏಕಕಾಲಕ್ಕೆ ಸರ್ಕಾರಿ ನೌಕರರನ್ನಾಗಿ ಘೋಷಿಸಬೇಕು. ನಿವೃತ್ತಿ ಅಥವಾ ಮರಣ ಹೊಂದಿದ ನೌಕರರಿಗೆ ಪ್ರತಿ ತಿಂಗಳು 6 ಸಾವಿರ ಪಿಂಚಣಿ ನೀಡಬೇಕು. 2017, ಅ.31 ಕ್ಕಿಂತ ಮುಂಚಿತವಾಗಿ ನೇಮಕಗೊಂಡ ಎಲ್ಲಾ ನೌಕರರನ್ನು ಏಕಕಾಲಕ್ಕೆ ಅನುಮೋದನೆ ಮಾಡಬೇಕು. ಪ್ರತಿಯೊಂದು ಗ್ರಾಪಂಗಳಿಗೆ ಲೆಕ್ಕ ಸಹಾಯಕ ಹುದ್ದೆ ಸೃಷ್ಟಿಸುವುದು ಸೇರಿದಂತೆ 15 ಬೇಡಿಕೆಗಳಿಗೆ ಒತ್ತಾಯಿಸಿ ನಡೆಯುವ ಅನಿರ್ದಿಷ್ಟಾವಧಿ ಹೋರಾಟದಲ್ಲಿ ತಾಲೂಕಿನ ಎಲ್ಲಾ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದ ಅವರು ಫೆ.14 ರಂದು ಮೈಸೂರು ರೈಲು ನಿಲ್ದಾಣದಿಂದ ಬೆಳಗ್ಗೆ 7.30ಕ್ಕೆ ಹೊರಡುವ ರೈಲಿನಲ್ಲಿ ತೆರಳಲಾಗುವುದು. ಎಲ್ಲಾ ನೌಕರರು ಮೈಸೂರು ರೈಲು ನಿಲ್ದಾಣಕ್ಕೆ ಬರಬೇಕೆಂದು ಮನವಿ ಮಾಡಿದರು. ಮಾಹಿತಿಗೆ ಮೊ: 8095306910, 9902179398 ಸಂಪರ್ಕಿಸಬಹುದು.

ಸುರಕ್ಷಾ ನಿಧನ



ಮಂಡ್ಯ, ಫೆ12– ತಾಲೂಕಿನ ತಗ್ಗಹಳ್ಳಿ ಗ್ರಾಮದ ನಿವಾಸಿ ಹೇಮಂತ್ ಕುಮಾರ್ ಅವರ ಹಿರಿಯ ಪುತ್ರಿ ಸುರಕ್ಷಾ(28) ಭಾನುವಾರ ನಿಧನರಾದರು. ಗ್ರಾಮದ ಹಿರಿಯ ಮುಖಂಡ ದಿ.ಚೌಡೇಗೌಡರ ಮೊಮ್ಮಗಳಾದ ಸುರಕ್ಷಾ ತಂದೆ, ತಾಯಿ, ತಮ್ಮಂದಿರು, ತಂಗಿಯರನ್ನು ಅಗಲಿದ್ದಾರೆ. ಸುರಕ್ಷಾ ಬಿಇ, ಎಂಟೆಕ್ ಮುಗಿಸಿದ್ದರು. ಪುತ್ರಿ ಅಕಾಲಿಕ ನಿಧನ ಕುಟುಂಬಸ್ಥರಿಗೆ ತೀವ್ರ ದುಃಖ ತರಿಸಿದೆ. ಮೃತರ ಅಂತ್ಯಕ್ರಿಯೆ ಸೋಮವಾರ ಬೆಳಗ್ಗೆ 11 ಗಂಟೆಗೆ ಸ್ವಗ್ರಾಮದ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಕೋಟೆಯಲ್ಲಿ ಶಾಸಕ ಅನಿಲ್ ಚಿಕ್ಕಮಾದು ಹುಟ್ಟುಹಬ್ಬ ಸಂಭ್ರಮ

● ಚಿಕ್ಕದೇವಮ್ಮ, ಗಣಪತಿಗೆ ವಿಶೇಷ ಪೂಜೆ ● ಶಾಸಕ ಅನಿಲ್‌ಗೆ ಭಾರೀ ಗಾತ್ರದ ಮಲ್ಲಿಗೆ, ಮೋಸಂಬಿ ಹಾರ ಹಾಕಿ ಸ್ವಾಗತ ● ಸಾವಿರಾರು ಮುಖಂಡರಿಂದ ಅಭಿನಂದನೆ





ಭಾನುವಾರ ಹುಟ್ಟುಹಬ್ಬ ಆಚರಿಸಿಕೊಂಡ ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಹೆಚ್.ಡಿ.ಕೋಟೆ ಹ್ಯಾಂಡ್‌ಪೋಸ್ಟ್ ವೃತ್ತದಲ್ಲಿ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಭಾರೀ ಗಾತ್ರದ ಮಲ್ಲಿಗೆ ಹಾಗೂ ಮೋಸಂಬಿ ಹಾರದೊಂದಿಗೆ ವಿಭಿನ್ನವಾಗಿ ಶುಭಾಶಯ ಕೋರಿದರು. ಪಟ್ಟಣದ ತಮ್ಮ ನಿವಾಸದಲ್ಲಿ ಕಾರ್ಯಕರ್ತರು, ಅಭಿಮಾನಿಗಳೊಂದಿಗೆ ಅನಿಲ್ ಚಿಕ್ಕಮಾದು ಹುಟ್ಟುಹಬ್ಬ ಆಚರಿಸಿಕೊಂಡಿದ್ದನ್ನು ಮತ್ತೊಂದು ಚಿತ್ರದಲ್ಲಿ ಕಾಣಬಹುದು.

ಹೆಚ್.ಡಿ.ಕೋಟೆ,ಫೆ.12–ಪಟ್ಟಣದಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅವರು ತಮ್ಮ 34ನೇ ಹುಟ್ಟುಹಬ್ಬವನ್ನು ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳೊಂದಿಗೆ ಭಾನುವಾರ ಅದ್ಧೂರಿಯಾಗಿ ಆಚರಿಸಿಕೊಂಡರು. ಇಂದು ಮುಂಜಾನೆಯೇ ಮೈಸೂರಿನ ಶಾಸಕರ ನಿವಾಸಕ್ಕೆ ತೆರಳಿದ ಮುಖಂಡರು ಹಾಗೂ ಅಭಿಮಾನಿಗಳು ಅನಿಲ್ ಚಿಕ್ಕಮಾದು ಅವರನ್ನು ಸನ್ಮಾನಿಸಿ ಹುಟ್ಟುಹಬ್ಬದ ಶುಭಾಶಯ ಕೋರಿದರು.

ಬಳಿಕ ಮೈಸೂರಿನಿಂದ ಕುಟುಂಬ ಸಮೇತರಾಗಿ ಆಗಮಿಸಿದ ಶಾಸಕರನ್ನು ತಾಲೂಕಿನ ಕಂಚಮಳ್ಳಿ ಗೇಟ್ ಬಳಿ ನೆರೆದಿದ್ದ ಸಾವಿರಾರು ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಅದ್ಧೂರಿಯಾಗಿ ಸ್ವಾಗತಿಸಿದರು. ನಂತರ ತಾಯಿ ನಾಗಮ್ಮ, ಪತ್ನಿ ಸೌಮ್ಯ, ಪುತ್ರಿ ರಿಷಿಕ ಅವರೊಂದಿಗೆ ತಾಲೂಕಿನ ಶಕ್ತಿದೇವತೆ ಚಿಕ್ಕದೇವಮ್ಮನ ಬೆಟ್ಟಕ್ಕೆ ತೆರಳಿದ ಶಾಸಕ ಅನಿಲ್, ತಾಯಿ ಚಿಕ್ಕದೇವಮ್ಮನವರಿಗೆ ವಿಶೇಷ ಪೂಜೆ ಸಲ್ಲಿಸಿದರು. ಅಲ್ಲಿಂದ ಮೆರವಣಿಗೆ ಮೂಲಕ ಸರಗೂರು ಪಟ್ಟಣಕ್ಕೆ ಆಗಮಿಸಿದ ಶಾಸಕರಿಗೆ ದಾರಿಯುದ್ದಕ್ಕೂ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಶಾಸಕರಿಂದ ಕೇಕ್ ಕತ್ತರಿಸುವ ಮೂಲಕ ಹುಟ್ಟುಹಬ್ಬದ ಶುಭಾಶಯ ಕೋರಿದರು. ಅಲ್ಲದೇ ಸರಗೂರು ಪಟ್ಟಣದ ಮಹಾವೀರ ಸರ್ಕಲ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲೂ ಅಭಿಮಾನಿಗಳು ಹಾಗೂ ಕಾರ್ಯಕರ್ತರೊಂದಿಗೆ ಶಾಸಕ ಅನಿಲ್ ಹುಟ್ಟುಹಬ್ಬ ಆಚರಿಸಿಕೊಂಡರು. ಬಳಿಕ ಹ್ಯಾಂಡ್‌ಪೋಸ್ಟ್ ವೃತ್ತಕ್ಕೆ ತೆರೆದ ವಾಹನದಲ್ಲಿ ಆಗಮಿಸಿದ ಶಾಸಕರಿಗೆ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಭಾರೀ ಗಾತ್ರದ ಮಲ್ಲಿಗೆ ಹಾಗೂ ಮೋಸಂಬಿ ಹಾರ ಹಾಕುವ ಮೂಲಕ ಅದ್ಧೂರಿಯಾಗಿ ಸ್ವಾಗತಿಸಿದರು. ಅಲ್ಲದೇ ಈ ವೇಳೆ ಪುಷ್ಪವೃಷ್ಟಿಗೈದು ಸಂಭ್ರಮಿಸಿದರು. ಅಲ್ಲಿಂದ ಕುಟುಂಬ ಸಮೇತರಾಗಿ ಗಣಪತಿ ದೇವಾಲಯಕ್ಕೆ ತೆರಳಿದ ಅವರು ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಪಟ್ಟಣದ ತಮ್ಮ ನಿವಾಸಕ್ಕೆ ತೆರಳಿದ ಶಾಸಕರು ಅಲ್ಲಿಯೂ ಕೂಡ ಕಾರ್ಯಕರ್ತರೊಂದಿಗೆ ಹುಟ್ಟುಹಬ್ಬ ಆಚರಿಸಿಕೊಂಡರು.

> 4 ಜಲಾಶಯ, ಅಪಾರ ಅರಣ್ಯ ಸಂಪತ್ತು ಹೊಂದಿರುವ ಏಷ್ಯಾದ ಏಕೈಕ ತಾಲೂಕು ನನ್ನ ಕ್ಷೇತ್ರ ಎಂಬುದು ಹೆಮ್ಮೆಯ ವಿಚಾರ. ನನ್ನನ್ನು ಶಾಸಕರಾಗಿ ಆಯ್ಕೆ ಮಾಡಿದ ಕ್ಷೇತ್ರದ ಜನತೆ ಪ್ರೀತಿ ವಿಶ್ವಾಸ ಉಳಿಸಿಕೊಳ್ಳಲು ನನ್ನ ಅಧಿಕಾರವಧಿಯಲ್ಲಿ ತಾಲೂಕಿನ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಮುಂದೆಯೂ ಅಭಿವೃದ್ಧಿಗೆ ಶ್ರಮಿಸಲು ಮತ್ತೊಮ್ಮೆ ತಾಲೂಕಿನ ಜನತೆ ನನಗೆ ಆಶೀರ್ವಾದ ಮಾಡಬೇಕು. –ಅನಿಲ್ ಚಿಕ್ಕಮಾದು, ಶಾಸಕ.

ಶಾಲೆಗಳಲ್ಲಿ ಹುಟ್ಟುಹಬ್ಬ ಆಚರಣೆ: ಶಾಸಕ ಅನಿಲ್ ಚಿಕ್ಕಮಾದು ಹುಟ್ಟುಹಬ್ಬ ಅಂಗವಾಗಿ ಕಾಂಗ್ರೆಸ್‌ನ ಮುಂಚೂಣಿ ನಾಯಕರು ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನ ವಿವಿಧ ಸರ್ಕಾರಿ ಶಾಲೆಗಳಿಗೆ ತೆರಳಿ ಶಾಲಾ ಮಕ್ಕಳಿಗೆ ಸಿಹಿ ವಿತರಿಸುವ ಮೂಲಕ ಶಾಸಕರ ಹುಟ್ಟುಹಬ್ಬ ಆಚರಿಸಿದರು. ಈ ವೇಳೆ ಶಾಲಾವರಣದಲ್ಲಿ ಹಣ್ಣಿನ ಗಿಡಗಳನ್ನು ನೆಡಲಾಯಿತು. ಕಾಂಗ್ರೆಸ್ ಮುಖಂಡರಾದ ಸತೀಶ್‌ಗೌಡ, ಪ್ರದೀಪ್, ರವಿ, ಸೋಮೇಶ್, ರಾಮು, ಪ್ರಭುಸ್ವಾಮಿ, ರಾಜನಾಯಕ, ಸೋಮು, ಪರಶಿವಮೂರ್ತಿ, ಗಣೇಶ್ ಆಚಾರ್, ಶಿವಪ್ಪ ಕೋಟೆ, ಬಿ.ಪಿ.ಭಾಸ್ಕರ್, ಕಾವೇರ, ಸುರೇಂದ್ರ, ಶಿವಮಲ್ಲಪ್ಪ, ಜಯರಾಮ್, ಪಟೇಲ್ ಸೋಮು, ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷ, ಮಾದಪ್ಪ, ಯುವ ಕಾಂಗ್ರೆಸ್ ಅಧ್ಯಕ್ಷ ಹೋಂಡಾ ನಯಾಜ್, ಶಿವರಾಜು, ಜಿಪಂ ಮಾಜಿ ಸದಸ್ಯರಾದ ಚಿಕ್ಕವೀರನಾಯಕ, ಹೆಚ್.ಸಿ.ಮಂಜುನಾಥ್, ನಂದಿನಿ, ಬಸವರಾಜು, ಮೈಮುಲ್ ನಿರ್ದೇಶಕರಾದ ಈರೇಗೌಡ, ದಾಕ್ಷಿಯಿಣಿ, ಪುರಸಭಾ ಸದಸ್ಯರಾದ ಹೆಚ್.ಸಿ.ನರಸಿಂಹಮೂರ್ತಿ, ರಾಜು, ಮಧು, ಶ್ರೀನಿವಾಸ್, ಆನಂದ್ ಸಾವಿರಾರು ಕಾರ್ಯಕರ್ತರು, ಮುಖಂಡರುಗಳು ಅಭಿಮಾನಿಗಳು ಇದ್ದರು.

700 ಕೋಟಿಗೂ ಹೆಚ್ಚು ವೆಚ್ಚದಲ್ಲಿ ತಾಲೂಕು ಅಭಿವೃದ್ಧಿ: ಶಾಸಕ ಅನಿಲ್

ಹೆಚ್.ಡಿ.ಕೋಟೆ: ನನ್ನ 5 ವರ್ಷಗಳ ಅಧಿಕಾರವಧಿಯಲ್ಲಿ ಸರ್ಕಾರದಿಂದ 700 ಕೋಟಿಗೂ ಹೆಚ್ಚು ಅನುದಾನ ತಂದು ತಾಲೂಕನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ಶಾಸಕ ಅನಿಲ್ ತಿಳಿಸಿದರು.

ಪಟ್ಟಣದ ತಮ್ಮ ನಿವಾಸದಲ್ಲಿ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಆಯೋಜಿಸಿದ್ದ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ನನ್ನ ತಂದೆ ಮಾಜಿ ಶಾಸಕ ದಿ.ಚಿಕ್ಕಮಾದು ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅವರ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ನಾನು ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ. ತಾಲೂಕಿನ ಮತದಾರರು ನನ್ನ ತಂದೆಗೆ ನೀಡುತ್ತಿದ್ದ ಗೌರವ, ಪ್ರೀತಿಯನ್ನು ನನಗೂ ನೀಡಿದ್ದಾರೆ. ನಾನು ಹೋದಲೆಲ್ಲಾ ನನ್ನನ್ನು ಅದ್ಧೂರಿಯಾಗಿ ಸ್ವಾಗತಿಸುತ್ತಾರೆ. ಹೀಗಾಗಿ ಕ್ಷೇತ್ರದ ಮತದಾರರ ಅಭಿಮಾನ ಉಳಿಸಿಕೊಳ್ಳಲು ಪ್ರಯತ್ನಿಸುತ್ತೇನೆ. ತಾಲೂಕು ಶೈಕ್ಷಣಿಕ, ಆರ್ಥಿಕ, ಭೌಗೋಳಿಕವಾಗಿ ಸಂಪದ್ಭರಿತವಾಗಿದೆ. ಕೋಟೆಯನ್ನು ಹಿಂದುಳಿದ ತಾಲೂಕು ಎನ್ನಲು ಸಾಧ್ಯವಿಲ್ಲ. ನನ್ನ ಅವಧಿಯಲ್ಲಿ ಭ್ರಷ್ಟಾಚಾರಕ್ಕೆ ಅವಕಾಶ ನೀಡದೇ ತಾಲೂಕಿನ ಸರ್ವಾಂಗೀಣ ಅಭಿವೃದ್ಧಿಗೆ ಪಣತೊಟ್ಟು ಕೆಲಸ ಮಾಡಿದ್ದೇನೆ. ಮುಂದೆ ಮತ್ತಷ್ಟು ಅಭಿವೃದ್ಧಿ ಕೆಲಸ ಮಾಡಬೇಕಾಗಿದೆ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ಮತ್ತೊಮ್ಮೆ ನನಗೆ ಆಶೀರ್ವಾದ ಮಾಡುವ ಮೂಲಕ ತಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಶಾಸಕ ಅನಿಲ್ ಮನವಿ ಮಾಡಿದರು.

ಸ್ವ–ಸಹಾಯ ಗುಂಪು ರಚನೆ ಪೌರಕಾರ್ಮಿಕ ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಒತ್ತು

● ಒಂದು ತಂಡದಲ್ಲಿ ಐದು ಮಂದಿಯಂತೆ 100 ಸ್ವ-ಸಹಾಯ ಗುಂಪು ರಚನೆ ● 3 ತಿಂಗಳ ತರಬೇತಿ ● ಪ್ರತಿ ಗುಂಪಿಗೆ 10 ಸಾವಿರ ಮೂಲ ನಿಧಿ ● 10 ಲಕ್ಷದವರೆಗೂ ಸಾಲ ● ಸಾಲ ಮರುಪಾವತಿ ಮಾಡುವವರಿಗೆ ಬಡ್ಡಿ ದರದಲ್ಲಿ ಶೇ.7ರಷ್ಟು ವಾಪಸ್ಸು



ಮೈಸೂರು,ಫೆ.12(ಎಸ್‌ಪಿಎನ್)– ಡೇ– ನಲ್ಮ್ 2023ರ ಯೋಜನೆ(ದೀನ್ ದಯಾಳ್ ಅಂತ್ಯೋದಯ ಯೋಜನೆ–ರಾಷ್ಟ್ರೀಯ ನಗರ ಜೀವನೋಪಾಯ ಯೋಜನೆ)ಯಡಿ ಪೌರಕಾರ್ಮಿಕ ಮಹಿಳೆಯರ ಬದುಕು ಹಸನುಗೊಳಿಸಲು ಸ್ವ–ಸಹಾಯ ಗುಂಪು ರಚಿಸಿ, ಆರ್ಥಿಕ ಸ್ವಾಲಂಬನೆಗೆ ಒತ್ತು ನೀಡಲು ಮೈಸೂರು ನಗರ ಪಾಲಿಕೆ ಮುಂದಾಗಿದೆ.

ಈ ಯೋಜನೆ ವ್ಯಾಪ್ತಿಗೆ 65 ವಾರ್ಡ್‌ಗಳಲ್ಲಿ ವಾಸುತ್ತಿರುವ ಪೌರ ಕಾರ್ಮಿಕ ಮಹಿಳೆಯರನ್ನು ಗುರುತಿಸಿ, ಸ್ವ ಸಹಾಯ ಗುಂಪಿನ ವ್ಯಾಪ್ತಿಗೆ ತರುವ ಕೆಲಸ ಮಾಡಲಾಗುತ್ತಿದೆ ಎನ್ನುತ್ತಾರೆ ನಗರ ಪಾಲಿಕೆ ಹೆಚ್ಚುವರಿ ಆಯುಕ್ತೆ ಎಂ.ಜೆ.ರೂಪ.

ಮೈಸೂರು ನಗರ ಪಾಲಿಕೆ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ(ಎಸ್‌ಕೆಆರ್‌ಪಿ), ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ(ಎನ್‌ಎಸ್‌ಕೆಎಫ್‌ಡಿಸಿ) ಹಾಗೂ ಮೈಸೂರು ನಗರ ಪಾಲಿಕೆ ಖಾಯಂ ಪೌರಕಾರ್ಮಿಕರು ಹಾಗೂ ಗುತ್ತಿಗೆ ಪೌರಕಾರ್ಮಿಕರ ಮಹಾಸಂಘದ ಸಹಯೋಗದೊಂದಿಗೆ ಪೌರಕಾರ್ಮಿಕ ಮಹಿಳೆಯರನ್ನು ಸ್ವ–ಸಹಾಯ ಗುಂಪುಗಳ ಮೂಲಕ ಸಮಾಜದ ಮುಖ್ಯ ವಾಹಿನಿಗೆ ತರುವ ಉದ್ದೇಶವಾಗಿದೆ.

ನಗರ ವ್ಯಾಪ್ತಿಯಲ್ಲಿರುವ 2,200 ಮಂದಿ ಪೌರಕಾರ್ಮಿಕರು ಕರ್ತವ್ಯ ನಿರ್ವಹಿಸಿದ್ದು, ಇದರಲ್ಲಿ 886 ಮಂದಿ ಮಹಿಳೆಯಿದ್ದಾರೆ. ಇದರಲ್ಲಿ 500 ಮಂದಿ ಮಹಿಳೆಯರನ್ನು ಆಯ್ಕೆ ಮಾಡಿಕೊಂಡು ಒಂದು ತಂಡಕ್ಕೆ ಐದು ಮಂದಿಯಂತೆ ನೂರು ಸ್ವ–ಸಹಾಯ ಗುಂಪುಗಳನ್ನು ರಚಿಸುವ ಗುರಿಯಿದೆ.

ಸ್ವ– ಸಹಾಯ ಗುಂಪಿನಲ್ಲಿ ಗುರುತಿಸಿಕೊಳ್ಳುವ ಮಹಿಳೆಯರಲ್ಲಿ ಆರ್ಥಿಕ ಜ್ಞಾನ, ಸ್ವ ಯಂ ಉದ್ಯೋಗ ರೂಪಿಸಿಕೊಳ್ಳುವ ವಿಧಾನಗಳ ಬಗ್ಗೆ ಮೂರು ತಿಂಗಳು ತರಬೇತಿ ಆಯೋಜಿಸಿ, ಈ ಯೋಜನೆಯ ಬಗ್ಗೆ ಮನವರಿಕೆ ಮಾಡಿಕೊಡಲಾಗುವುದು. ಒಂದೊಂದು ಗುಂಪಿಗೆ ಪ್ರಾಥಮಿಕ ಮೂಲ ನಿಧಿಯಾಗಿ 10 ಸಾವಿರ ರೂ.ಗಳನ್ನು ನೀಡಿ, ಇದನ್ನು 50 ಸಾವಿರದವರೆಗೆ ಉಳಿತಾಯ ಮಾಡುವ ಗುಂಪಿಗೆ ಷರತ್ತು ರಹಿತ ಕಡಿಮೆ ಬಡ್ಡಿ ದರದಲ್ಲಿ 2 ಲಕ್ಷದವರೆಗೆ ಸಾಲ ಪಡೆಯುವ ಅವಕಾಶವಿದೆ ಈ ಸಾಲವನ್ನು ಮರು ಪಾವತಿಸಿ, ಆರ್ಥಿಕ ಶಿಸ್ತು ಕಾಪಾಡಿಕೊಳ್ಳುವ ಗುಂಪುಗಳಿಗೆ 10 ಲಕ್ಷ ದವರೆಗೂ ಸಾಲ ಪಡೆದು ಸ್ವಯಂ ಉದ್ಯೋಗ ರೂಪಿಸಿಕೊಳ್ಳಲು ಅವಕಾಶವಿದೆ ಎಂದು ಅವರು ಮಾಹಿತಿ ನೀಡಿದರು.

ಒಟ್ಟಾರೆ ಯೋಜನೆ ಮೂಲಕ ಪೌರ ಕಾರ್ಮಿಕ ಮಹಿಳೆಯರಲ್ಲೂ ಆರ್ಥಿಕ ಶಿಸ್ತು, ಶಿಸ್ತು ಬದ್ಧ ಜೀವನ ಹಾಗೂ ಸ್ವಯಂ ಉದ್ಯೋಗ ರೂಪಿಸಲು ಯೋಜನೆ ಸಹಕಾರಿಯಾಗಲಿದೆ. ಯಾವ ಗುಂಪುಗಳು ಈ ಯೋಜನೆಯಲ್ಲಿ ಸಾಲ ಪಡೆಯುತ್ತಾರೋ, ಅಂತಹ ಮಹಿಳೆಯರಿಗೆ ನಿಗಧಿತ ಅವಧಿಯೊಳಗೆ ಸಾಲ ಮರುಪಾವತಿ ಮಾಡಿದರೆ, ಕೊನೆಯಲ್ಲಿ ಶೇ.7 ರಷ್ಟು ಬಡ್ಡಿ ದರದ ಹಣವನ್ನು ವಾಪಸ್ಸ್ ಬರಲಿದೆ ಎಂದು ತಿಳಿಸಿದರು.

> ಪೌರಕಾರ್ಮಿಕರ ಮಹಿಳೆಯರ ಬದುಕು ಪರಿವರ್ತನೆಗಾಗಿ ಡೇ–ನಲ್ಮ್ ಯೋಜನೆಯನ್ನು ಪಾಲಿಕೆ ಆಯುಕ್ತ ಜಿ.ಲಕ್ಷ್ಮಿಕಾಂತ ರೆಡ್ಡಿ ಅವರ ಮಾರ್ಗದರ್ಶನದಲ್ಲಿ ಹೆಚ್ಚುವರಿ ಆಯುಕ್ತೆ ಎಂ.ಜಿ.ರೂಪ, ಪಾಲಿಕೆ ಆರೋಗ್ಯಾಧಿಕಾರಿ ಡಾ.ಡಿ.ಜಿ.ನಾಗರಾಜು ಅವರ ನೇತೃತ್ವದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ.
>
> -ರಾಚಯ್ಯ. ಪೌರಕಾರ್ಮಿಕ ಮುಖಂಡ

ನಾಳೆಯಿಂದ 'ಮಹಾಕವಿ ಕಾಳಿದಾಸ ಕೃತಿ ಸಮೀಕ್ಷಾ' ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ

ಮೈಸೂರು, ಫೆ.12(ಎಸ್‌ಬಿಡಿ)– ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯವಿದ್ಯಾ ಸಂಶೋಧನಾಲಯ (ಓಆರ್‌ಐ) ಮತ್ತು ಶ್ರೀ ವ್ಯಾಸತೀರ್ಥ ಸಂಶೋಧನಾ ಪ್ರತಿಷ್ಠಾನದ ಸಹಯೋಗದಲ್ಲಿ 'ಮಹಾಕವಿ ಕಾಳಿದಾಸ ಕೃತಿ ಸಮೀಕ್ಷಾ' ವಿಷಯ ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿದೆ.




ಮಾನಸಗಂಗೋತ್ರಿಯ ವಿಜ್ಞಾನಭವನದಲ್ಲಿ ಫೆ.14ರ ಬೆಳಗ್ಗೆ 10.30ಕ್ಕೆ ಸೋಸಲೆ ಶ್ರೀ ವ್ಯಾಸರಾಜರ ಮಠದ ಪೀಠಾಧೀಶ ಶ್ರೀ ವಿದ್ಯಾಶ್ರೀಶತೀರ್ಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ಸಂಸದ ಪ್ರತಾಪಸಿಂಹ ವಿಚಾರ ಸಂಕಿರಣವನ್ನು ಉದ್ಘಾಟಿಸಲಿದ್ದಾರೆ. ಮೈಸೂರು ವಿವಿ ಕುಲಸಚಿವೆ ವಿ.ಆರ್.ಶೈಲಜಾ, ಶ್ರೀ ವ್ಯಾಸತೀರ್ಥ ಸಂಶೋಧನಾ ಪ್ರತಿಷ್ಠಾನದ ನಿರ್ದೇಶಕ ಸಿ.ಎಚ್.ಶ್ರೀನಿವಾಸಮೂರ್ತಿ, ಓಆರ್‌ಐ ನಿರ್ದೇಶಕ ಡಾ. ಡಿ.ಪಿ.ಮಧುಸೂದನಾಚಾರ್ಯ, ವಿದ್ವಾನ್ ಡಾ.ಟಿ.ವಿ.ಸತ್ಯನಾರಾಯಣ ಮತ್ತಿತರರ ಗಣ್ಯರು ಉಪಸ್ಥಿತರಿರಲಿದ್ದಾರೆ. ಅದೇ ವೇಳೆ ಪದ್ಮಶ್ರೀ ಪುರಸ್ಕೃತ ಹಿರಿಯ ಸಂಶೋಧಕ ಎಸ್.ಸುಬ್ಬರಾಮನ್ ಅವರನ್ನು ಅಭಿನಂದಿಸಲಾಗುವುದು.

ವಿಚಾರ ಸಂಕಿರಣದಲ್ಲಿ ನಾಡಿನ ಹಿರಿಯ ಸಂಸ್ಕೃತ ಮತ್ತು ವೇದಾಂತ ವಿದ್ವಾಂಸ ಡಾ.ಜಿ.ಕೃಷ್ಣಪ್ರಸಾದ್, ಡಾ.ಶರತ್‌ಚಂದ್ರ ಸ್ವಾಮಿ, ಡಾ.ಟಿ.ವಿ.ಸತ್ಯನಾರಾಯಣ, ಪ್ರೊ.ತಿರುಮಲಾಚಾರ್ಯ ಕುಲಕರ್ಣಿ, ಡಾ.ಉಮಾಕಾಂತ ಭಟ್, ಡಾ.ಎಚ್.ವಿ.ನಾಗರಾಜರಾವ್ ಪ್ರೌಢ ಉಪನ್ಯಾಸ ನೀಡಲಿದ್ದಾರೆ. ಫೆ.15ರಂದು ಸಂಜೆ 4ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಸಮಾರೋಪ ಭಾಷಣ ಮಾಡಲಿದ್ದಾರೆ. ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಹೇಮಂತ ಕುಮಾರ್, ಪ್ರೊ.ಶ್ರೀನಿವಾಸ ಮೂರ್ತಿ, ಓಆರ್‌ಐ ಉಪ ನಿರ್ದೇಶಕಿ ಡಾ.ಸಿ.ಪಾರ್ವತಿ ಉಪಸ್ಥಿತರಿರಲಿದ್ದಾರೆ.

ಎರಡೂ ದಿನ ವೇದಾಂತ, ಸಾಹಿತ್ಯ ಮತ್ತು ಸಂಸ್ಕೃತ ತಜ್ಞರಾದ ಡಾ.ಕೆ.ವಿ. ರಾಮಪ್ರಿಯ, ಡಾ.ಸಿ.ಎನ್.ಬಸವರಾಜು, ವಿದ್ವಾನ್ ಪ್ರದೀಪ ಸಿಂಹಾಚಾರ್ಯ, ಡಾ.ಡಿ.ಆರ್.ವಾದಿರಾಜಾಚಾರ್ಯ, ವಿದ್ವಾನ್ ಕೆ.ವಿ.ಪ್ರಸನ್ನಾಚಾರ್ಯ, ಡಾ.ಎಂ.ಗೀತಾ, ಪಿ.ಗೌರಿ, ಡಾ.ಶೋಭಾ, ಡಾ.ವಂಶಿ ಕೃಷ್ಣ ಮತ್ತು ಡಾ. ನಾಗಸಂಪಿಗೆ ಕೃಷ್ಣ ಸಂವಾದ ಮತ್ತು ಗೋಷ್ಠಿಗಳಿಗೆ ಪ್ರತಿಕ್ರಿಯೆ ನೀಡಲಿದ್ದಾರೆ ಎಂದು ಓಆರ್‌ಐ ನಿರ್ದೇಶಕ ಡಾ.ಡಿ.ಪಿ.ಮಧುಸೂದನಾಚಾರ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾವು ಅಧಿಕ ಇಳುವರಿಗೆ 'ಮಾವು ಸ್ಪೆಷಲ್' ಸೂಕ್ಷ್ಮ ಪೋಷಕಾಂಶ ಮಿಶ್ರಣ ಬಳಸಲು ಸಲಹೆ







ಮೈಸೂರು, ಫೆ.12(ಎಂಕೆ)– ಹಣ್ಣುಗಳ ರಾಜ ಮಾವಿನ ಹಣ್ಣಿನ ಅಧಿಕ ಇಳುವರಿಗಾಗಿ 'ಮಾವು ಸ್ಪೆಷಲ್'(ಸೂಕ್ಷ್ಮ ಪೋಷಕಾಂಶಗಳ ಮಿಶ್ರಣ) ಬಳಸುವಂತೆ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ(ಐಐಹೆಚ್‌ಆರ್) ಮಾವು ಬೆಳೆಗಾರರಿಗೆ ಸಲಹೆ ನೀಡಿದೆ.

ಮಾವಿನ ಎಲೆಗಳ ಮೇಲೆ ಸೂಕ್ಷ್ಮ ಪೋಷಕಾಂಶ ಮಿಶ್ರಣವನ್ನು ಸಿಂಪರಣೆ ಮಾಡಿ ಫಲ ನೀಡುವ ಮಾವಿನ ಮರದ ಸುಪ್ತ ಹಸಿವನ್ನು ನೀಗಿಸಿ, ಗುಣಮಟ್ಟದ ಹೂ ಮತ್ತು ಅಧಿಕ ಇಳುವರಿ ಪಡೆಯುವ ಉದ್ದೇಶದಿಂದ ಈ ಸೂಕ್ಷ್ಮ ಪೋಷಕಾಂಶ ಮಿಶ್ರಣವನ್ನು ಸಿದ್ಧಪಡಿಸಲಾಗಿದೆ.

ಮಾವು ಬೆಳೆಯುವ ಪ್ರದೇಶದ ಮಣ್ಣು, ಮಾವಿನ ಎಲೆಗಳನ್ನು ವಿಶ್ಲೇಷಣೆ ಮಾಡಿ ಪೋಷಕಾಂಶಗಳಾದ ಸಾರಜನಕ, ರಂಜಕ, ಪೊಟ್ಯಾಷ್ ಪ್ರಮಾಣದ ಆಧಾರದ ಮೇಲೆ ಹಾಗೂ ಪೋಷಕಾಂಶಗಳ ಕೊರತೆಯಿಂದ ಉಂಟಾಗುವ ನ್ಯೂನತೆಗಳನ್ನು ಸರಿಪಡಿಸಲು 'ಮಾವು ಸ್ಪೆಷಲ್' ಶಿಫಾರಸ್ಸು ಮಾಡಲಾಗಿದೆ.

ಮಾವು ಸ್ಪೆಷಲ್: ಮಾವು ಬೆಳೆಯಲ್ಲಿ ಮುಖ್ಯವಾಗಿ ಕಂಡು ಬರುವ ಸೂಕ್ಷ್ಮ ಪೋಷಕಾಂಶಗಳಾದ ಬೋರಾನ್, ಸತು ಹಾಗೂ ಲಘು ಪೋಷಕಾಂಶಗಳಾದ ಮ್ಯಾಂಗನೀಸ್, ಕಬ್ಬಿಣ, ತಾಮ್ರದ ಮಿಶ್ರಣವೇ 'ಮಾವು ಸ್ಪೆಷಲ್' ಆಗಿದೆ. ಮಾವಿನ ಬೆಳವಣಿಗೆ ಹಾಗೂ ಫಸಲಿನ ಗುಣಮಟ್ಟದ ಮೇಲೆ 'ಮಾವು ಸ್ಪೆಷಲ್' ಪರಿಣಾಮ ಬೀರ ಬಲ್ಲದಾಗಿದೆ.

ಸರಳ ಮತ್ತು ಲಾಭದಾಯಕ: ಮಾವು ಸ್ಪೆಷಲ್ ಸೂಕ್ಷ್ಮ ಪೋಷಕಾಂಶಗಳ ಮಿಶ್ರಣ ಸಿಂಪರಣೆ ಮಾಡುವುದು ಸರಳ ಮತ್ತು ಲಾಭದಾಯಕವಾಗಿದೆ. 25 ಲೀಟರ್ ನೀರಿಗೆ 125 ಗ್ರಾಂ 'ಮಾವು ಸ್ಪೆಷಲ್' ಸೂಕ್ಷ್ಮ ಪೋಷಕಾಂಶಗಳ ಮಿಶ್ರಣವನ್ನು ಕರಗಿಸಿ, ಒಂದು ನಿಂಬೆ ಹಣ್ಣಿನ ರಸ ಹಾಗೂ ಒಂದು ಪ್ಯಾಕೆಟ್ ಶಾಂಪನ್ನು ಚೆನ್ನಾಗಿ ಮಿಶ್ರಾ ಮಾಡಿ ಜುಲೈ, ನವೆಂಬರ್ ಹಾಗೂ ಡಿಸೆಂಬರ್ ತಿಂಗಳಲ್ಲಿ ಮಾವಿನ ಎಲೆಗಳಿಗೆ ಸಿಂಪರಣೆ ಮಾಡುವುದಾಗಿದೆ. ಅದರಲ್ಲೂ ಬೆಳಿಗ್ಗೆ ಸೂರ್ಯ ಪ್ರಖರವಾಗುವ ಮೊದಲು ಮಾವಿನ ಎಲೆಗಳ ಕೆಳಭಾಗಕ್ಕೆ ತಟ್ಟುವ ಹಾಗೆ ಸಿಂಪಡಿಸುವುದರಿಂದ ಹೆಚ್ಚು ಲಾಭದಾಯಕವಾಗಲಿದೆ.

ಮಾವಿನ ಕಾಯಿಗಳು ಬಟಾಣಿ ಗಾತ್ರದಲ್ಲಿರುವಾಗ ಒಮ್ಮೆ ಸಿಂಪರಣೆ ಮಾಡಿದರೆ ಉತ್ತಮ. ಒಂದು ಹೆಕ್ಟೇರ್‌ಗೆ ಸುಮಾರು 20 ಕೆ.ಜಿ 'ಮಾವು ಸ್ಪೆಷಲ್ ಬೇಕಾಗುತ್ತದೆ. 'ಮಾವು ಸ್ಪೆಷಲ್' ಸೂಕ್ಷ್ಮ ಪೋಷಕಾಂಶ ಮಿಶ್ರಣದಿಂದ ನ್ಯೂನ್ಯತೆಗಳನ್ನು ಸರಿಪಡಿಸುವುದರ ಜೊತೆಗೆ ಹಣ್ಣಿನ ಗಾತ್ರ ವೃದ್ಧಿ, ಆಕರ್ಷಕ ಬಣ್ಣ ಹಾಗೂ ಉತ್ತಮ ಗುಣಮಟ್ಟದ ಮಾವಿನ ಫಸಲನ್ನು ಪಡೆಯಬಹುದಾಗಿದೆ.

ವಿತರಣೆ: 'ಮಾವು ಸ್ಪೆಷಲ್' ಸೂಕ್ಷ್ಮ ಪೋಷಕಾಂಶಗಳ ಮಿಶ್ರಣವೂ ನಾಗನಹಳ್ಳಿಯಲ್ಲಿರುವ ಕೃಷಿ ವಿವಿ ವಿಸ್ತರಣಾ ಶಿಕ್ಷಣ ಘಟಕದಲ್ಲಿ ದೊರಕಲಿದ್ದು, ಹೆಚ್ಚಿನ ಮಾಹಿತಿಗಾಗಿ ತೋಟಗಾರಿಕೆ ತಜ್ಞ ರಾಹುಲ್ ದಾಸ್ ಅವರನ್ನು (ಮೊ.ನಂ. 9880338630) ಸಂಪರ್ಕಿಸಬಹುದಾಗಿದೆ.

ವಿಷ್ಣುವರ್ಧನ್ ಸ್ಮಾರಕದ ಬಳಿ ಅಭಿಮಾನಿಗಳಿಂದ ಜನಪರ ಸೇವಾಕಾರ್ಯ

ಮೈಸೂರು, ಫೆ.12(ಎಸ್‌ಪಿಎನ್)– ಮೈಸೂರು ಹೊರವಲಯದಲ್ಲಿರುವ ಸಾಹಸ ಸಿಂಹ ಡಾ.ವಿಷ್ಣುವರ್ಧನ್ ಸ್ಮಾರಕ ಉದ್ಘಾಟನೆಗೊಂಡು 14 ದಿನ ಕಳೆದ ಹಿನ್ನೆಲೆಯಲ್ಲಿ ಅವರ ಅಭಿಮಾನಿಗಳು ಹಾಗೂ ಮೈಸೂರು ಜನತೆಯಿಂದ ಸ್ವಯಂ ಪ್ರೇರಿತ ರಕ್ತದಾನ ಮತ್ತು ಉಚಿತ ಕಣ್ಣಿನ ಶಿಬಿರ ಹಾಗೂ ಅನ್ನಸಂತರ್ಪಣೆ ಕಾರ್ಯಕ್ರಮ ಭಾನುವಾರ ನಡೆಯಿತು.



ಮೈಸೂರಿನ ಎಚ್.ಡಿ.ಕೋಟೆ ರಸ್ತೆಯ ಉದ್ಬೂರು ಗೇಟ್ ಸಮೀಪದಲ್ಲಿ ಸಾಹಸಸಿಂಹ ವಿಷ್ಣು ವರ್ಧನ್ ಸ್ಮಾರಕದ ಬಳಿ ಸಾಹಸಸಿಂಹ ವಿಷ್ಣುವರ್ಧನ್ ಅಭಿಮಾನಿ ಬಳಗ, ಜೀವದಾರ ರಕ್ತ ನಿಧಿ ಕೇಂದ್ರ, ಮತ್ತು ಪ್ರಜ್ಞಾವಂತ ನಾಗರಿಕ ವೇದಿಕೆ ಸಹಯೋಗದೊಂದಿಗೆ ಆಯೋಜಿಸಿದ್ದ ಶಿಬಿರದಲ್ಲಿ 65ಕ್ಕೂ ಹೆಚ್ಚು ಸ್ವಯಂ ಪ್ರೇರಿತರಾಗಿ ರಕ್ತಧಾನ ಮಾಡಿದರು, ಸ್ಮಾರಕ ವೀಕ್ಷಣೆಗೆ ಬಂದಿದ್ದ ಪ್ರವಾಸಿಗರಿಗೆ ಉಚಿತ ಕಣ್ಣಿನ ತಪಾಸಣೆ ನಡೆಸಿ, ಅನ್ನಸಂತರ್ಪಣೆ ನಡೆಸಲಾಯಿತು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಜೀವದಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ನಾನು ಸಹ ಡಾ.ವಿಷ್ಣುವರ್ಧನ್ ಅಪ್ಪಟ ಅಭಿಮಾನಿ. ವಿಷ್ಣುವರ್ಧನ್ ಅಭಿನಯದ ಪ್ರತಿಯೊಂದು ಚಿತ್ರವನ್ನು ವೀಕ್ಷಣೆ ಮಾಡಿದ್ದು, ಅವರ ಅಭಿನಯದ ಚಿತ್ರಗಳಲ್ಲಿ ಮಾನವೀಯ ಮೌಲ್ಯ, ಪರಿಸರ ಪ್ರೀತಿ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಬಿಂಬಿಸುವ ಕಥಾವಸ್ತುಗಳು ಇರುತ್ತಿದ್ದು, ಈ ಹಿನ್ನೆಲೆಯಲ್ಲಿ ಅವರನ್ನು ಇಂದಿಗೂ ಹಲವು ಮಂದಿ ಇಷ್ಟಪಡುವವರಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಸ್ಮಾರಕದ ಬಳಿ ವರ್ಷ ಪೂರ್ತಿ ಪ್ರತಿ ಭಾನುವಾರ ವಿವಿಧ ಸಾಮಾಜಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಚಿಂತನೆಯಿದೆ. ಇದಕ್ಕೆ ಅಭಿಮಾನಿಗಳು ಕೈಜೋಡಿಸುವಂತೆ ಮನವಿ ಮಾಡಿದರು. ಈ ವೇಳೆ ಪ್ರಜ್ಞಾವಂತ ನಾಗರಿಕ ವೇದಿಕೆ ಅಧ್ಯಕ್ಷ ಕಡಕೋಳ ಜಗದೀಶ್, ಕೃಷ್ಣಪ್ಪ, ಪಾಂಡುಪುರದ ಶ್ರೀಕಂಠೇಗೌಡ, ಹಾಗೂ ಇನ್ನಿತರರು ಹಾಜರಿದ್ದರು.

ಚಿಂತನ ಗಣಿತ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ



ಮೈಸೂರು, ಫೆ12– ಚಿತ್ರದುರ್ಗದ ಚಿಂತನ ಪ್ರಕಾಶನ ಆಯೋಜಿಸಿದ್ದ 2022–23ನೇ ಸಾಲಿನ ಅಂತಾರಾಷ್ಟ್ರೀಯ ಮಟ್ಟದ ಚಿಂತನ ಗಣಿತ ಪರೀಕ್ಷೆಯಲ್ಲಿ ಮೈಸೂರು ಗುರೂರಿನ ಗುಡ್ ಶೆಫರ್ಡ್ ಶಾಲೆಯ ಒಂಬತ್ತನೇ ತರಗತಿ ವಿದ್ಯಾರ್ಥಿನಿ ಆರ್.ಯಶಸ್ವಿನಿ ರಾಜ್ಯಮಟ್ಟದಲ್ಲಿ ಮೊದಲ ರ್ಯಾಂಕ್ ಪಡೆದಿದ್ದಾಳೆ. ಜಿಲ್ಲಾ ಮಟ್ಟದಲ್ಲಿ ವೇದಶ್ರೀ, ವೈ.ಸಂಜನಾ, ಎಂ.ಶೃತಿ ಪ್ರಥಮ ಸ್ಥಾನ ಪಡೆದಿದ್ದಾರೆ. ತಾಲೂಕು ಮಟ್ಟದಲ್ಲಿ ವೈ.ಕೃಷ್ಣ, ಮುದಾಸಿರ್ ಅಹಮ್ಮದ್ ಮೊದಲ ಸ್ಥಾನ ಪಡೆದಿದ್ದಾರೆ. ಶಾಲಾ ಹಂತದಲ್ಲಿ 18 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ, 5 ಮಂದಿ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಸರ್ಕಾರದ ಅನುದಾನದಿಂದ ಚಾಮರಾಜ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯವಾಗಿದೆ

ಯುವ ಮೋರ್ಚಾದ ಕಾರ್ಯಕ್ರಮದಲ್ಲಿ ಶಾಸಕ ನಾಗೇಂದ್ರ ಮಾಹಿತಿ



ಮೈಸೂರು, ಫೆ12(ಎಸ್‌ಬಿಡಿ)– ರಾಜ್ಯ ಸರ್ಕಾರದ ಅನುದಾನದಿಂದ ಚಾಮರಾಜ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳಾಗಿವೆ ಎಂದು ಶಾಸಕ ಎಲ್.ನಾಗೇಂದ್ರ ತಿಳಿಸಿದರು.

ಬಿಜೆಪಿ ಯುವಮೋರ್ಚಾ ಮೈಸೂರು ನಗರ ಘಟಕದ ವತಿಯಿಂದ ಲಕ್ಷ್ಮಿಕಾಂತನಗರ ವಾರ್ಡ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಯುವ ಮೋರ್ಚಾ ಸೇರ್ಪಡೆಯಾದವರಿಗೆ ಅಭಿನಂದಿಸಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿಯವರು ನಿರುದ್ಯೋಗ ನಿವಾರಣೆ ನಿಟ್ಟಿನಲ್ಲಿ ಯುವ ಸಮುದಾಯಕ್ಕೆ ಹಲವು ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಹಾಗೆಯೇ ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕ್ಷೇತ್ರಕ್ಕೆ ನೀಡಿದ ಸಾವಿರ ಕೋಟಿ ಅನುದಾನದಲ್ಲಿ ಅನೇಕ ಅಭಿವೃದ್ಧಿ ಕಾಮಗಾರಿಗಳು ಸಾಕಾರವಾಗಿವೆ ಎಂದರು.

ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳ ಫಲಾನುಭವಿಗಳಾದ ಯುವಕ–ಯುವತಿಯರಿಗೆ ವಿವಿಧ ಸಂಸ್ಥೆಗಳಲ್ಲಿ ಉದ್ಯೋಗ ಕಲ್ಪಿಸಿಕೊಟ್ಟಿರುವ ಸಮಾಧಾನವಿದೆ. ಹೆಬ್ಬಾಳ ವಾರ್ಡ್‌ನ ಪ್ರಮುಖ ರಸ್ತೆಗಳ ಅಭಿವೃದ್ಧಿ, ಆರಾಧನಾ ಸಮಿತಿ ಮೂಲಕ ದೇವಸ್ಥಾನಗಳ ಅಭಿವೃದ್ಧಿಗೆ ನೆರವು, ಕುಡಿಯುವ ನೀರಿನ ಟ್ಯಾಂಕನ್ನು ನಿರ್ಮಾಣ, ಆಟದ ಮೈದಾನಕ್ಕೆ ಕಾಂಪೌಂಡ್, ಲಕ್ಷ್ಮಿಕಾಂತನಗರದ ಎಲ್ಲಾ ರಸ್ತೆಗಳಿಗೆ ಡಾಂಬರೀಕರಣ, ಮಳೆ ನೀರು ಚರಂಡಿ ನಿರ್ಮಾಣ ಸೇರಿದಂತೆ ಹತ್ತಾರು ಅಭಿವೃದ್ಧಿ ಕಾರ್ಯಗಳಾಗಿವೆ. ಕಳೆದ 5 ವರ್ಷಗಳಲ್ಲಾದ ಅಭಿವೃದ್ಧಿ ಬಗ್ಗೆ ಜನ ಅರಿತಿದ್ದಾರೆ. ಮುಂಬರುವ ಚುನಾವಣೆಯಲ್ಲೂ ಬಿಜೆಪಿ ಬೆಂಬಲಿಸುವ ತೀರ್ಮಾನ ಮಾಡಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಯುವಮೋರ್ಚಾ ನಗರಾಧ್ಯಕ್ಷ ಎಂ.ಜೆ.ಕಿರಣ್‌ಗೌಡ ಮಾತನಾಡಿ, ಶಾಸಕರು ಹೆಬ್ಬಾಳು ವಾರ್ಡ್‌ಗೆ 4 ಕೋಟಿಗಿಂತಲೂ ಹೆಚ್ಚು ಅನುದಾನ ನೀಡಿದ್ದಾರೆ. ಪ್ರತಿಯೊಂದು ರಸ್ತೆಗಳ ಅಭಿವೃದ್ಧಿ, ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಎಲ್ಲಾ ಮೂಲ ಸೌಕರ್ಯಗಳನ್ನೂ ಕಲ್ಪಿಸಿಕೊಟ್ಟಿದ್ದಾರೆ. ವೃದ್ಧಾಪ್ಯ ವೇತನ, ವಿಧವಾ ವೇತನ ಅರ್ಹರಿಗೆ ಸಿಗುವಲ್ಲಿ ಕಾಳಜಿ ವಹಿಸಿದ್ದಾರೆ. ವಿವಿಧ ನಿಗಮ ಮಂಡಳಿಗಳಿಂದ ಲಕ್ಷ್ಮಿಕಾಂತನಗರದ 200ಕ್ಕೂ ಹೆಚ್ಚು ಜನರಿಗೆ ಹಣಕಾಸು ನೆರವು ಸಿಕ್ಕಿದೆ ಎಂದರು.

ಶಾಸಕರ ಕಾರ್ಯದಿಂದ ಪ್ರಭಾವಿತರಾಗಿ ಹಲವಾರು ಯುವಕರು ಸ್ವಯಂ ಪ್ರೇರಣೆಯಿಂದ ಬಿಜೆಪಿ ಯುವ ಮೋರ್ಚಾ ಸೇರ್ಪಡೆಯಾಗಿದ್ದಾರೆ. ಸಚಿನ್ ಗೌಡ, ರಾಜೇಂದ್ರ, ಅರುಣ್ ಕಾಟ್ಕರ್, ಶಾಂತಪ್ಪ, ಶಿವಸ್ವಾಮಿ, ಸೌಮ್ಯ, ಗುರುಗೌಡ, ಭಾಸ್ಕರ, ಹೇಮಂತ, ಹರೀಶ್ ಕುಮಾರ್, ಸಂತೋಷ್ ಕುಮಾರ್, ಮದನ್, ರವಿ, ಮಹೇಶ್ ಕುಮಾರ್, ದಿನೇಶ್ ಕುಮಾರ್ ಸೇರಿದಂತೆ ಅನೇಕ ಮಂದಿ ಯುವ ಮೋರ್ಚಾದ ವಿವಿಧ ಜವಾಬ್ದಾರಿ ನಿರ್ವಹಿಸುವ ಮೂಲಕ ಪಕ್ಷ ಸಂಘಟನೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ ಎಂದು ತಿಳಿಸಿದರು.

ಇದೇ ವೇಳೆ ಯುವಮೋರ್ಚಾ ವಾರ್ಡ್ ಅಧ್ಯಕ್ಷ ಮನು, ಪ್ರಧಾನ ಕಾರ್ಯದರ್ಶಿಗಳಾದ ಹರೀಶ್ ಕುಮಾರ್, ಆದರ್ಶ ಕಾಮತ್ ಅವರನ್ನು ನೇಮಕಗೊಳಿಸಿ, ಅವರಿಗೆ ಶಾಸಕ ಎಲ್.ನಾಗೇಂದ್ರ ಅವರು ನೇಮಕಾತಿ ಪತ್ರ ನೀಡಿದರು.

ಚೀನೀ ಮಾಮ ಶ್ರೀನಿವಾಸ್‌ಗೆ ಸಂಗೀತ ನುಡಿ ನಮನ



ಮೈಸೂರು, ಫೆ12(ಜಿಎ)– ಮೈಸೂರಿನ ಕಲಾಮಂದಿರದ ಆವರಣದಲ್ಲಿರುವ ಕಿರುರಂಗ ಮಂದಿರದಲ್ಲಿ ಮೈಸೂರು ಚೀನೀ ರಂಗ ಬಳಗದ ವತಿಯಿಂದ ಭಾನುವಾರ ಸಂಜೆ ಇತ್ತೀಚೆಗೆ ನಿಧನರಾದ ರಂಗ ಗೀತೆಗಳ ಹಿರಿಯ ಸಂಗೀತ ಸಂಯೋಜಕ ಶ್ರೀನಿವಾಸ್ ಭಟ್ (ಚೀನೀ ಮಾಮ) ಅವರಿಗೆ ಸಂಗೀತ ನುಡಿ ನಮನ ಸಲ್ಲಿಸಲಾಯಿತು.

ಮೈಸೂರು ಚೀನೀ ರಂಗ ಬಳಗ ನಿರ್ಮಿಸಿದ್ದ ಚೀನೀಯವರ ಕುರಿತ ನುಡಿ ನಮನ ಸಾಕ್ಷ್ಯ ಚಿತ್ರದ ಮೂಲಕ ನಾಡಿನ ಪ್ರಸಿದ್ಧ ರಂಗಕರ್ಮಿಗಳು, ಕಲಾವಿದರು, ನಿರ್ದೇಶಕರು, ಸಂಗೀತ ಸಂಯೋಜಕರು ನುಡಿ ನಮನ ಸಲ್ಲಿಸಿದ್ದ ಸಾಕ್ಷ್ಯ ಚಿತ್ರವನ್ನು ಪ್ರದರ್ಶಿಸಲಾಯಿತು.

ಈ ವೇಳೆ ಹಿರಿಯ ರಂಗಕರ್ಮಿ ಬಸವಲಿಂಗಯ್ಯ ಮಾತನಾಡಿ, ಕನ್ನಡ ರಂಗಭೂಮಿಯಲ್ಲಿ ಚೀನೀ ಎಂದೇ ರಂಗಭೂಮಿಯಲ್ಲಿ ಹೆಸರುವಾಸಿಯಾಗಿದ್ದ ಶ್ರೀನಿವಾಸ್ ಭಟ್ ಬಿ.ವಿ.ಕಾರಂತರ ಬಲಗೈ ಎಂದೇ ಪ್ರಖ್ಯಾತಿಯಾಗಿದ್ದವರು. ಅವರ ಅಗಲಿಕೆಯಿಂದ ಕಾರಂತರ ಅಧ್ಯಾಯವೇ ಅಗಲಿಕೆಯಾದಂತೆ ಭಾಸವಾಗುತ್ತಿದೆ.

ಮಲೆಗಳಲ್ಲಿ ಮದುಮಗಳು ನಾಟಕ ಸೇರಿದಂತೆ ಅನೇಕ ನಾಟಕಗಳಿಗೆ ಜನಪದ ದಾಟಿಯ ಸಂಗೀತ ಸಂಯೋಜನೆ ಮಾಡಿದ್ದು, ಕರ್ನಾಟಕದ ಯಾವುದೇ ನಾಟಕ ಆಗಲಿ ಅದರಲ್ಲಿ ಚೀನೀಯ ಪಾತ್ರ ಇರುತ್ತಿತ್ತು ಎಂದು ನೆನೆದರು.

ಕನ್ನಡ ಚಿತ್ರರಂಗದ ಗಾಯಕ ಹಾಗೂ ಸಂಗೀತ ನಿರ್ದೇಶಕರಾದ ಗುರುಕಿರಣ್ ಮಾತನಾಡಿ, ಚೀನೀ ಅವರು ನನಗೆ ಹಲವಾರು ವರ್ಷಗಳಿಂದ ಚಿರಪರಿಚಿತರಾಗಿದ್ದು, ಮನರಂಜನೆಗೆ ಕೊರತೆಯಿದ್ದ ಸಂದರ್ಭದಲ್ಲಿ ಆರ್ಕೆಸ್ಟ್ರಾದಲ್ಲಿ ಗೀಟಾರ್ ಮೂಲಕ ಮೋಡಿ ಮಾಡುತ್ತಿದ್ದರು. ಅನೇಕ ಬಾರಿ ಇವರು ಗೀಟಾರ್ ನುಡಿಸುವುದನ್ನು ನಾನು ಹತ್ತಿರದಿಂದ ಕೇಳಿದ್ದೇನೆ. ಚೀನೀ ಇಲ್ಲವೆಂಬ ಮಾತು ಮನಸ್ಸಿಗೆ ಸಾಕಷ್ಟು ನೋವು ಉಂಟು ಮಾಡಿದೆ ಎಂದು ಅವರ ನೆನಪನ್ನು ಮೆಲಕು ಹಾಕಿದರು.

ಒಂದು ವ್ಯಕ್ತಿತ್ವ ಕುಗ್ಗಿದರೆ ಮನಸ್ಸು ಕುಗ್ಗುತ್ತದೆ. ಹಾಗೇ ಚೀನೀ ಅವರ ನಿಧನದಿಂದ ಮೈಸೂರಿನ ರಂಗ ಪ್ರೇಮಿಗಳಿಗೆ ನಷ್ಟ ಆಗಿದೆ ಎಂದು ರಂಗಾಯಣದ ಮಾಜಿ ನಿರ್ದೇಶಕ ಜನಾರ್ಧನ್ ಜನ್ನಿ ತಿಳಿಸಿದರು.

ನಟ ಮಂಡ್ಯ ರಮೇಶ್ ಮಾತನಾಡಿ, ಮಾನವೀಯ ಮೌಲ್ಯಗಳಿಂದ ಚೀನೀ ಹೆಸರುವಾಸಿಯಾಗಿದ್ದ ಚೀನೀಯವರ ಸಂಗೀತದಲ್ಲಿಯೂ ಮಾನವೀಯತೆ ಎದ್ದು ಕಾಣುತ್ತಿದ್ದವು ಎಂದರು.

ನಂತರ ಹಿರಿಯ ರಂಗಕರ್ಮಿಗಳಾದ ರಾಜೇಶ್ವರಿ ವರ್ಮ, ಪ್ರಸನ್ನ ಸೇರಿದಂತೆ ಅನೇಕರು ನುಡಿ ನಮನ ಸಲ್ಲಿಸಿದರು. ರಿಥಂ ತಂಡದ ವತಿಯಿಂದ ಚೀನೀಯವರಿಗೆ ರಂಗ ಗೀತಗಳ ಮೂಲಕ ಗೌರವ ಸಲ್ಲಿಸಿದರು.